


# ದೈವಿಕ ಕ್ರಮ

## ನಗರ ವ್ಯಾಪ್ತಿ ಸಭೆಗಳಲ್ಲಿ

ಅಲಿಷ್ ರಾಯ್‌ಚುರ್

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ  ಮತ್ತು ಹಂಚಿಕೆ : **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಜುಲೈ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಥ್ ಡಿಸೈನ್ಸ್

Contact Information:
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - Divine Order)

# ದೈವಿಕ ಕ್ರಮ

## ನಗರ ವ್ಯಾಪ್ತಿ ಸಭೆಗಳಲ್ಲಿ

## ವಿಷಯ ಸೂಚಿ


| | |
|---|---|
| ಪೀಠಿಕೆ | 1 |
| 1: ಪಟ್ಟಣ ವ್ಯಾಪ್ತಿಯ ಸಭೆಗಳು ಹಾಗೂ ಸ್ಥಳೀಯ ಸಭೆಗಳು | 5 |
| ಸಿಂಹಾಸನ ಕೊಠಡಿಯಿಂದ ನಗರ ವ್ಯಾಪ್ತಿ ಸಭೆಗಳ ಒಂದು ನೋಟ | 7 |
| ದೈವಿಕ ಕ್ರಮವನ್ನು ಅರ್ಥಮಾಡಿಕೊಳ್ಳುವುದು | 9 |
| ದೇವರ ಮನೆಯಲ್ಲಿ ಕ್ರಮಬದ್ಧವಾದ ನಡವಳಿಕೆ | 14 |
| ಕುರುಬನೂ ಮತ್ತು ಕುರಿಯ ನಡುವಣ ಆತ್ಮೀಕ ಸಂಪರ್ಕ | 15 |
| ಪರಸ್ಪರ ಪೂರಕವೇ ಹೊರತು ವಿರುದ್ಧದ ಸ್ಪರ್ಧೆಯಲ್ಲ | 16 |
| 2: ಸೇವೆಯಲ್ಲಿನ ನೈತಿಕತೆ | 19 |
| ದೇವರ ಸೇವಕರು ಪಾಲಿಸಬೇಕಾದ ಗುಣಮಟ್ಟ | 21 |
| ಸುಧಾರಣೆ ಮಾಡುವುದು ಮತ್ತು ತಿದ್ದುವುದೇ ಹೊರತು ದೂಷಿಸುವುದಲ್ಲ | 22 |
| ಸಂರಕ್ಷಣೆಯೇ ಹೊರತು ಹತೋಟಿಯಲ್ಲಿಟ್ಟುಕೊಳ್ಳುದಲ್ಲ | 23 |
| ದೇವಜನರೊಂದಿಗೆ ಸಮಾಲೋಚನೆ | 26 |
| ಸುಳ್ಳು ಹಕ್ಕುಗಳು, ಉತ್ಪ್ರೇಕ್ಷೆಗಳು ಮತ್ತು ಎಲ್ಲೆ ಮೀರಿದುದು | 29 |
| ಪ್ರವಾದಿಸುವುದೋ? ಅಥವಾ ಸುಳ್ಳು ಪ್ರವಾದಿಸುವುದೋ? | 31 |
| ಮತ್ತೊಬ್ಬರಲ್ಲಿ ನೀವು ದೀನಭಾವವುಳ್ಳವರಾಗಿರಿ | 33 |
| ನಿಮ್ಮ ಸಹೋದರರ ಬಗ್ಗೆ ನೀವು ಏನು ಹೇಳುತ್ತೀರಿ? ಎಚ್ಚರಿಕೆಯಾಗಿರಿ | 35 |
| ವಿಮರ್ಶೆಯನ್ನು ನಿರ್ವಹಿಸುವುದು | 36 |
| ಹೊಗಳಿಕೆಯ ಬಗ್ಗೆ ಎಚ್ಚರದಿಂದಿರಿ | 38 |
| ಆತ್ಮಿಕ ಹೊದಿಕೆಯೋ ಅಥವಾ ಭಕ್ತಿಯ ಮುಖವಾಡವೋ? | 40 |
| ನಿಜವಾಗಿ ಹಣ ಎಲ್ಲಿ ವ್ಯಯವಾಗುತ್ತಿದೆ? | 42 |
| ಸಭೆಗಳು ವಿಶ್ವಾಸಿಗಳ ಜವಾಬ್ದಾರಿಯನ್ನು ಹಿಡಿತದಲ್ಲಿಡಬೇಕು | 42 |
| ಇತರರ ದುಡಿಮೆಯ ಲಾಭದಲ್ಲಿ ಭಾಗಿಗಳಾಗುವುದು | 44 |
| ಅತಿಥಿ ಸಂದೇಶಕರಾಗಿ ಸೇವೆ ಸಲ್ಲಿಸುವುದು | 48 |
| ಪಟ್ಟಣ ವ್ಯಾಪ್ತಿಯ ಸಭೆಗಳಲ್ಲಿನ ಸೇವೆಯಲ್ಲಿರಬೇಕಾದ ಕ್ರಮಬದ್ಧವಾದ ನಡವಳಿಕೆ | 51 |
| ನೀವು ಏನನ್ನು ಉಪದೇಶಿಸುತ್ತೀರೋ ಅದರ ಬಗ್ಗೆ ಎಚ್ಚರ ವಹಿಸಿ | 52 |

ಅಪ್ಪಣೆ ಕೊಡುವಾತನು ಕರ್ತನೇ ಆಗಿದ್ದಾನೆ 54
ನಮ್ಮ ಸೇವೆಯ ರುಜುವಾತುಗಳು 55
ಅಪರಾಧಕ್ಕೆ ಆಸ್ಪದ ಕೊಡದಿರುವುದು 56
ಎಲ್ಲಾ ಸಭೆಗಳ ಮಧ್ಯದಲ್ಲಿ ಸ್ತುತಿಸುವುದು 57

**3: ವಿಶ್ವಾಸಿಗೆ ಇರಬೇಕಾದ ಕ್ರಮಬದ್ಧ ನಡತೆ 61**
ಕುರುಬರು ಮತ್ತು ಪೋಷಕರು 63
ಕುರುಬನ ದೊಣ್ಣೆಯೂ ಮತ್ತು ಕೋಲೂ 65
ಕುರುಬನನ್ನೇ ನಡೆಸುವ ಕುರಿ 66
''ಸಭಾಪಾಲಕರೇ ನಿಮ್ಮನ್ನು ನಾನು ಒಪ್ಪುವುದಿಲ್ಲ.'' 68
ದೇವರು ನನಗೆ ಹೇಳಿದ್ದು 69
ನಿಜವಾಗಿ ಸಲ್ಲಬೇಕಾದ ನಿಮ್ಮ ದಶಾಂಶವನ್ನು ಕೊಡುವುದು 71
ಪ್ರವೇಶಿಸುವುದು ಮತ್ತು ಬಿಟ್ಟು ಬಿಡುವುದು ಹೇಗೆ ಎಂಬುದಾಗಿ ಕಲಿಯುವುದು. 72
ಸುಲಭವಾಗಿ ಮೋಸ ಹೋಗಬೇಡಿ 74
ಬೇಧಗಳನ್ನು ಬಿತ್ತಬೇಡಿ 76
ಪಟ್ಟಣದ ವ್ಯಾಪ್ತಿಯ ಮತ್ತು ಇತರ ಸೇವೆಗಳ ಮೂಲಕ ಸ್ವೀಕರಿಸುವಿಕೆ 77
ಆತ್ಮೀಕ ಅಧಿಕಾರವನ್ನು ಗೌರವಿಸಿ 78

**4: ಎಲ್ಲಿ ಕ್ರಮಬದ್ಧವಿರುತ್ತದೋ ಅಲ್ಲಿ ಹೆಚ್ಚಳವಿರುತ್ತದೆ 81**
ದೈವಿಕ ಕ್ರಮ ಹೆಚ್ಚಳವನ್ನುಂಟು ಮಾಡುತ್ತದೆ 83
ಐಕ್ಯತೆಯ ಮೌಲ್ಯಗಳು 84
ಶಾಂತಿಯ ಕರಾರುಗಳು 85
ಮೇರೆಗಳಿವೆ ಆದರೂ ಸರ್ವ ಸಂಪೂರ್ಣ ಸ್ವತಂತ್ರ 86
ಸಭೆಗಳ ಮಧ್ಯೆ ಸಂಪರ್ಕ ಸೇತುವೆಯ ನಿರ್ಮಾಣ 87
ಭಿನ್ನಾಭಿಪ್ರಾಯಗಳನ್ನು ಬಗೆ ಹರಿಸುವುದು ಮತ್ತು ಅಶಕ್ತರನ್ನು ಬಲ ಪಡಿಸುವುದು 87
ಪಟ್ಟಣ ವ್ಯಾಪ್ತಿಯ ಸಭೆಗಳನ್ನು ಪೋಷಿಸುವುದು 88
ರಾಜ್ಯಾಧಿಕಾರದ ಭಾವನೆಗಳನ್ನು ಅಭಿವೃದ್ಧಿಗೊಳಿಸುವುದು 89

# ಮನ್ನಣೆಗಳು

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆಯ ವಿದ್ಯಾರ್ಥಿಗಳಿಗೆ ನನ್ನ ವಂದನೆಗಳನ್ನು ತಿಳಿಸಲು ಅಪೇಕ್ಷಿಸುತ್ತಾನೆ. ನಗರ ವ್ಯಾಪ್ತಿ ಸಭೆಗಳಲ್ಲಿ ದೈವಿಕ ಕ್ರಮದ ವಿಷಯಗಳ ಕುರಿತು ಉಪಯುಕ್ತವಾದ ಚರ್ಚೆಗಳಿಗಾಗಿ ನನ್ನ ವಂದನೆಗಳನ್ನು ತಿಳಿಸಲು ಅಪೇಕ್ಷಿಸುತ್ತೇನೆ. ಈ ಕೈ ಪಿಡಿಯನ್ನು ಪರಿಶೀಲಿಸಲು ಸಮಯ ತೆಗೆದುಕೊಂಡಂತಹ ಮತ್ತು ಉಪಯುಕ್ತ ಪ್ರತಿಕ್ರಿಯೆ ನೀಡಿದಂತಹ ಬೆಂಗಳೂರಿನ ಆಲ್‌ಪೀಪಲ್ಸ್ ಸಭೆಯ ಸೇವಾ ನಾಯಕರುಗಳಿಗೆ ನನ್ನ ವಂದನೆ ತಿಳಿಸಲು ಬಯಸುತ್ತೇನೆ. ಅವರ ಚಿತ್ತಪೂರ್ವಕವಾದ ಭಾಗವಹಿಸುವಿಕೆ ಮತ್ತು ಉಪಯುಕ್ತ ಸೂಕ್ಷ್ಮ ಪರಿಜ್ಞಾನದಿಂದ ನಾನು ಪ್ರೋತ್ಸಾಹಿಸಲ್ಪಟ್ಟಿದ್ದೇನೆ. ಅವರ ಪ್ರತಿಕ್ರಿಯೆ, ವಿಚಾರಗಳು ಹೇಳಿಕೆಗಳು ಈ ಪುಸ್ತಕದ ಪ್ರಾರಂಭಿಕ ಕಾರ್ಯಗಳನ್ನು ಸುಧಾರಿಸಲು ಸಹಾಯವಾಯಿತು ಮತ್ತು ಇದು ಅಧಿಕವಾಗಿ ಪೂರ್ಣಗೊಳ್ಳುವಂತೆ ಮಾಡಿತು.

ಈ ಕೆಳಗಿನ ಜನರು ಪ್ರಾರಂಭಿಕ ಕೈ ಪಿಡಿಯನ್ನು ಪರಿಶೀಲಿಸಿ ಪ್ರೋತ್ಸಾಹಕರವಾದ ಪ್ರತಿಕ್ರಿಯೆಯನ್ನು ಒದಗಿಸಿದ್ದಾರೆ: ಝೂಂಪೆ ಸಲೋಮಿ, ರಾಕೇಶ ಶ್ರೀ ವಾತ್ಸವ ಸ್ಟೀಫನ ಬೆನ್ನಿ, ರೆಜಿ ವರ್ಗೀಸ್, ಟೀನಾ ವರ್ಗೀಸ್, ಕುರಿಯನ್ ಕೋಸಿ, ಸಿ.ಎಸ.ಎನ್. ರಾವ್, ಜಿ.ರತ್ನ ಕುಮಾರ್ ಮತ್ತು ಆ್ಯಂಡ್ರೀವ್ ಟೇಲರ್ (ಏ.ಪಿ.ಟಿ ಫೌಂಡೇಷನ್)

## ಪೀಠಿಕೆ

ಕೇವಲ 12 ವರ್ಷದ ಬಾಲಕನಾಗಿರುವಾಗಲೇ ದೇವರ ವಾಕ್ಯೋಪದೇಶ ಪ್ರಾರಂಭಿಸಿದ ನನಗೆ ಸಂಪೂರ್ಣ ಆಸಕ್ತಿ ಇದ್ದರೂ ಸಾಕಷ್ಟು ಜ್ಞಾನವಿಲ್ಲದಿದ್ದರಿಂದ ನನ್ನ ಮುಂಚಿನ ಸೇವಾ ದಿನಗಳಲ್ಲಿ ಅನಿವಾರ್ಯವಾಗಿ ದೈವಿಕ ಕ್ರಮಗಳಿಂದ ಹೊರತಾದ ಅನೇಕ ಕಾರ್ಯಗಳನ್ನು ಮಾಡಿದೆ. ಅನೇಕ ವೇಳೆ ನಮ್ಮ ಹಲವಾರು ತಪ್ಪುಗಳಿಂದ ನಾವು ಒಳ್ಳೆಯದನ್ನು ಕಲಿಯುವ ಸಾಧ್ಯತೆ ಇದೆ ಎಂಬುದು ತಿಳಿದು ಬಂತು. ಅಲ್ಲದೆ ಹೇಗೆ. ಒಬ್ಬ ಒಳ್ಳೇ ಕ್ರೈಸ್ತನಾಗಿ ಮತ್ತು ದೇವರ ಸೇವೆಯಲ್ಲಿ ಒಳ್ಳೇ ಸೇವಕನಾಗಿ ರೂಪುಗೊಳ್ಳಬಹುದು ಎಂಬುದನ್ನು ಕಲಿತೆನು. ವೈಯಕ್ತಿಕವಾಗಿ ನಾನು ನನ್ನ ಸೇವೆಯ ಮುಂಚಿನ ದಿನಗಳಲ್ಲಿ ಯಾವುದೋ ಒಂದು ಹಂತದಲ್ಲಿ ಕ್ರಮವಿಲ್ಲದೆ ನಡೆದುಕೊಂಡದ್ದಕ್ಕಾಗಿ ಅಂದಿನ ಅಪರಾಧಿ ಮನೋಭಾವ ಈಗಲೂ ನನ್ನನ್ನು ಕಾಡುತ್ತದೆ. ನನ್ನ ಪ್ರತಿ ತಪ್ಪುಗಳು ನನಗೆ ಅಮೂಲ್ಯವಾದ ಪಾಠ ಕಲಿಸಿವೆ. ನನ್ನ ಸೇವೆಯ ಪ್ರಾರಂಭದ ದಿನಗಳಲ್ಲಿ ನನ್ನ ಪ್ರೀತಿಯ ಪತ್ನಿ ಆ್ಯಮಿಯಿಂದ ಸ್ವೀಕರಿಸಿದ ತಿದ್ದು ಪಡಿಗಳನ್ನು ಈಗಲೂ ನಾನು ಜ್ಞಾಪಿಸಿಕೊಳ್ಳುತ್ತೇನೆ ಪ್ರತಿಸಾರಿ ತಪ್ಪು ಮಾಡಿದಾಗಲೂ ಪಶ್ಚಾತ್ತಾಪ ಪಡುತ್ತಿದ್ದೆನು. ಆದರೆ ಕೂಡಲೇ ಚೇತರಿಸಿಕೊಂಡು ಜ್ಞಾನದ ಕಡೆಗೆ ಸಾಗುತ್ತಾ ಬಂದೆನು.

ಇಲ್ಲಿಯವರೆಗಿನ ನನ್ನ 25 ವರ್ಷಗಳ ಕ್ರಿಸ್ತೀಯ ಸೇವೆಯಲ್ಲಿ ಒಂದಂತೂ ನಿಜ ಅದೇನೆಂದರೆ ನಾನು ಪ್ರಯಾಣಿಸಬೇಕಾದ ದೂರ ಇನ್ನೂ ಬಹಳಷ್ಟಿದೆ. ಭಾರತ ದೇಶದ ಅನೇಕ ಭಾಗಗಳೂ ಸೇರಿದಂತೆ ಅಮೆರಿಕ ಸಂಯುಕ್ತ ಸಂಸ್ಥಾನ, ಪ್ರಪಂಚದ ಇನ್ನಿತರ ದೇಶಗಳಾದ ಅಲ್ಬಾನಿಯಾ, ಈಕ್ವೆಡಾರ ಮುಂತಾದ ಸ್ಥಳಗಳಲ್ಲಿ, ಮಲೇಷಿಯ, ಇಂಡೋಷಿಯ ಮತ್ತು ಫಿಜಿ ದ್ವೀಪಗಳಲ್ಲಿ ನನಗೆ ದೊರೆತ ಸೇವೆಯ ಸಂದರ್ಭಗಳು, ಅನೇಕ ವಿಶಿಷ್ಟ ಸಂಗತಿಗಳನ್ನು ಗಮನಿಸುವಂತಹ ಅವಕಾಶಗಳನ್ನು ನೀಡಿವೆ. ಹಾಗೆಯೇ ಅನುಭವದ ಜೊತೆಗೆ ಸಭೆಗಳು, ಸಭಾ ಸೇವಕರು ಮತ್ತು ವಿಶ್ವಾಸಿಗಳು ಹೇಗೆ ತಮ್ಮ ತಮ್ಮ ಸ್ಥಳಗಳಲ್ಲಿ ವರ್ತಿಸುತ್ತಾರೆಂಬುದೂ ಸಹ ತಿಳಿದು ಬಂದಿದೆ. ಇದರಿಂದ ಬಹುಪಾಲು ಎಲ್ಲಾ ಸ್ಥಳಗಳಲ್ಲಿ ಸೇವಕರಲ್ಲಿ, ಸಭೆಗಳು ಮತ್ತು ವಿಶ್ವಾಸಿಗಳಲ್ಲಿ ನಿಜವಾದ ದೈವಿಕ ಕ್ರಮದ ಬಗ್ಗೆ. ಸಾಕಷ್ಟು ಜ್ಞಾನದ ಕೊರತೆಯಿರುವುದು ತಿಳಿದು ಬಂತು. ಅನೇಕ ವೇಳೆ ದೇವರ ಸೇವಕರಾದ ನಾವು ಮತ್ತು ವಿಶ್ವಾಸಿಗಳೂ ಸಹ ದೈವಿಕ ಕ್ರಮಗಳನ್ನು ಬಿಟ್ಟು ಬಿಟ್ಟು ಸಂದರ್ಭೋಚಿತವಲ್ಲದ ''ಕೆಟ್ಟರುಚಿಯನ್ನು'' ಕೊಡಬಲ್ಲ ಸಂಗತಿಗಳನ್ನು ಹೇಳುವವರು ಮತ್ತು ಮಾಡುವವರೂ ಆಗಿದ್ದೇವೆ. ಒಂದು

ವೇಳೆ ಸಮರ್ಪಕವಾದ ದೈವಿಕ. ಕ್ರಮಗಳನ್ನು ಅರ್ಥ ಮಾಡಿಕೊಂಡು ನಮ್ಮ ಸಭೆಗಳಲ್ಲಿ ಅನುಷ್ಠಾನಕ್ಕೆ ತಂದರೆ ಬಹುಶಃ ಈಗ ನಮ್ಮದೇ ಆದ ನಡವಳಿಕೆಗಳಿಂದ ಪ್ರಕಟವಾಗುತ್ತಿರುವ ತಾತ್ಸಾರ ಮನೋಭಾವ ಕೊನೆಗಾಣಿಸಬಹುದೋ ಏನೋ?

ಒಂದು ವೇಳೆ ದೇವಜನರು ದೈವಿಕ ಕ್ರಮವನ್ನು ಅನುಸರಿಸಿ ನಡೆಯುವುದನ್ನು ಕಲಿತರೆ ಖಂಡಿತವಾಗಿಯೂ ಸಭೆಗಳ, ಸಭಾ ಸೇವಕರ, ವಿಶ್ವಾಸಿಗಳ ಮತ್ತು ಸೇವೆಯ ಮಧ್ಯದಲ್ಲಿ ಇರುವ ಯಾವುದೇ ಜಗಳ, ಮನಸ್ತಾಪ, ಭೇದಗಳು ಮತ್ತು ಅಹಿತಕರವಾದ ಸ್ಪರ್ಧೆಗಳು ಕಡಿಮೆಯಾಗಬುದೆಂದು ನಾನು ನಂಬುತ್ತೇನೆ. ಈ ಉದ್ದೇಶದಿಂದಲೇ ಈ ಪುಸ್ತಕವನ್ನು ಹೆಚ್ಚು ಮುತುವರ್ಜಿಯಿಂದ ಮತ್ತು ಪ್ರಾಮಾಣಿಕವಾದ ಪ್ರಯತ್ನದಿಂದ ಬರೆದು ಮುದ್ರಿಸಲಾಗಿದೆ. ಇದರ ಒಂದೇ ಉದ್ದೇಶವೇನೆಂದರೆ ಸಭೆಗಳಲ್ಲಿ ವಿಶ್ವಾಸಿಗಳ ಮತ್ತು ಸೇವಕರುಗಳ ನಡುವೆ, ಪಟ್ಟಣ ವ್ಯಾಪ್ತಿಯ ಸಭೆಗಳು ಮತ್ತು ಅನೇಕ ಸಮುದಾಯಗಳ ನಡುವೆ ಹಾಗೂ ಸ್ಥಳೀಯ. ಭೌಗೋಳಿಕ ಪ್ರಾಂತದ ಎಲ್ಲಾ ಸಭೆಗಳಲ್ಲಿ ಹೀಗೆ ಒಟ್ಟಾರೆ ದೈವಿಕ ಕ್ರಮವನ್ನು ಅಸ್ತಿತ್ವದಲ್ಲಿ ಕಾಣುವುದೇ ಆಗಿದೆ. ಯಾಕೆಂದರೆ ನಾವೆಲ್ಲರೂ ಯಾವುದೇ ಸ್ಥಳದಲ್ಲಿದ್ದರೂ, ಯಾವುದೇ ಸಮುದಾಯಕ್ಕೆ ಸೇರಿದ್ದರೂ ಸಭೆಯಾಗಿ, ಸಭಾಸೇವಕರಾಗಿ ಮತ್ತು ವಿಶ್ವಾಸಿಗಳಾಗಿ ಪರಸ್ಪರ ಒಟ್ಟಿಗೆ ಅಸ್ತಿತ್ವದಲ್ಲಿರುವವರು ಮತ್ತು ಜೊತೆ ಜೊತೆಯಾಗಿ ಕೆಲಸ ಮಾಡುವವರೂ ಆಗಿದ್ದೇವೆ. ಈ ಪುಸಕ್ತದಲ್ಲಿ ಕೊಟ್ಟಿರುವ ಎಲ್ಲಾ ಮಾರ್ಗದರ್ಶನವೂ ಒಂದೇ ಉದ್ದೇಶದಿಂದ ಕೂಡಿದೆ. ಅದೇನೆಂದರೆ ಎಲ್ಲಾ ಕಾರ್ಯಗಳು ಸಭೆಯಲ್ಲಿ ಗೌರವಯುತವಾಗಿ ಮತ್ತು ಕ್ರಮದಿಂದ ಕೂಡಿರಬೇಕು ಮತ್ತು ನಡೆಯಬೇಕೆಂಬುದೇ ಆಗಿರುತ್ತದೆ.

ಈ ಸಂದರ್ಭದಲ್ಲಿ ನಾವು ತಿಳಿದುಕೊಳ್ಳಬೇಕಾದ ಇನ್ನೊಂದು ಪ್ರಾಮುಖ್ಯವಾದ ಅಂಶವೇನೆಂದರೆ ನಮಗಿಂತಲೂ ಕ್ರಿಸ್ತೀಯ ಸೇವೆಯಲ್ಲಿ ಹೆಚ್ಚಾಗಿ ಅನುಭವವುಳ್ಳ ಅನೇಕ ದೇವ ಜನರು (ಸ್ತ್ರೀ-ಪುರುಷರು) ನಮ್ಮ ಮಧ್ಯದಲ್ಲಿದ್ದಾರೆ. ಅವರು ಈ ಕೃತಿಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ನಮಗಿಂತಲೂ ಉಪಯುಕ್ತವಾದ ರೀತಿಯಲ್ಲಿ ವಿವರಿಸಬಲ್ಲರು ಎಂಬುದೇ. ಅಂತಹ ದೇವಜನರಿಗೆ ಗೌರವ ಸಲ್ಲಿಸಿ, ಈ ಕೃತಿಯನ್ನು ನಾವು ಬಿಡುಗಡೆ ಮಾಡುತ್ತಿದ್ದೇವೆ. ನಮಗಿರುವ ಒಂದೇ ಒಂದು ನಮ್ರವಾದ ಆಶೆ ಏನೆಂದರೆ ಪ್ರತಿ ಸಭೆಯು ಪಟ್ಟಣದಲ್ಲಾಗಲೀ ಗ್ರಾಮೀಣ ಪ್ರದೇಶದಲ್ಲಾಗಲೀ ಮತ್ತು ಯಾವುದೇ ಕ್ರೈಸ್ತ ಸಮುದಾಯವಾಗಲೀ ಕರ್ತನಾದ ಯೇಸುಕ್ರಿಸ್ತನು ಅಪೇಕ್ಷಿಸುವ ರೀತಿಯಲ್ಲಿ ಇರಬೇಕೆಂಬುದೆ. ಇದರಿಂದ ಕರ್ತನಿಗೆ ಸಕಲ ವಿಷಯಗಳಲ್ಲಿಯೂ ಮಾನ ಮಹಿಮೆಗಳು ಉಂಟಾಗುವುವು.

ಯೋವೇಲ 2:7-8

**ಅವು ಶೂರರಂತೆ ಓಡಾಡುತ್ತವೆ; ಯೋಧರ ಹಾಗೆ ಗೋಡೆಯೇರುತ್ತವೆ; ತಮ್ಮ ತಮ್ಮ ಸಾಲುಗಳಲ್ಲಿಯೇ ನಡೆಯುತ್ತವೆ, ಆ ಸಾಲುಗಳನ್ನು ಕಲಸುವುದಿಲ್ಲ. ಒಂದಕ್ಕೊಂದು ನೂಕಾಡುವುದಿಲ್ಲ, ತಮ್ಮ ತಮ್ಮ ಸಾಲುಗಳಲ್ಲಿಯೇ ನಡೆಯುತ್ತವೆ; ಆಯುಧಗಳ ನಡುವೆ ನುಗ್ಗುತ್ತವೆ, ಸಾಲುಗಳು ಒಡೆದು ಹೋಗುವುದಿಲ್ಲ.**

ಯೋವೇಲ 2:11

**ಯೆಹೋವನು ತನ್ನ ಸೈನ್ಯದ ಮುಂದೆ ದನಿಗೈಯುತ್ತಾನೆ; ಆತನ ದಂಡು ಬಹು ದೊಡ್ಡದು; ತನ್ನ ಮಾತನ್ನು ನೆರವೇರಿಸಿಕೊಳ್ಳುವಾತನು ಬಲಿಷ್ಠನಾಗಿದ್ದಾನೆ; ಯೆಹೋವನ ದಿನವು ಮಹತ್ತರವೂ ಅತಿಭಯಂಕರವೂ ಆಗಿದೆ; ಅದನ್ನು ತಾಳಿಕೊಳ್ಳುವವರು ಯಾರು?**

ಯಾರು ತಮಗೆ ನೇಮಿಸಲ್ಪಟ್ಟ ಸ್ಥಾನ ಮಾನಗಳಿಗೆ ಯೋಗ್ಯರಾಗಿ ನಡೆದು ಕ್ರಮಬದ್ಧವಾಗಿ ಮುಂದುವರಿಯುತ್ತಾರೋ ಅವರೇ ಕರ್ತನ ಸೈನ್ಯವಾಗಿ ರೂಪುಗೊಳ್ಳುತ್ತಾರೆ.

ದೈವಿಕ ಕ್ರಮ ನಮ್ಮ ಪರಿಣಾಮಕಾರಿತ್ವವನ್ನು ಹೆಚ್ಚಿಸುತ್ತದೆ.


ಜ್ಞಾನೋಕ್ತಿಗಳು 30:27

**ಮಿಡತೆಗಳಿಗೆ ಅರಸನಿಲ್ಲ. ಆದರೂ ಅವೆಲ್ಲಾ ದಂಡುದಂಡಾಗಿ ಹೊರಡುವವು**

ನಮ್ಮ ಅನುಭವಗಳನ್ನು ಹಂಚಿಕೊಳ್ಳುವಾಗ, ಯಾರಿಗಾದರೂ ಅಪಕೀರ್ತಿ ತರದಿರುವುದು ನಮ್ಮ ಗುರಿಯಾಗಿರುವುದರಿಂದ, ವೈಯಕ್ತಿಕವಾಗಿ ಅಥವಾ ಸಭೆಗಳಲ್ಲಿ ಹೆಸರುಗಳನ್ನು ನಾವು ಬಹಿರಂಗಪಡಿಸಲು ಬಯಸುವುದಿಲ್ಲ. ಇಂತಹ ಉದಾಹರಣೆ ಉಪಯೋಗಿಸುವುದರಿಂದ ಬೋಧಿಸುವುದು ನಮ್ಮ ಉದ್ದೇಶ. ಆದ್ದರಿಂದ ಸತ್ಯವೇದದ ಸತ್ಯಗಳು ದಿನನಿತ್ಯದ ಜೀವಿತಗಳಿಗೆ ಅನ್ವಯಗೊಳ್ಳುತ್ತವೆ.

ದೇವಜನರು ದೈವಿಕ ಕ್ರಮದಲ್ಲಿ ನಡೆಯುವುದನ್ನು ಕಲಿತರೆ, ಸೇವೆಗಳು ಮತ್ತು ವಿಶ್ವಾಸಿಗಳು ಸೇವಕರುಗಳು ಸಭೆಗಳ ಮಧ್ಯದಲ್ಲಿ ಸ್ಪರ್ಧೆ ವಿಭಾಗಗಳು ಮತ್ತು ವಿರಳವಾದ ಜಗಳಗಳು ಇರುತ್ತವೆ.

# 1



# ಪಟ್ಟಣ ವ್ಯಾಪ್ತಿಯ ಸಭೆ ಮತ್ತು ಸ್ಥಳೀಯ ಸಭೆಗಳು

## ಸಿಂಹಾಸನ ಕೊಠಡಿಯಿಂದ ನಗರ ವ್ಯಾಪ್ತಿ ಸಭೆಗಳ ಒಂದು ನೋಟ

ಪ್ರಕಟಣೆ 1.10-20

**ನಾನು ಕರ್ತನ ದಿನದಲ್ಲಿ ದೇವರಾತ್ಮವಶನಾಗಿ ನನ್ನ ಹಿಂದುಗಡೆ ತುತೂರಿಯ ಶಬ್ದದಂತಿರುವ ಮಹಾಶಬ್ದವನ್ನು ಕೇಳಿದೆನು. ಅದು – ನೀನು ನೋಡುವುದನ್ನು ಪುಸ್ತಕದಲ್ಲಿ ಬರೆದು ಎಫೆಸ, ಸ್ಮುರ್ನ, ಪೆರ್ಗಮ, ಥುವತ್ತೈರ, ಸಾರ್ದಿಸ್, ಫಿಲದೆಲ್ಫಿಯ, ಲವೊದಿಕೀಯ ಎಂಬೀ ಏಳು ಪಟ್ಟಣಗಳ ಸಭೆಗಳಿಗೆ ಕಳುಹಿಸಬೇಕೆಂದು ನುಡಿಯಿತು. ನನ್ನ ಸಂಗಡ ಮಾತಾಡುತ್ತಿದ್ದ ಶಬ್ದವು ಯಾರದೆಂದು ನೋಡುವುದಕ್ಕೆ ಹಿಂದಕ್ಕೆ ತಿರುಗಿದೆನು. ತಿರುಗಿದಾಗ ಏಳು ಚಿನ್ನದ ದೀಪಸ್ತಂಭಗಳನ್ನೂ ಆ ದೀಪಸ್ತಂಭಗಳ ಮಧ್ಯದಲ್ಲಿ ಮನುಷ್ಯಕುಮಾರನಂತೆ ಇರುವವನನ್ನೂ ಕಂಡೆನು. ಆತನು ನಿಲುವಂಗಿಯನ್ನು ತೊಟ್ಟು ಚಿನ್ನದ ಪಟ್ಟಿಯನ್ನು ಎದೆಗೆ ಕಟ್ಟಿಕೊಂಡಿದ್ದನು. ಆತನ ತಲೆಯ ಕೂದಲು ಬಿಳೀ ಉಣ್ಣೆಯಂತೆಯೂ ಹಿಮದಂತೆಯೂ ಬೆಳ್ಳಗಿತ್ತು. ಆತನ ಕಣ್ಣುಗಳು ಬೆಂಕಿಯ ಉರಿಯಂತೆಯೂ ಆತನ ಪಾದಗಳು ಕುಲುಮೆಯಲ್ಲಿ ಕಾಯಿಸಿದ ತಾಮ್ರದಂತೆಯೂ ಆತನ ಧ್ವನಿಯು ಜಲಪ್ರವಾಹದ ಘೋಷದಂತೆಯೂ ಇದ್ದವು. ಆತನ ಬಲಗೈಯಲ್ಲಿ ಏಳು ನಕ್ಷತ್ರಗಳಿದ್ದವು; ಆತನ ಬಾಯೊಳಗಿಂದ ಹದವಾದ ಇಬ್ಬಾಯಿ ಕತ್ತಿಯು ಹೊರಡುತ್ತಿತ್ತು. ಆತನ ಮುಖವು ಮಧ್ಯಾಹ್ನದಲ್ಲಿ ಪ್ರಕಾಶಿಸುವ ಸೂರ್ಯನಂತಿತ್ತು. ನಾನು ಆತನನ್ನು ಕಂಡಾಗ ಸತ್ತವನ ಹಾಗೆ ಆತನ ಪಾದಗಳ ಮುಂದೆ ಬಿದ್ದೆನು. ಆತನು ತನ್ನ ಬಲಗೈಯನ್ನು ನನ್ನ ಮೇಲಿಟ್ಟು–ಹೆದರಬೇಡ, ನಾನು ಮೊದಲನೆಯವನೂ ಕಡೆಯವನೂ ಸದಾ ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು, ಮತ್ತು ಇಗೋ ಯುಗ ಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ. ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ. ಆದುದರಿಂದ ನೀನು ಕಂಡವುಗಳನ್ನೂ ಈಗ ನಡೆಯುತ್ತಿರುವವುಗಳನ್ನೂ ಮುಂದೆ ಆಗಬೇಕಾದವುಗಳನ್ನೂ ಬರೆ. ನನ್ನ ಬಲಗೈಯಲ್ಲಿ ನೀನು ಕಂಡ ಏಳು ನಕ್ಷತ್ರಗಳ ಮತ್ತು ಏಳು ಚಿನ್ನದ ದೀಪಸ್ತಂಭಗಳ ಗೂಢಾರ್ಥವನ್ನು ವಿವರಿಸುತ್ತೇನೆ-ಆ ಏಳು ನಕ್ಷತ್ರಗಳು ಅಂದರೆ ಆ ಏಳು ಸಭೆಗಳ ದೂತರು: ಆ ಏಳು ದೀಪಸ್ತಂಭಗಳು ಅಂದರೆ ಆ ಏಳು ಸಭೆಗಳು.**

ಪ್ರಕಟನೆಗಳು 2:1

**ಎಫೆಸದಲ್ಲಿರುವ ಸಭೆಯ ದೂತನಿಗೆ ಬರೆ-ಏಳು ನಕ್ಷತ್ರಗಳನ್ನು ಬಲಗೈಯಲ್ಲಿ ಹಿಡಿದುಕೊಂಡು ಏಳು ಚಿನ್ನದ ದೀಪಸ್ತಂಭಗಳ ಮಧ್ಯದಲ್ಲಿ ತಿರುಗಾಡುವಾತನು ಹೇಳುವುದೇನೆಂದರೆ**

ದೇವರ ವಾಕ್ಯದ ಈ ಭಾಗಗಳಿಂದ ಕರ್ತನಾದ ಯೇಸುಕ್ರಿಸ್ತನು ಸಭೆಗಳ ಮಧ್ಯದಲ್ಲಿ ಇರುವಾತನು ಮತ್ತು ಸಭೆಗಳ ಮಧ್ಯದಲ್ಲಿ ತಿರುಗಾಡುವಾತನೂ ಆಗಿದ್ದಾನೆ ಎಂಬುದನ್ನು ಕಲಿಯುತ್ತೇವೆ. ಏಳು ಸಭೆಗಳ ದೇವದೂತರನ್ನು ಸೂಚಿಸುವ ಏಳು ನಕ್ಷತ್ರಗಳು ಸಭೆಗಳ ಪಾಲಕರುಗಳೇ ಆಗಿದ್ದಾರೆ. ದೇವ ದೂತರು ಎಂಬ ಶಬ್ದ ಮೂಲ ಗ್ರೀಕ್ ಭಾಷೆಯಲ್ಲಿ ''ಏಂಜಲೋಸ'' ಎಂದು ಕರೆಯಲಾಗಿದೆ. ಸ್ಟ್ರಾಂಗ್‌ರವರ ಶಬ್ದಕೋಶದ ಪ್ರಕಾರ ಇದರ ಅರ್ಥ ''ಸುದ್ದಿ ತರುವವನು.'' ಹಾಗಾಗಿ ದೂತರು ಅನ್ನುವ ಶಬ್ದದ ವಿಶೇಷ ಒಳ ಅರ್ಥ ''ಸಭೆಯ ಪಾಲಕರನ್ನೇ ಸೂಚಿಸುತ್ತದೆ''. ಹೊಸ ಒಡಂಬಡಿಕೆಯ ಅನೇಕ

ಭಾಗಗಳಲ್ಲಿ ಈ ಶಬ್ದವನ್ನೇ "ಸುದ್ದಿ ತರುವವರು" ಎಂಬುದಾಗಿ ಅರ್ಥೈಸಲಾಗಿದೆ (ಲೂಕ 7:24, ಲೂಕ 9:52, ಯಾಕೋಬ 2:25) ಇದರಿಂದ ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾದ ಸತ್ಯಾಂಶವೆಂದರೆ, ಏಳು ಸಭೆಗಳ ಏಳು ನಕ್ಷತ್ರಗಳು ಸ್ಥಳೀಯ ಸಭೆಗಳ ಸಭಾಪಾಲಕರುಗಳಿಗೆ ಸಾಂಕೇತಿಕವಾಗಿ ಸೂಚನೆಯಾಗಿದ್ದಾರೆ. ಕಾರಣ ಅವರು ಶುಭವಾರ್ತೆಯನ್ನು ಪ್ರಚುರ ಪಡಿಸುವವರಾಗಿದ್ದಾರೆ.

ಕರ್ತನಾದ ಯೇಸುವು ಸಭೆಗಳ ಸಭಾಪಾಲಕರುಗಳನ್ನು ತನ್ನ ಬಲಗೈಯಲ್ಲಿ ಹಿಡಿದಿದ್ದಾನೆ. ಆದ್ದರಿಂದ ಸ್ಥಳೀಯ ಸಭಾಪಾಲಕರುಗಳನ್ನು ದೈವಿಕವಾಗಿ ಸಂರಕ್ಷಿಸಲ್ಪಟ್ಟವರು ಭೂಲೋಕದಲ್ಲಿ ಯೇಸು ಕ್ರಿಸ್ತನ ಪ್ರತಿನಿಧಿಗಳೇ ಆಗಿದ್ದಾರೆ.

ಪಟ್ಟಣ (ವಿಸ್ತಾರವಾದ ಭೂಭಾಗ ಪ್ರದೇಶ ಅಥವಾ ಪ್ರಾಂತ್ಯ)ವನ್ನು ಕುರಿತು ಯೋಚಿಸುವಾಗ ಅನೇಕ ಸ್ಥಳೀಯ ಸಭೆಗಳು ಅದರಲ್ಲಿ ಸೇರಿರುವುದನ್ನು ಗಮನಿಸುತ್ತೇವೆ. ಪ್ರತಿಯೊಂದು ಸ್ಥಳೀಯ ಸಭೆಯು ಕರ್ತನು ತನಗೋಸ್ಕರ ಪ್ರತ್ಯೇಕಿಸಿಕೊಂಡ ಮತ್ತು ಪ್ರತಿಷ್ಠಿಸಿದ ಅಂತಹ ಸ್ಥಳದಲ್ಲಿ ಚಿನ್ನದ ದೀಪಸ್ತಂಭವಾಗಿದೆ. ಈ ಸಭೆಗಳಿಗೆ ಕರ್ತನಿಂದ ನೇಮಕವಾದ ಪ್ರತಿಯೊಬ್ಬ ಸಭಾಪಾಲಕನೂ ಕರ್ತನ ಬಲಗೈಯಲ್ಲಿರುವ ಒಂದು ನಕ್ಷತ್ರವೇ ಆಗಿರುತ್ತಾನೆ. ಕರ್ತನು ಸಭೆಗಳ ಮಧ್ಯದಲ್ಲಿ ಅಂದರೆ ದೀಪಸ್ತಂಭಗಳ ಮಧ್ಯದಲ್ಲಿ ತಿರುಗಾಡುವಾತನಾದ್ದರಿಂದ ಆತನೇ ಆ ಸಭೆಗಳ ಮೇಲ್ವಿಚಾರಕನಾಗಿದ್ದಾನೆ. ಆದ್ದರಿಂದ ಪ್ರತಿ ಸಭೆಯ ಸಭಾಪಾಲಕನ ಜೀವನ, ಕೆಲಸ, ಕಾರ್ಯಗಳು ಮತ್ತು ಸೇವೆ ಹಾಗೂ ಸಾಕ್ಷಿಯನ್ನು ಕುರಿತು ಆತನು ಲೆಕ್ಕ ಕೇಳುವಾತನಾಗಿದ್ದಾನೆ. (ಪ್ರಕಟಣೆ 2 ಮತ್ತು 3ನೇ ಅಧ್ಯಾಯ).

ಕ್ರಿಸ್ತನು ಸಭೆಗಳಲ್ಲಿ ಒಂದೇ ದೇಹವಾಗಿದ್ದಾನೆ. ಆದ್ದರಿಂದ ಪಟ್ಟಣದಲ್ಲಿರುವ ಎಲ್ಲಾ ಸಭೆಗಳು ಕ್ರಿಸ್ತನಿಗೆ ಸೇರಿದ ಒಂದೇ ದೇಹವಾಗಿವೆ. ಈ ಕಾರಣದಿಂದ ಪಟ್ಟಣ ವ್ಯಾಪ್ತಿಯ ಸಭೆಗಳು ಎನ್ನುವುದರ ವಿಶಾಲ ಅರ್ಥ ಒಂದೇ ದೇಹ ಮತ್ತು ಒಂದೇ ಸಭೆ. ಆದರೂ ಸಹ ಕರ್ತನು ಪಟ್ಟಣ ವ್ಯಾಪ್ತಿಯಲ್ಲಿ ಅನೇಕ ಚಿನ್ನದ ದೀಪ ಸ್ತಂಭಗಳನ್ನು (ಅಂದರೆ ಸ್ಥಳೀಯ ಸಭೆಗಳನ್ನು) ಮತ್ತು ಅನೇಕ ನಕ್ಷತ್ರಗಳನ್ನು (ಸಭಾ ಪಾಲಕರನ್ನು) "ಸಭೆಗಳನ್ನು ಕಾಯುವ ಕುರುಬನಂತೆ" ನೇಮಕ ಮಾಡಿದ್ದಾನೆ. ಅಪೊಸ್ತಲನಾದ ಪೌಲನು ಈ ಎಲ್ಲಾ ಸ್ಥಳೀಯ ಸಭೆಗಳನ್ನು "ಕ್ರಿಸ್ತನ ಸಭೆ" (ರೋಮಾಪುರದವರಿಗೆ 16:16) ಎಂದು ಒಗ್ಗೂಡಿಸುತ್ತಾನೆ. ಕ್ರಿಸ್ತನಿಂದಲೇ

ನೇಮಕವಾಗಿರುವ ಎಲ್ಲಾ ಸಭೆಗಳು ಕ್ರಿಸ್ತನಿಗೇ ಸಂಬಂಧಪಟ್ಟವುಗಳಾಗಿವೆ. ಕ್ರಿಸ್ತನು ಈ ಸ್ಥಳೀಯ ಸಭೆಗಳ ಮೂಲಕ ಈ ಲೋಕದಲ್ಲಿರುವ ರಕ್ಷಿಸಲ್ಪಡದ ಎಲ್ಲಾ ಜನರನ್ನು ರಕ್ಷಿಸಬೇಕೆಂಬ ಉದ್ದೇಶ ಉಳ್ಳವನಾಗಿದ್ದು ಅನೇಕ ಸೇವಾ ವರಗಳ್ಳುಳ್ಳಂತಹ ಅಪೊಸ್ತಲರು, ಪ್ರವಾದಿಗಳು, ಸಭಾಪಾಲಕರು, ಬೋಧಕರು ಮತ್ತು ಸುವಾರ್ತಿಕರು ಇವರನ್ನು ಎಬ್ಬಿಸಿದ್ದಾನೆ.

ಕ್ರಿಸ್ತನ ಶರೀರವೆಂಬ ಸಭೆಯನ್ನು ಕುರಿತು ನಾವು ಸರಿಯಾಗಿ ವಿವೇಚಿಸಿ ತಿಳಿದುಕೊಳ್ಳುವುದು ಅಗತ್ಯ. ನಾವೆಲ್ಲರೂ ಒಂದೇ ಸಭೆಯವರಾಗಿರುವುದರಿಂದ ಒಂದೇ ಶರೀರವಾಗಿದ್ದೇವೆಂಬುದನ್ನು ನೆನೆಪಿಟ್ಟುಕೊಂಡು ಅದೇ ಸಂದರ್ಭದಲ್ಲಿ ಕ್ರಿಸ್ತನಿಂದಲೇ ನೇಮಕವಾದ ಅನೇಕ ಸಭೆಗಳು, ಕ್ರಿಸ್ತನೇ ನೇಮಿಸಿದ ಸಭಾಪಾಲಕರುಗಳು, ಸೇವೆಯಲ್ಲಿ ನಿಯೋಜಿತವಾದ ವಿವಿಧ ಸೇವೆಯ ವರಹೊಂದಿದವರು ಮತ್ತು ಕರ್ತನ ಸೇವೆಯಲ್ಲಿ ಸಹಭಾಗಿಗಳಾಗಿ. ಕೆಲಸಮಾಡುವವರು, ಹೀಗೆ ಎಲ್ಲರನ್ನೂ ಸಮತೋಲನದ ದೃಷ್ಟಿಯಲ್ಲಿ ಪರಿಗಣಿಸುವುದು ಪ್ರಾಮುಖ್ಯ. ಈ ಗಣನೆಯಲ್ಲಿ ಯಾವುದೇ ಒಂದು ಅಂಶದಲ್ಲಿಯಾದರೂ ನಾವು ಅಸಮರ್ಪಕವಾಗಿ ಅರ್ಥಮಾಡಿಕೊಳ್ಳುವುದು ಅಥವಾ ಅನ್ವಯಿಸಿಕೊಳ್ಳುವುದು ಅಥವಾ ಕ್ರಮವಿಲ್ಲದೆ ನಡೆದುಕೊಳ್ಳುವುದಾದರೆ ಅನೇಕ ಕೆಟ್ಟ ಪರಿಣಾಮಗಳನ್ನು ಅನುಭವಿಸಬೇಕಾಗುತ್ತದೆ.

## ದೈವಿಕ ಕ್ರಮವನ್ನು ಅರ್ಥಮಾಡಿಕೊಳ್ಳುವುದು

ಕ್ರಿಸ್ತನು ತನ್ನ ಸಭೆಯ ಎಲ್ಲಾ ಸಭಾಪಾಲಕರುಗಳು, ವಿಶ್ವಾಸಿಗಳು ಮತ್ತು ಎಲ್ಲಾ ಸಭೆಗಳು ತಾವಿರುವ ಸ್ಥಳದಲ್ಲಿ ಒಟ್ಟಾಗಿ ಕೂಡಿಕೊಂಡು ಒಂದೇ ಶರೀರವಾಗಿ ಕಾರ್ಯ ನಿರ್ವಹಿಸುವಂತೆ ದೈವಿಕ ಕ್ರಮವನ್ನು ಈ ಸಮೂಹದಲ್ಲಿ ನಿರೀಕ್ಷಿಸುತ್ತಾನೆ.

ವಸ್ತು ಸ್ಥಿತಿ ಏನೆಂದರೆ ಅನೇಕ ಮಂದಿ ಸೇವಕರುಗಳು, ಸಭಾಪಾಲಕರುಗಳು, ವಿಶ್ವಾಸಿಗಳು ಮತ್ತು ಸ್ಥಳೀಯ ಸಭೆಗಳಿಗೆ ದೈವಿಕ ಕ್ರಮದ ಕುರಿತು ಯಾವುದೇ ಬಗೆಯ ತಿಳುವಳಿಕೆ ಇಲ್ಲ. ಪ್ರತಿಯೊಬ್ಬರು ತಮ್ಮ ಮನಸ್ಸಿಗೆ ತೋಚುವ ಪ್ರಕಾರ ತಾವು ಸರಿ ಅಂದು ಕೊಂಡದ್ದನ್ನೇ ಮಾಡುವವರಾಗಿದ್ದಾರೆ. ಇದು ಸಭೆಗಳ ಮಧ್ಯದಲ್ಲಿ ಭಿನ್ನ ಬೇಧಗಳಿಗೆ, ಜಗಳ ಕಾದಾಟಗಳಿಗೆ ಮತ್ತು ನೋವಿಗೆ ಕಾರಣವಾಗಿರುತ್ತವೆ. ಅಂತಿಮವಾಗಿ ಈ ಬಗೆಯ ವರ್ತನೆಗಳು ಪಟ್ಟಣಗಳನ್ನು ಕ್ರಿಸ್ತನಿಗಾಗಿ ಗೆದ್ದುಕೊಳ್ಳುವುದರಲ್ಲಿ ಇಲ್ಲವೇ ಪರಿಣಾಮಕಾರಿಯಾಗಿ ಪ್ರಭಾವ ಬೀರುವುದರಲ್ಲಿ ಬಲಹೀನವಾಗುತ್ತವೆ.

ಹೊಸ ಒಡಂಬಡಿಕೆಯ ಅನೇಕ ಭಾಗಗಳಲ್ಲಿ ಸ್ಥಳೀಯ ಸಭೆಗೆ ಇಲ್ಲವೇ ಒಟ್ಟಾರೆ ಸಭೆಗಳಿಗೆ ನೇಮಕವಾದ ದೈವಿಕ ಕ್ರಮ ಸೂಚಿಸಿರುವುದನ್ನು ನಾವು ಕಾಣುತ್ತೇವೆ.

1 ಕೊರಿಂಥದವರಿಗೆ 7:17
**ಆದರೂ ಕರ್ತನು ಪ್ರತಿಯೊಬ್ಬನಿಗೆ ಯಾವ ಯಾವ ಸ್ಥಿತಿಯನ್ನು ನೇಮಿಸಿದ್ದಾನೋ, ಅಂದರೆ ದೇವರು ಕರೆಯುವಾಗ ಪ್ರತಿಯೊಬ್ಬನು ಯಾವ ಯಾವ ಸ್ಥಿತಿಯಲ್ಲಿ ಇದ್ದಾನೋ ಆಯಾ ಸ್ಥಿತಿಗೆ ಸರಿಯಾಗಿ ನಡೆದುಕೊಳ್ಳಲಿ. ಹೀಗೆ ಎಲ್ಲಾ ಸಭೆಗಳಲ್ಲಿಯೂ ಆಜ್ಞಾಪಿಸುತ್ತೇನೆ.**

"ಅಭಿಷೇಕ" ಎನ್ನುವ ("Ordain") ಶಬ್ದದ ಮೂಲ ಗ್ರೀಕ್ ಭಾಷೆಯಲ್ಲಿ ಡೆಯಟಾಸೋ ("Diatasso") ಸ್ಟ್ರಾಂಗ್ ರವರ ಶಬ್ದಕೋಶದ ಪ್ರಕಾರ "ಎಲ್ಲವನ್ನು ಸಮರ್ಪಕವಾಗಿ ವ್ಯವಸ್ಥೆಗೊಳಿಸುವುದು, ನಿರ್ದಿಷ್ಟವಾಗಿ ನಿಯೋಜಿಸುವುದು, ನಿರ್ದಿಷ್ಟವಾದ, ನೇಮಕವಾದ, ಆಜ್ಞಾಪಿಸಲ್ಪಟ್ಟ, ಕೊಡಲ್ಪಟ್ಟ, ಕ್ರಮಬದ್ಧವಾದ" ಅಧಿಕೃತವಾಗಿ ನೇಮಿಸು ಎಂಬುದಾಗಿ ವಿವರಿಸಲ್ಪಟ್ಟಿದೆ. ಇದು ಕರ್ತನಿಂದ ಸಭೆಗಳಿಗೆ ವ್ಯವಸ್ಥಿತವಾಗಿ ಅನುಸರಿಸಲು ನೇಮಿಸಿರುವ ದೈವಿಕ ಕ್ರಮ. ಇದು ಅಪೊಸ್ತಲನಾದ ಪೌಲನ ಮಾತುಗಳಲ್ಲಿ ಸಹ ಪ್ರಕಟವಾಗಿದೆ. ವಸ್ತುಸಂಗತಿಗಳನ್ನು ಅವರವರ ಆಸೆ ಆಕಾಂಕ್ಷೆಗಳಿಗೆ ಸರಿಹೊಂದುವಂತೆ ಬಿಡಲಾಗದು. ಯಾಕೆಂದರೆ ಪ್ರತಿಯೊಬ್ಬರೂ ಯೋಚಿಸುವುದು ತಮ್ಮದೇ ಸರಿ, ತಮ್ಮ ಮಾರ್ಗವೇ ಸರಿಯಾದದ್ದು ಮತ್ತು ತಾವೇ ಕ್ರಮಸ್ತರು ಎಂಬುದಾಗಿ.

1 ಕೊರಿಂಥದವರಿಗೆ 11:34
**ಒಬ್ಬನು ಹಸಿದರೆ ಅವನು ಮನೆಯಲ್ಲೇ ಊಟಮಾಡಲಿ; ನೀವು ಕೂಡಿ ಬಂದದ್ದು ನ್ಯಾಯ ತೀರ್ಪಿಗೊಳಗಾಗುವುದಕ್ಕೆ ಕಾರಣವಾಗಬಾರದು. ಮಿಕ್ಕಾದ ಸಂಗತಿಗಳನ್ನು ನಾನು ಬಂದಾಗ ಕ್ರಮಪಡಿಸುತ್ತೇನೆ.**

ಪುನಃ 1 ಕೊರಿಂಥದವರಿಗೆ 11:34ರಲ್ಲಿ ಪೌಲನು ಗ್ರೀಕ್ ಮೂಲದ ("*Diatasso*") "ಡಯಟಾಸೋ" ಎಂಬ ಶಬ್ದವನ್ನು ಬಳಸಿಕೊಂಡು ಕೊರಿಂಥ ಸಭೆಯ ಒಳಜೀವನದಲ್ಲಿ ಎಲ್ಲವೂ ಕ್ರಮಬದ್ಧವಾಗಿರಬೇಕೆಂದು ಸೂಚಿಸುತ್ತಾನೆ.

1 ಕೊರಿಂಥದವರಿಗೆ 14:33
**ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ.**

ಈ ವಚನದ ಹಿನ್ನಲೆ ಏನೆಂದರೆ ಈ ವಚನ ಸಾಂದರ್ಭಿಕವಾಗಿ ಆತ್ಮನ ವಿವಿಧ ವರಗಳನ್ನು ಉಪಯೋಗಿಸುವ ನಿರ್ದಿಷ್ಟವಾಗಿ ವಾಣಿಗಳನ್ನಾಡುವ ಹಾಗೂ ಪ್ರವಾದಿಸುವ ಮತ್ತು ದೇವರ ಸತ್ಯಾಂಶವನ್ನು ತಿಳಿಸಿಕೊಡುವ ಒಂದು ಬಗೆಯ ಸಾಮಾನ್ಯ ವಿವರಣೆಯಾಗಿರುತ್ತದೆ. ಗಲಿಬಿಲಿ, ಕ್ರಮವಿಲ್ಲದಿರುವುದು, ಅವ್ಯವಸ್ಥೆ ಮತ್ತು ನಿಯಮವಿಲ್ಲದಿರುವುದು, ಇವುಗಳು ದೇವರಿಂದ ಬಂದದ್ದಲ್ಲ. ದೇವರ ಗುಣಲಕ್ಷಣಗಳು ಅಲ್ಲ. ಇಲ್ಲವೇ ದೇವರ ಕಾರ್ಯ ವ್ಯಾಪ್ತಿಗೆ ಬರುವಂತಹದೂ ಅಲ್ಲ. ಆದ್ದರಿಂದ ಗಲಿಬಿಲಿ, ಕ್ರಮವಿಲ್ಲದಿರುವುದು, ಮತ್ತು ನಿಯಮವಿಲ್ಲದಿರುವುದು ಇವುಗಳು ಸ್ಥಳೀಯ ಸಭೆಗಳಿಗಾಗಲೀ ಇಲ್ಲವೇ ಪಟ್ಟಣ ವ್ಯಾಪ್ತಿಯ ಸಭೆಗಳಗಾಗಲೀ ಒಪ್ಪಲಾಗದ ವಿಷಯಗಳಾಗಿದೆ. ''ಶಾಂತಿ'' ಪದದ ಮೂಲ ಶಬ್ದ ಗ್ರೀಕ್ ಭಾಷೆಯಲ್ಲಿ ಐರೀನ್ (Eirene) ಪದದ ಅರ್ಥ ''ಒಂದುಗೂಡುವಿಕೆ.'' ಶಾಂತಿ-ಈ ಪದವನ್ನು ಅಲಂಕಾರಿಕವಾಗಿ ಭಾಷೆಯಲ್ಲಿ ಬಳಸುವಾಗ ''ಸಮೃದ್ಧ, ಸಮಾಧಾನ, ಪ್ರಶಾಂತತೆ, ವಿಶ್ರಾಂತಿ, ಪುನಃ ಒಂದಾಗುವುದು'' ಮುಂತಾದ, ಪಾರಿಭಾಷಿಕ ಅರ್ಥಗಳು ವಿಶಾಲವಾಗಿ ರೂಪುಗೊಳ್ಳುತ್ತವೆ. ಸಂತರಿಂದ ತುಂಬಿರುವ ಕ್ರೈಸ್ತ ಸಭೆಗಳು, ಸಕಲ ವಿಷಯಗಳಲ್ಲಿಯೂ ಕ್ರಮಬದ್ಧವಾದ ಐಕ್ಯತೆಯಿಂದಿದ್ದು ಸಾಮರಸ್ಯದಿಂದ ಕೂಡಿರಲೇಬೇಕು.

(ಗಮನಿಸಿ: 1 ಕೊರಿಂಥದವರಿಗೆ 14ರಲ್ಲಿ ಪ್ರಕಟವಾಗಿರುವಂತೆ ವಾಣಿಗಳನ್ನಾಡುವುದು ಮತ್ತು ಪ್ರವಾದಿಸುವುದೂ ಕೂಡ ದೈವಿಕ ಕ್ರಮದ ಒಂದು ಭಾಗವಾಗಿದೆ. ಆದರೆ ಇದರಲ್ಲಿನ ಒಂದು ವೈಪರೀತ್ಯವೇನೆಂದರೆ ಪ್ರತಿಯೊಬ್ಬರೂ ಬಲಾತ್ಕಾರವಾಗಿ ವಾಣಿಗಳನ್ನಾಡಲು ಪ್ರೇರೇಪಣೆಗೊಳ್ಳುತ್ತಿರುವುದು, ವಿವಿಧ ಭಾಷೆಗಳನ್ನಾಡುವ ಈ ವರವು ಆತ್ಮನ ವರವಾಗಿದ್ದು ಪರಿಶುದ್ಧಾತ್ಮನ ವಿಶಿಷ್ಟವಾದ ಕೊಡುಗೆಯಾಗಿದೆ. ನಿಜ, ಇದು ಯಾರೋ ಒಬ್ಬರಿಂದ ಕಲಿತ ಒಂದು ಅಪರಿಚಿತ ಭಾಷೆಯಲ್ಲ ಇಲ್ಲವೇ ಎಂದೂ ಕೇಳದ ಒಂದು ವಿಲಕ್ಷಣ ಶಬ್ದಗಳನ್ನು ಹೊರಡಿಸುವ ವಿಚಿತ್ರವಾದ ಸಾಮರ್ಥ್ಯವಲ್ಲ. ಆದ್ದರಿಂದ ಇದು ನಂಬಿಕೆಯಿಂದ ಪವಿತ್ರಾತ್ಮನ ಮೂಲಕ ಸ್ವೀಕರಿಸುವ ಒಂದು ಆಶ್ಚರ್ಯಕರವಾದ ''ವರವೇ'' ಹೊರತು ಯಾರೂ ಬಲಾತ್ಕಾರದಿಂದ ತುಂಬಿದ ಪದಗಳೇ ಆಗಲಿ ಶಬ್ದಗಳೇ ಆಗಲಿ ಅಲ್ಲ.)

1 ಕೊರಿಂಥದವರಿಗೆ 14:40

**ಆದರೆ ಎಲ್ಲವೂ ಮರ್ಯಾದೆಯಿಂದಲೂ ಕ್ರಮದಿಂದಲೂ ನಡೆಯಲಿ.**

ಸಭಾ ಜೀವನದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಗಳೂ ಗೌರವಯುತವಾಗಿ ಪ್ರಾಮಾಣಿಕ, ಸೌಜನ್ಯಪೂರಿತವಾಗಿ, ವೈಚಾರಿಕವಾಗಿ) ಮತ್ತು ಕ್ರಮಬದ್ಧವಾಗಿ ನಡೆಯಬೇಕೆಂದು ಅಪೊಸ್ತಲನಾದ ಪೌಲನು ಆಜ್ಞಾಪಿಸುತ್ತಾನೆ.

ಈ ವಚನದಲ್ಲಿ 'ಕ್ರಮ' ಅನ್ನುವ ಶಬ್ದಕ್ಕೆ ಬೇರೆಯದೇ ಆದ 'ಟಾಕ್ಸಿಸ್' ಎಂಬ ಮೂಲಗ್ರೀಕ್ ಪದವನ್ನು ಬಳಸಲಾಗಿದೆ. ಅದರ ಅರ್ಥ ಕ್ರಮಬದ್ಧವಾದ ವ್ಯವಸ್ಥೆ. (ಸಂದರ್ಭೋಚಿತವಾದ) ನಿಗದಿತ ಅನುಕ್ರಮದಿಂದ ಕೂಡಿದ (ಹುದ್ದೆ ಅಥವಾ ನಡತೆ) ಅಧಿಕಾರದ ಘನತೆ ಮತ್ತು ಕ್ರಮ ಇವುಗಳು ಸ್ಟ್ರಾಂಗ್‌ನ ಶಬ್ದಕೋಶದಲ್ಲಿ ಅರ್ಥೈಸಿರುವ ಬಗೆ. ಆದ್ದರಿಂದ ಸ್ಥಳೀಯ ಸಭೆಗಳಾಗಲಿ, ಪಟ್ಟಣ ವ್ಯಾಪ್ತಿಯ ಸಭೆಗಳಾಗಲಿ, ಈ ಮುಂದಿನ ವಿಷಯಗಳಲ್ಲಿ ಕ್ರಮಬದ್ಧವಾಗಿ ನಡೆದುಕೊಳ್ಳಬೇಕಾಗಿದೆ.

- ವ್ಯವಸ್ಥೆ: ಕಾರ್ಯಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸುವುದು.
- ಸಮಯ: ಎಲ್ಲಾ ಕಾರ್ಯಗಳು ಸಮಯ ಪ್ರಜ್ಞೆಯಿಂದ ಕೂಡಿರತಕ್ಕದ್ದು.
- ಅಧಿಕಾರ ಅಥವಾ ನಾಯಕತ್ವ ಹೊಂದಿರುವವರನ್ನು ಸಂದರ್ಭೋಚಿತವಾಗಿ ಗೌರವಿಸುವುದು.
- ಎಲ್ಲಾ ಕಾರ್ಯಗಳನ್ನು ಘನತೆ ಗೌರವಗಳಿಂದ ನಡೆಸುವುದು.

ಕೊಲೊಸ್ಸೆಯವರಿಗೆ 2:5

**ನಾನು ಶರೀರದಿಂದ ನಿಮ್ಮ ಬಳಿಯಲ್ಲಿ ಇಲ್ಲದಿದ್ದರೂ ಆತ್ಮದಿಂದ ನಿಮ್ಮೊಂದಿಗಿದ್ದು ನೀವು ಕ್ರಮವಾಗಿ ನಡೆಯುವುದನ್ನೂ ಕ್ರಿಸ್ತನಂಬಿಕೆಯಲ್ಲಿ ದೃಢವಾಗಿ ನಿಂತಿರುವುದನ್ನೂ ನೋಡಿ ಸಂತೋಷ ಪಡುತ್ತೇನೆ.**

ಪೌಲನು ಕೊಲೊಸ್ಸೆ ಸಭೆಯಲ್ಲಿ ಗಮನಿಸಿದ ಕ್ರಮಬದ್ಧವಾದ ನಡವಳಿಕೆಯನ್ನು ಕುರಿತು (ಕೊಲೊಸ್ಸೆಯವರಿಗೆ 1:2) ಆ ಸಭೆಯ ಕ್ರಿಸ್ತನಲ್ಲಿರುವ ದೇವ ಜನರಿಗೂ ಮತ್ತು ನಂಬಿಗಸ್ತರಾದ ಸಹೋದರರಿಗೂ ಬರೆಯುವಾಗ ಅವರೊಂದಿಗೆ ಪೌಲನು ಸಂತೋಷಿಸುತ್ತಾನೆ. ಇದರಿಂದ ಸಭೆಗಳಲ್ಲಿ ಕ್ರಮಬದ್ಧವಾದ ನಡವಳಿಕೆ ಎಷ್ಟೋ ಒಳ್ಳೆಯದೆಂದು ತೋರುತ್ತದೆ.

ತೀತನಿಗೆ 1:5

**ನೀನು ಕ್ರೇತ ದ್ವೀಪದಲ್ಲಿ ಇನ್ನೂ ಕ್ರಮಕ್ಕೆ ಬಾರದಿರುವ ಕಾರ್ಯಗಳನ್ನು ಕ್ರಮಪಡಿಸಿ ಪಟ್ಟಣ ಪಟ್ಟಣಗಳಲ್ಲಿಯೂ ಸಭೆಯ ಹಿರಿಯರನ್ನು ನೇಮಿಸಬೇಕೆಂದು ನಾನು ನಿನಗೆ ಅಪ್ಪಣೆಕೊಟ್ಟು ನಿನ್ನನ್ನು ಅಲ್ಲೇ ಬಿಟ್ಟು ಬಂದೆನಲ್ಲಾ.**

ಹೊಸ ಒಡಂಬಡಿಕೆಯಲ್ಲಿ ಪೌಲನ ಕ್ರಿಸ್ತ ನಂಬಿಕೆಯ ಕುಮಾರನು ಎಂದೇ ಕರೆಯಲ್ಪಟ್ಟ ತೀತನು, ಕ್ಷೇತ್ರ ದ್ವೀಪದ ಪಟ್ಟಣದಲ್ಲಿನ ಅನೇಕ ಸಭೆಗಳಿಗೆ ಜವಾಬ್ದಾರನಾಗಿದ್ದನು. ಅಪೊಸ್ತಲನಾದ ಪೌಲನು ಈ ಎಲ್ಲಾ ಸಭೆಗಳಲ್ಲಿ ಇರಬಹುದಾದ ಕ್ರಮವಿಲ್ಲದ ಸಂಗತಿಗಳನ್ನು ಕ್ರಮಪಡಿಸುವಂತೆಯೂ ಸದಾ ಜೀವನದಲ್ಲಿ ಕೈತಪ್ಪಿ ಹೋಗಿರುವ ಅನೇಕ ಸಂಗತಿಗಳನ್ನು ಪುನಃ ಸ್ಥಾಪಿಸಿ ಸರಿಪಡಿಸುವಂತೆಯೂ ಅಪ್ಪಣೆ ಕೊಡಿಸುತ್ತಾನೆ. ಗ್ರೀಕ್ ಮೂಲ ಶಬ್ದ "ಎಪಿಡಿಯಾರ್ಥೂ" Epidiaethoo ಇದರ ಅರ್ಥ "ಇನ್ನು ಮುಂದೆ ಬಲ ಪಡಿಸುವುದು" ಹಾಗೂ "ಇನ್ನು ಮೇಲೆ ಎಲ್ಲವನ್ನೂ ಕ್ರಮಪಡಿಸುವುದು" ಎಂದಾಗುತ್ತದೆ. ಕ್ರಿಸ್ತನು ತಾನೇ ನೇಮಿಸಿದ ಕ್ರಮಬದ್ಧವಾದ ವ್ಯವಸ್ಥೆಯಲ್ಲಿ ಸಭೆಗಳು ಸಾಲಾಗಿ ನಿಂತು ಕಾರ್ಯ ನಿರ್ವಹಿಸುವ ಅವಶ್ಯಕತೆಯನ್ನು ಪೌಲನು ಒತ್ತಿ ಹೇಳುತ್ತಾನೆ. ಕೇವಲ ಸಭೆಗಳನ್ನು ಇಲ್ಲವೇ ವಿಶ್ವಾಸಿಗಳ ಗುಂಪುಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಸ್ಥಾಪಿಸಿದರೆ ಸಾಲದು, ಅಲ್ಲಿ ಎಲ್ಲವೂ ಸಮರ್ಪಕವಾಗಿ, ಕ್ರಮಬದ್ಧವಾಗಿ ನಡೆಯುವಂತೆ ಮತ್ತು ಅದಕ್ಕಾಗಿ ಭಕ್ತಿಯುಳ್ಳ ನಾಯಕರನ್ನು ನೇಮಿಸುವುದೂ ಸಹ ಅತ್ಯವಶ್ಯಕವಾಗಿರುತ್ತದೆ.

ಈಗಾಗಲೇ ಪರಿಶೀಲಿಸಿದ ಸತ್ಯವೇದ ವಚನಗಳಿಂದ ನಮಗೆ ಕಂಡುಬರುವ ಸತ್ಯಾಂಶವೇನೆಂದರೆ ಎಲ್ಲಾ ಸಭೆಗಳು, ದೇವರ ಸೇವಕರುಗಳ ಮತ್ತು ಆತನ ಜನರು ದೈವಿಕ ಕ್ರಮವನ್ನು ಅನುಸರಿಸಿ ನಡೆಯಬೇಕೆಂಬುದೆ ಕರ್ತನ ಅಪೇಕ್ಷೆಯಾಗಿದೆ ಮತ್ತು ಈ ಅಗತ್ಯತೆಯನ್ನು ಕುರಿತು ನಾವು ಜಾಗರೂಕರಾಗಿರುವುದು ಮುಖ್ಯ ಎಂಬುದೇ.

ದೈವಿಕ ಕ್ರಮವು ಈ ಕೆಳಗಿನ ಸಂಗತಿಗಳನ್ನು ಒಳಗೊಂಡಿದೆ.

- ನಾವು ಅತಿಕ್ರಮಿಸಬಾರದ ಮೇರೆಗಳು ನಮಗೆ ಇವೆ.
- ನಾವು ಗೌರವಿಸಲೇ ಬೇಕಾದ ಆತ್ಮಿಕ ಅಧಿಕಾರವಿದೆ.
- ಸೇವಾ ಕಾರ್ಯ ಮಾಡಲು ಕ್ರಮ ಬದ್ಧವಾದ ಮಾರ್ಗಗಳಿವೆ.
- ನಾವು ಎಲ್ಲದಕ್ಕೂ ಲೆಕ್ಕ ಕೊಡಬೇಕಾಗಿರುವುದರಿಂದ ಅದನ್ನು ಖಂಡಿತವಾಗಿಯೂ ಪರಿಪಾಲಿಸಲೇ ಬೇಕಾಗುತ್ತದೆ.

ಯಾವಾಗ ದೈವಿಕ ಕ್ರಮವನ್ನು ಸಭಾಸೇವಕರು ಮತ್ತು ವಿಶ್ವಾಸಿಗಳು ಅನುಸರಿಸುವುದಿಲ್ಲವೋ ಆಗ ಸಭೆಗಳು ಒಂದುಗೂಡುವುದಕ್ಕೆ ಬದಲಾಗಿ ಭಿನ್ನ ಭೇದಗಳಲ್ಲಿ ಮತ್ತು ಕಲಹಗಳಲ್ಲಿ ಅಂತ್ಯಗೊಳ್ಳುತ್ತದೆ. ಅಂತಿಮವಾಗಿ ಸಭೆಗಳು

ಬಲಹೀನವಾಗಿ ಭೇದ ಹುಟ್ಟಿದ ಮನೆಯು ನಿಲ್ಲಲಾರದು ಎಂಬಂತೆ ಭಾಗವಾಗಿ ಹೋಗುತ್ತದೆ. (ಮಾರ್ಕ 3:25) ಆದ್ದರಿಂದಲೇ ಈ ದಿನಗಳಲ್ಲಿ ಸಭೆಗಳು ಬಲಹೀನವಾಗಿ ಪ್ರಭಾವ ಬೀರುವುದರಲ್ಲಿ ಸೋತು ಹೋಗಿವೆ.

## ದೇವರ ಮನೆಯಲ್ಲಿನ ಕ್ರಮಬದ್ಧವಾದ ನಡವಳಿಕೆ

1 ತಿಮೊಥೆಯನಿಗೆ 3:14-15

**ಬೇಗನೆ ನಿನ್ನ ಬಳಿಗೆ ಬರುವೆನೆಂದು ನನಗೆ ನಿರೀಕ್ಷೆಯುಂಟು; ಆದರೆ ಒಂದು ವೇಳೆ ನಾನು ತಡಮಾಡಿದರೂ ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ. ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ.**

ದೇವರ ಮನೆ ಎನಿಸಿಕೊಂಡಿರುವ ಮನೆಯಲ್ಲಿ ನಾವು ಸರಿಯಾದ ರೀತಿಯಲ್ಲಿ ವರ್ತಿಸುವುದು ಅವಶ್ಯಕ: ಅನೇಕ ಕಡೆಗಳಲ್ಲಿ ಸೇವಕರು ಮತ್ತು ವಿಶ್ವಾಸಿಗಳಿಗೆ ದೇವರ ಆಲಯ ಇಲ್ಲವೇ ಸಭೆಗಳಲ್ಲಿ ಹೇಗೆ ಕ್ರಮಬದ್ಧವಾಗಿ ವರ್ತಿಸಬೇಕೆಂಬುದನ್ನು ಕಲಿಸಿಲ್ಲ.

1ಕೊರಿಂಥದವರಿಗೆ 3:10

**ದೇವರು ನನಗೆ ಕೃಪೆಯಿಂದ ಒಪ್ಪಿಸಿದ ಕೆಲಸವನ್ನು ನಡೆಸಿ ನಾನು ಪ್ರವೀಣ ಶಿಲ್ಪಿಯಂತೆ ಅಸ್ತಿವಾರ ಹಾಕಿದೆನು, ಮತ್ತೊಬ್ಬನು ಅದರ ಮೇಲೆ ಕಟ್ಟುತ್ತಾನೆ. ಪ್ರತಿಯೊಬ್ಬನು ತಾನು ಅದರ ಮೇಲೆ ಎಂಥದನ್ನು ಕಟ್ಟುತ್ತಾನೋ ಎಚ್ಚರಿಕೆಯಾಗಿರಬೇಕು.**

ಪೌಲನು ಅನೇಕ ಸಭೆಗಳ ಸ್ಥಾಪಕನೂ ಮತ್ತು ಅವುಗಳಿಗೆ ಭದ್ರ ಬುನಾದಿ ಹಾಕಿದ ಶಿಲ್ಪಿಗಾರನೂ ಆಗಿದ್ದಾನೆ. ಇದರಲ್ಲಿ ಕೊರಿಂಥ ಸಭೆಯೂ ಸಹ ಸೇರಿರುತ್ತದೆ. ಆತನ ತರುವಾಯ ಬಂದವರು ಆ ಸಭೆಯನ್ನು ಕರ್ತನ ಮಂದಿರವೆಂಬುದನ್ನು ಗಮನದಲ್ಲಿಟ್ಟು ಅದನ್ನು ಕ್ರಮಬದ್ಧವಾಗಿ ನಡೆಸಿಕೊಂಡು ಹೋಗುವುದಕ್ಕೆ ಜವಾಬ್ದಾರರಾಗಿರುತ್ತಾರೆ. ಈ ಹೊಣೆಗಾರಿಕೆಯು ಕರ್ತನ ಮಂದಿರವನ್ನು ಕಟ್ಟುವ ಜವಾಬ್ದಾರಿಯಲ್ಲಿ ಇರಬಹುದಾದ ಒಳ್ಳೆಯದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುತ್ತದೆ ಯಾವುದೇ ವ್ಯಕ್ತಿ ಈ ವ್ಯವಸ್ಥಿತವಾದ ದೈವಿಕ ಕ್ರಮವನ್ನು ಅನುಸರಿಸದೆ ಹೋದಲ್ಲಿ ಸರಿಯಾಗಿ ಕಟ್ಟುವುದರಲ್ಲಿ ವಿಫಲನಾಗುವುದೇ ಅಲ್ಲದೆ ಕರ್ತನ ಮಂದಿರವನ್ನು ಕೆಡಿಸುವವನೂ ಆಗಿರುತ್ತಾನೆ. ಇದರ ಫಲಿತಾಂಶವೇನೆಂದರೆ ಆಗ ಕ್ರಮವಿಲ್ಲದ, ಸರಿಯಾಗಿ ಕಾರ್ಯನಿರ್ವಹಿಸದ ಮತ್ತು ಭೇದಗಳು ಜಗಳಗಳಿಂದ ಕೂಡಿದ ಸಭೆ ನಮ್ಮದಾಗುತ್ತದೆ.

## ಕುರುಬನೂ ಮತ್ತು ಕುರಿಯ ನಡುವಣ ಆತ್ಮಿಕ ಸಂಬಂಧ

ಅಪೊಸ್ತಲರ ಕೃತ್ಯಗಳು 20:28

**ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ.**

ಇಬ್ರಿಯರಿಗೆ 13:17

**ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ. ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ; ಅವರು ವ್ಯಸನದಿಂದಿರುವುದು ನಿಮಗೆ ಪ್ರಯೋಜನಕರವಾದದ್ದಲ್ಲ.**

ಸ್ಥಳೀಯ ಸಭೆಗಳ ಸಭಾಪಾಲಕರು ಬರೇ ಉತ್ತಮ ಪ್ರಸಂಗಗಳನ್ನು ನೀಡುವುದು ಮಾತ್ರವಲ್ಲದೆ ತಮ್ಮ ಆತ್ಮಿಕವಾದ ಬೆಳವಣಿಗೆಗೆ ಅಗತ್ಯವಾದದ್ದನ್ನು ಹೊಂದುವುದರಲ್ಲಿಯೂ ಮುಂದಾಗಿರಬೇಕು. ಯಾಕೆಂದರೆ ಸಭೆಗಳನ್ನು ನಡೆಸುವ ಜವಾಬ್ದಾರಿ ಮತ್ತು ಜನರ ಮೇಲಿನ ಆತ್ಮಿಕ ಅಧಿಕಾರ ಇವರಿಗೆ ದೊರಕುವುದು ಪವಿತ್ರಾತ್ಮನಿಂದಲೇ ವಿಶ್ವಾಸಿಗಳು ಪವಿತ್ರಾತ್ಮನಿಂದ ನೇಮಕವಾದ ಸಭಾಪಾಲಕರೆನಿಸಿಕೊಳ್ಳುವ ಕುರುಬನ ಸಂರಕ್ಷಣೆಗೆ ಒಳಪಟ್ಟಿರುತ್ತಾರೆ. ಆದ್ದರಿಂದ ಕುರುಬನಿಗೂ ಮತ್ತು ಕುರಿಗೂ ನಡುವೆ ಒಂದು ಆತ್ಮೀಯ ಸಂಪರ್ಕ ಏರ್ಪಟ್ಟಿರುತ್ತದೆ.

ಸಭಾ ಸೇವಕರು ಇಲ್ಲವೇ ಪಾಲಕರು ಎನಿಸಿಕೊಂಡ ನಮಗೆ ಕೊಡಲ್ಪಟ್ಟ ಸಭೆಯನ್ನು ಸರಿಯಾಗಿ ಪಾಲಿಸುವ ಹಾಗೂ ಅವರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಜವಾಬ್ದಾರಿ ದೇವರಾತ್ಮನಿಂದಲೇ ಕೊಡಲ್ಪಟ್ಟಿರುತ್ತದೆ. ಇದರಲ್ಲಿ ಕುರಿಗಳನ್ನು ಪೋಷಿಸುವ, ಅತಿ ಪ್ರಾಮುಖ್ಯವಾದ ಜವಾಬ್ದಾರಿಗಳು ಸೇರಿರುತ್ತವೆ. ಇದರೊಂದಿಗೆ ಸ್ಥಳೀಯ ಸಭೆಗಳ ಸದಸ್ಯರಾದ ವಿಶ್ವಾಸಿಗಳಿಗೂ ಸಹ ಪವಿತ್ರಾತ್ಮನ ಮೂಲಕ ತಮ್ಮ ಮೇಲ್ವಿಚಾರಕರಾಗಿ ದೇವರಿಂದ ನೇಮಕಗೊಂಡು ಸೇವೆ ಸಲ್ಲಿಸುತ್ತಿರುವ ಕುರುಬರೆನಿಸಿಕೊಂಡ ಸಭಾ ಸೇವಕರ ವಿಷಯದಲ್ಲಿಯೂ ದೇವರಿಗೆ ಲೆಕ್ಕ ಕೊಡಬೇಕಾದ ಜವಾಬ್ದಾರಿಯಿದೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ವಿಶ್ವಾಸಿಗಳು ತಾವಿರುವ ಸ್ಥಳೀಯ ಸಭೆಗಳಲ್ಲಿ ನೇಮಕಗೊಂಡಿರುವ ಸಭಾ ಸೇವಕರಿಗೆ ಆತ್ಮಿಯ ವಿಷಯಗಳಲ್ಲಿ ಅಧೀನರು ಮತ್ತು ಆ ನಾಯಕತ್ವವನ್ನು ಗೌರವಿಸುವ ಹಂಗಿಗೆ ಒಳಗಾದವರೂ ಆಗಿರುತ್ತಾರೆ.

ಆದರೆ ಹೊರನೋಟಕ್ಕೆ ಗೋಚರಿಸುವುದೇನೆಂದರೆ ನಮ್ಮಲ್ಲಿನ ಅನೇಕ ಸಭಾ ಸೇವಕರೂ ಮತ್ತು ವಿಶ್ವಾಸಿಗಳೂ, ಕುರುಬನೂ ಮತ್ತು ಕುರಿಯ ನಡುವಣ ಸಂಪರ್ಕದ ಅಗತ್ಯತೆಯನ್ನು ಸರಿಯಾಗಿ ಅರ್ಥಮಾಡಕೊಂಡಿಲ್ಲ. ಈ ಇಡೀ ಸಂಬಂಧದಲ್ಲಿ ಪರಿಶುದ್ಧಾತ್ಮನು ತಾನೇ ಭಾಗವಹಿಸಿದ್ದು ಒಟ್ಟು ಆತ್ಮೀಯ ಒಡನಾಟದ ವಿಧಾನವನ್ನು ಆತನೇ ನಿಗದಿಪಡಿಸಿರುವುದರಿಂದ ನಾವು ಈ ಸಂಬಂಧವನ್ನು ಕರ್ತನಿಗೆ ಗೌರವ ತರುವ ಮತ್ತು ಮೆಚ್ಚಿಕೆಯಾದ ರೀತಿಯಲ್ಲಿ ನಿರ್ವಹಿಸುವುದು ಬಹಳ ಅತ್ಯಗತ್ಯ.

## ಪರಸ್ಪರ ಪೂರಕವೆ ಹೊರತು ವಿರುದ್ಧದ ಸ್ಪರ್ಧೆಯಲ್ಲ

ರೋಮಾಪುರದವರಿಗೆ 16:16,17

**ಪವಿತ್ರವಾದ ಮುದ್ದಿಟ್ಟು ಒಬ್ಬರನೊಬ್ಬರು ವಂದಿಸಿರಿ. ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ. ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನು ವಿಘ್ನಗಳನ್ನು ನಿಮ್ಮಲ್ಲಿ ಉಂಟು ಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ.**

ಅಪೊಸ್ತಲನಾದ ಪೌಲನು ಎಲ್ಲಾ ಸ್ಥಳೀಯ ಸಭೆಗಳನ್ನು ''ಕ್ರಿಸ್ತನ ಸಭೆ'' ಗಳೆಂದೇ ಪರಿಗಣಿಸಿದ್ದಾನೆ. ಕ್ರಿಸ್ತನು ತಾನೇ ನೇಮಿಸಿದ ಈ ಎಲ್ಲಾ ಸಭೆಗಳು ಕ್ರಿಸ್ತನಿಗೇ ಸೇರಿವೆ. ಆದ್ದರಿಂದ ಕ್ರಿಸ್ತನ ಎಲ್ಲಾ ಸಭೆಗಳು ಪರಸ್ಪರ ಪೂರಕವಾಗಿರುವುದಕ್ಕಾಗಿಯೇ ಕರೆಯಲ್ಪಟ್ಟಿದೇವೆಯೇ ಹೊರತು ಒಂದರ ಸಂಗಡ ಒಂದು ಸ್ಪರ್ಧಿಸುವುದಕ್ಕಾಗಿ ಅಲ್ಲ.

ಪ್ರತಿಯೊಂದು ಸ್ಥಳೀಯ ಸಭೆಗೂ ನಿರ್ದಿಷ್ಟವಾದ ಕರೆ, ನಿರ್ದಿಷ್ಟವಾದ ದರ್ಶನ ಮತ್ತು ಅದರದೇ ಆದ ಸ್ವಂತಿಕೆಯ ಸೊಗಡು ಇರುತ್ತದೆ. ಹಾಗಾಗಿ ಪ್ರತಿಯೊಂದು ಸ್ಥಳೀಯ ಸಭೆಯು ತನ್ನ ಜನರ ಅವಶ್ಯಕತೆಗಳನ್ನು ಪೂರೈಸಲು ಹಾಗೂ ಆ ಮೂಲಕ ಕ್ರಿಸ್ತನಲ್ಲಿ ನಿಗದಿತ ರೀತಿಯಲ್ಲಿ ಪ್ರಚುರ ಪಡಿಸಲು ಕಾರ್ಯಗಳನ್ನು ನಡೆಸಬೇಕಾಗುತ್ತದೆ. ಕೆಲವು ಸಭೆಗಳು ಅಧಿಕವಾಗಿ ದಯಾ ಪೂರಿತ ಸೇವೆಯಲ್ಲಿ ಬಹಳವಾಗಿ ನಿರತವಾಗಿರುತ್ತವೆ. ಕೆಲವು ಸಭೆಗಳು ಸೇವಾ ನಿಯೋಗವನ್ನೇ ಹೆಚ್ಚು ಕೇಂದ್ರೀಕರಿಸುತ್ತವೆ. ಇನ್ನೂ ಕೆಲವು ಸಭೆಗಳು ಸಾರ್ವತ್ರಿಕ ಸಂಘಗಳಾಗಿ ಪರಿಣಮಿಸಿ ಸಾವಿರಾರು ಆತ್ಮಗಳನ್ನು ಗೆದ್ದುಕೊಳ್ಳುವ ಕಾರ್ಯದಲ್ಲಿ ನಿರತವಾಗಿದ್ದು ಅಪೊಸ್ತಲರ ಮಾದರಿಯಲ್ಲಿ ಸೇವೆ ಸಲ್ಲಿಸುವುದಾಗಿರುತ್ತದೆ.


ಕ್ರಿಸ್ತನು ಸಭೆಗಳ ನಡುವೆ ಸ್ಪರ್ಧೆಯನ್ನು ಅಪೇಕ್ಷಿಸುವುದಿಲ್ಲ. ಆತನ ಬಹುಮುಖ್ಯವಾದ ಅಪೇಕ್ಷೆ ಏನೆಂದರೆ ಪ್ರತಿ ಸಭೆಯೂ ಮತ್ತೊಂದು ಸಭೆಯೊಂದಿಗೆ ಸಹಕರಿಸಿ ಹೊಂದಾಣಿಕೆ ಮಾಡಿಕೊಂಡು, ಪೂರಕವಾಗಿ ಸೇವೆ ಸಲ್ಲಿಸುತ್ತಾ ಕಳೆದು ಹೋದ ಆತ್ಮಗಳನ್ನು ಸಮೀಪಿಸಿ ಸಂದರ್ಶಿಸುವುದರ ಮೂಲಕ ಆತನ ಉದ್ದೇಶವನ್ನು ನೆರವೇರಿಸುತ್ತಾ ಪಟ್ಟಣಗಳಲ್ಲಿ ಒಟ್ಟಾರೆ ಕರ್ತನನ್ನು ಮಹಿಮೆಪಡಿಸಬೇಕೆಂಬುದೇ ಆಗಿರುತ್ತದೆ.

ಈ ದೃಷ್ಟಿಯಲ್ಲಿ ದೈವಿಕ ಕ್ರಮವನ್ನು ಪ್ರತಿ ಸ್ಥಳೀಯ ಸಭೆಗಳು ಸರಿಯಾಗಿ ಅರ್ಥಮಾಡಿಕೊಳ್ಳುವುದು ಮತ್ತು ಆ ಮೂಲಕ ಇತರೆ ಸಭೆಗಳೊಂದಿಗೆ ಪರಸ್ಪರ ಪೂರಕವಾಗಿ ಮತ್ತು ರಚನಾತ್ಮಕವಾಗಿ ಕಾರ್ಯನಿರ್ವಹಿಸುವುದು ಹಾಗೂ ಆ ಮೂಲಕ ಕರ್ತನ ಉದ್ದೇಶವನ್ನು ಇಡೀ ಪಟ್ಟಣ ವ್ಯಾಪ್ತಿಯ ಸಭೆಗಳಲ್ಲಿ ನೆರವೇರಿಸುವುದು ಅವಶ್ಯಕವಾಗಿರುತ್ತದೆ.

**ನಗರವ್ಯಾಪ್ತಿ ಸಭೆ ಮತ್ತು ಸ್ಥಳೀಯ ಸಭೆಗಳು**

- ಕರ್ತನಾದ ಯೇಸುವು, ಸ್ಥಳೀಯ ಸಭೆಗಳ ಸಭಾಪಾಲಕರುಗಳನ್ನು ಆತನ ಬಲಗೈಯಲ್ಲಿ ಹಿಡಿದುಕೊಂಡಿದ್ದಾನೆ. ಸ್ಥಳೀಯ ಸಭೆಗಳ ಸಭಾಪಾಲಕರುಗಳು ದೈವಿಕವಾಗಿ ಸಂರಕ್ಷಿಸಲ್ಪಟ್ಟಿದ್ದಾರೆ ಮತ್ತು ಭೂಮಿಯ ಮೇಲೆ ಕ್ರಿಸ್ತನ ಪ್ರತಿನಿಧಿಗಳಾಗಿದ್ದಾರೆ.
- ಗೊಂದಲ, ಅಕ್ರಮ ಮತ್ತು ಕಾನೂನು ಬಾಹಿರತೆಯು ನಗರವ್ಯಾಪ್ತಿ ಸಭೆಗಳಲ್ಲೂ ಸ್ಥಳೀಯ ಸಭೆಗಳಲ್ಲೂ ಅಂಗೀಕರಿಸಲ್ಪಡುವುದಿಲ್ಲ.
- ಆತನ ಸ್ಥಳೀಯ ಸಭೆಗಳು, ಸೇವಕರುಗಳು ಮತ್ತು ಆತನ ಜನರು ದೈವಿಕ ಕ್ರಮದಲ್ಲಿ ನಡೆಯಬೇಕೆಂಬುದಾಗಿ ಕ್ರಿಸ್ತನು ಬಯಸುತ್ತಾನೆ.
- ಜನರುಗಳ ಮೇಲೆ, ಸಭಾಪಾಲಕರು ಅಥವಾ ಆತ್ಮಿಕ ಮೇಲ್ವಿಚಾರಕರನ್ನು ಪವಿತ್ರಾತ್ಮನು ಇರಿಸುವಂತವನಾಗಿದ್ದಾನೆ.
- ಪ್ರತಿಯೊಂದು ಸ್ಥಳೀಯ ಸಭೆಯು, ಒಂದು ನಿರ್ದಿಷ್ಟ ಕರೆ, ಒಂದು ನಿರ್ದಿಷ್ಟ ದರ್ಶನ ಮತ್ತು ಅದರ ಸ್ವಂತ ವಿಶೇಷ ''ರುಚಿ'' ಹೊಂದಿದೆ.

# 2



## ಸೇವೆಯಲ್ಲಿನ ನೈತಿಕತೆ

ಇದುವರೆವಿಗೂ ದೈವಿಕ ಕ್ರಮಕ್ಕೆ ಇರುವ ಸತ್ಯವೇದದ ಆಧಾರವನ್ನು ಸ್ಥಳೀಯ ಸಭೆಗಳ ಮತ್ತು ಪಟ್ಟಣ ಸಭೆಗಳ ಸ್ವರೂಪ ಹಾಗೂ ವ್ಯಾಪ್ತಿಯನ್ನು ಮತ್ತು ಕುರುಬನಿಗೂ ಕುರಿಗಳಿಗೂ ನಡುವೆ ಇರಬೇಕಾದ ಆತ್ಮಿಯ ಸಂಪರ್ಕವನ್ನು ಕುರಿತು ವಿಚಾರ ಮಾಡಿದೆವು. ಈಗ ಜೀವನದ ನೈಜ ಅಂಶಗಳ ಹಿನ್ನೆಲೆಯಲ್ಲಿ ನಾವು ಹೇಗೆ ಈ ''ದೈವಿಕ ಕ್ರಮ''ವನ್ನು ಸ್ಥಳೀಯ ಮತ್ತು ಪಟ್ಟಣದ ಸಭೆಗಳಲ್ಲಿ ಅನುಷ್ಠಾನಕ್ಕೆ ತಂದು ಪಾಲಿಸಬಹುದು?.

ಒಟ್ಟಾರೆ ಸಭೆಗಳಲ್ಲಿ ನೇಮಕಗೊಂಡಿರುವ ಕ್ರಿಸ್ತನ ಎಲ್ಲಾ ಸೇವಕರನ್ನು ನಾವುಗಳು-ಅಪೊಸ್ತಲರು, ಪ್ರವಾದಿಗಳು, ಸುವಾರ್ತಿಕರು, ಸಭಾಪಾಲಕರು, ಭೋಧಕರು ಮತ್ತು ವಿವಿಧ ಸೇವೆಯ ನಾಯಕರುಗಳು ಎಂದೆಲ್ಲಾ ಸಂಬೋಧಿಸುತ್ತೇವೆ.

## ದೇವರ ಸೇವಕರು ಪಾಲಿಸಲೇಬೇಕಾದ ಗುಣಮಟ್ಟ

1 ತಿಮೊಥೆಯನಿಗೆ 4:12

**ಯೌವನಸ್ಥನೆಂದು ನಿನ್ನನ್ನು ಅಸಡ್ಡೆ ಮಾಡುವುದಕ್ಕೆ ಯಾರಿಗೂ ಅವಕಾಶ ಕೊಡದೆ ನಂಬುವವರಿಗೆ ನಡೆ ನುಡಿ ಪ್ರೀತಿ ನಂಬಿಕೆ ಶುದ್ಧತ್ವ ಇವುಗಳ ವಿಷಯದಲ್ಲಿ ನೀನೇ ಮಾದರಿಯಾಗಿರು.**

2 ತಿಮೊಥೆಯನಿಗೆ 3:10, 11ಅ,

**ನೀನಾದರೋ ನನ್ನನ್ನು ಅನುಸರಿಸುವವನಾಗಿದ್ದು ನನ್ನ ಬೋಧನೆ ನಡತೆ ಉದ್ದೇಶ ನಂಬಿಕೆ ದೀರ್ಘಶಾಂತಿ, ಪ್ರೀತಿ ಸೈರಣೆ ಇವುಗಳನ್ನು ...... ನನಗೆ ಸಂಭವಿಸಿದ ಹಿಂಸೆಗಳನ್ನೂ ಕಷ್ಟಾನುಭವಗಳನ್ನೂ ತಿಳಿದವನಾಗಿದ್ದೀ.**

ದೇವರ ಮಾರ್ಗದಲ್ಲಿರುವ ಎಲ್ಲಾ ವಿಶ್ವಾಸಿಗಳಿಗೂ ನಮ್ಮ ಜೀವನ ಮಾದರಿಯ ಜೀವನವಾಗಿರಬೇಕಾಗುತ್ತದೆ. ಯಾಕೆಂದರೆ ತತ್ವಶಾಸ್ತ್ರಗಳು ಮತ್ತು ನಾವು ಬೋಧಿಸುವ ಧರ್ಮಶಾಸ್ತ್ರಗಳಿಂದ ಮಾತ್ರವೇ ಜನರು ನಮ್ಮನ್ನು ನೋಡಿ ಕಲಿಯುವವರಾಗಿರದೆ ನಮ್ಮ ಜೀವನ ಕ್ರಮವನ್ನು ಸಹ ನೋಡಿ ಕಲಿಯುತ್ತಾರೆ.

ಸಭೆಗಳಲ್ಲಿರುವ ವಿವಿಧ ಬಗೆಯ ಸೇವಕರಾದ ನಾವುಗಳು ದೈವಿಕ ಕ್ರಮವನ್ನು ಕಲಿತುಕೊಳ್ಳುವುದೂ ಮತ್ತು ಅದನ್ನು ಅಭ್ಯಾಸ ಮಾಡುವುದೂ ಅವಶ್ಯಕವಾಗಿರುತ್ತದೆ. ಆದ್ದರಿಂದ ನಾವು ಪಾಲಿಸಲೇ ಬೇಕಾದ ಗುಣಮಟ್ಟ ಮತ್ತು ಅನುಸರಿಸಲೇಬೇಕಾದ ದೈವಿಕ ಕ್ರಮ ನಮ್ಮೆದುರಿನಲ್ಲಿದೆ. ಒಂದು ವೇಳೆ ನಾವು ಇದನ್ನು ಅನುಸರಿಸದೇ ಹೋದರೆ ನಾವು ನಡೆಸುತ್ತಿರುವ ಸಭೆಯ ಜನರು ತಮಗೆ ತಾವೇ ತಮಗಿಷ್ಟ ಬಂದಂತೆ

ವರ್ತಿಸುವವರಾಗುತ್ತಾರೆ. ಆದ ಕಾರಣ ನಮ್ಮ ಸಭಾಸೇವೆಯ ಜೀವನದಲ್ಲಿ ನಮಗೆ ನಾವೇ ಆಗಿಂದಾಗ್ಗೆ ಹೇಳಿಕೊಳ್ಳಬೇಕಾದ ಸಂಗತಿಗಳೇನೆಂದರೆ.

- ನಾವು ಅತಿಕ್ರಮಿಸಬಾರದ ಮೇರೆಗಳು ನಮಗೆ ಇವೆ.
- ನಾವು ಗೌರವಿಸಲೇಬೇಕಾದ ಆತ್ಮಿಕ ಅಧಿಕಾರವಿದೆ.
- ಸೇವಾಕಾರ್ಯ ಮಾಡಲು ಕ್ರಮಬದ್ಧವಾದ ಮಾರ್ಗಗಳಿವೆ.
- ಎಲ್ಲದಕ್ಕೂ ನಾವು ಲೆಕ್ಕಕೊಡುವುದರಿಂದ ಅದನ್ನು ಖಂಡಿತವಾಗಿಯೂ ಪರಿಪಾಲಿಸಲೇಬೇಕಾಗುತ್ತದೆ.

**ನಿಯಮದಿಂದ ಅಭ್ಯಾಸದ ಕಡೆಗೆ**: ದೇವರ ಸೇವಕರಾಗಿರುವುದರಿಂದ ದೈವಿಕ ಕ್ರಮವನ್ನು ಗಮನಿಸುತ್ತಾ ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕಾಗುತ್ತದೆ.

## ಸುಧಾರಣೆ ಮಾಡುವುದು ಮತ್ತು ತಿದ್ದುವುದೇ ಹೊರತು ದೂಷಿಸುವುದಲ್ಲ

1 ತಿಮೊಥೆಯನಿಗೆ 5:19-20

**ಸಭೆಯ ಹಿರಿಯನ ಮೇಲೆ ಯಾರಾದರೂ ದೂರು ಹೇಳಿದರೆ ಇಬ್ಬರು ಮೂವರು ಸಾಕ್ಷಿಗಳಿದ್ದ ಹೊರತಾಗಿ ಅದನ್ನು ಮನಸ್ಸಿಗೆ ತೆಗೆದುಕೊಳ್ಳಬೇಡ. ಪಾಪದಲ್ಲಿ ನಡೆಯುವವರನ್ನು ಎಲ್ಲರ ಮುಂದೆಯೇ ಗದರಿಸು. ಇವರಿಂದ ಮಿಕ್ಕಾದವರಿಗೂ ಭಯವುಂಟಾಗುವುದು.**

ಇತ್ತೀಚಿನ ದಿನಗಳಲ್ಲಿ ಸಭಾಪಾಲಕರುಗಳು ತಮ್ಮಲ್ಲಿರುವ ಅಭದ್ರತೆ ಹಾಗೂ ಇತರ ವಿಶ್ವಾಸಿಗಳು ಮತ್ತು ಬೇರೆ ಸೇವಕರ ಕಡೆಗಿರುವ ಕಹಿ ಮನೋಭಾವ, ಹೊಟ್ಟೆಕಿಚ್ಚು ಮತ್ತು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸುವುದಕ್ಕಾಗಿ ದೇವರ ವಾಕ್ಯವನ್ನು ಪ್ರಸಂಗಿಸುವ ಪ್ರಸಂಗ ಪೀಠಗಳನ್ನು ಬಳಸಿಕೊಳ್ಳುತ್ತಿರುವುದು ಸರ್ವೇ ಸಾಮಾನ್ಯ ಸಂಗತಿಯಾಗಿದೆ ಸಭೆಯವರು ಯಾರಾದರೂ ಸಭಾ ಪಾಲಕರೊಂದಿಗೆ ಅನುಚಿತವಾಗಿ ನಡಕೊಂಡರೆ ಅದನ್ನು ಸಭಾಪಾಲಕರು ಭಾನುವಾರದ ಆರಾಧನೆಯಲ್ಲಿ ಪ್ರಸಂಗದ ಮುಖಾಂತರ ವ್ಯಕ್ತಪಡಿಸುವುದನ್ನು ನಾವು ಕಾಣುತ್ತಿದ್ದೇವೆ. ಇಲ್ಲಿ ಪಾಲಕರು ಸಭೆಯವರ ಹೆಸರನ್ನು ಹೇಳಬಹುದು ಅಥವಾ ಹೇಳದೇ ಇರಬಹುದು. ಆದರೆ ಸಭಾಪಾಲಕರು ಯಾರನ್ನು ಉದ್ದೇಶಿಸಿ ಈ ಮಾತನ್ನು ಹೇಳುತ್ತಾರೆಂಬುದು ಸಭೆಯವರಿಗೆ ನೇರವಾಗಿ ಗೊತ್ತಾಗಿ ಹೋಗುತ್ತದೆ. ಆಗ ಸಭೆಯಲ್ಲಿ ಗುಸುಗುಸು ಮಾತು ನಗೆ ಕಂಡುಬರುತ್ತದೆ. ಆದರೆ ಯಾರನ್ನು ಕುರಿತು ಸಭಾಪಾಲಕರು ಈ ಮಾತುಗಳನ್ನು ಪ್ರಸಂಗ ಪೀಠದಿಂದ ಆಡಿದರೋ ಆ ವ್ಯಕ್ತಿಗೆ ಇಲ್ಲದೇ ಗುಂಪಿಗೆ ತಮ್ಮ ನಿಲುವನ್ನು

ಸಮರ್ಥಿಸಿಕೊಳ್ಳುವ ಅವಕಾಶವೇ ಇರುವುದಿಲ್ಲ. ಹಾಗಾಗಿ ಯಾವ ಪಾಪವನ್ನೂ ಮಾಡದೆ ವೃಥಾ ಅಪವಾದ ಹೊರಬೇಕಾಗಿ ಬಂದ ಅವರ ಪಾಡು ಬೇಡವೇ ಬೇಡ. ಭಾಗಶಃ ಅಥವಾ ಪ್ರಾಯಶಃ ನಿಂದೆಗೆ ಒಳಗಾದ ಆತನು ಇಲ್ಲವೇ ಆಕೆ ಸಭಾಪಾಲಕರೊಂದಿಗೆ ವ್ಯಕ್ತಿಗತವಾಗಿ ಭಿನ್ನಾಭಿಪ್ರಾಯ ಹೊಂದಿದವರಾಗಿರಬಹುದು ಅಥವಾ ಸಭಾಪಾಲಕರ ಅಭಿಪ್ರಾಯಗಳನ್ನು ಒಪ್ಪದೆ ಇರುವವರಾಗಿರಬಹುದು. ಇಲ್ಲದೇ ಸಭಾಪಾಲಕರೇ ಸ್ವತಃ ಆ ವ್ಯಕ್ತಿಯ ಸಾಮರ್ಥ್ಯದ ಬಗ್ಗೆ ನಂಬಿಕೆ ಇಲ್ಲದವರಾಗಿರಬಹುದು.

ದೇವರ ಸೇವಕರಾದ ನಾವು ಈ ಎಲ್ಲಾ ಕನಿಷ್ಠವಾದವುಗಳಿಗಿಂತ ಮೇಲ್ಮಟ್ಟದವರಾಗಿರಬೇಕು. ನಾವು ಎಂದಿಗಾದರೂ ಪ್ರಸಂಗ ಪೀಠಗಳನ್ನು ಇಂತಹ ಕ್ಷುಲ್ಲಕ ವಿಷಯಗಳಿಗೆ ಬಳಸಬಾರದು. ಯಾಕೆಂದರೆ ಸಭೆಯಲ್ಲಿ ಪ್ರಸಂಗ ಪೀಠಗಳಿರುವುದು ಕುರುಬನಾದ ಯೇಸು ಕ್ರಿಸ್ತನ ಸೇವೆಯನ್ನು ಜವಾಬ್ದಾರಿಯುತವಾಗಿ ಹೊರುವುದಕ್ಕಾಗಿ ಆ ಮೂಲಕ ಸುಧಾರಣೆ ಮಾಡಲು, ಮಾರ್ಗದರ್ಶನ ನೀಡಲು, ಸಭೆಯವರನ್ನು ಎಚ್ಚರಿಸಲು ಮತ್ತು ಪ್ರೀತಿಯಿಂದ ತಿದ್ದಿಸರಿಪಡಿಸಲು ಪ್ರಸಂಗ ಪೀಠವನ್ನು ಉಪಯೋಗಿಸಬೇಕಾಗಿದೆ. ದೇವರ ಸೇವಕರಾದ ನಾವುಗಳು ಇತರರನ್ನು ದೂಷಿಸುವುದಕ್ಕಾಗಿ ಅದನ್ನು ಬಳಸಬಾರದು.

ಯಾರಾದರೂ ಪಾಪ ಮಾಡಿದಾಗ ಅವರನ್ನು ಗದರಿಸಿ ಎಚ್ಚರಿಸಿ ಇತರರು ಅದೇ ತಪ್ಪಿಗೆ ಒಳಗಾಗಿ ಪಾಪ ಮಾಡದಂತೆ ಎಲ್ಲರನ್ನೂ ಪ್ರೀತಿಯಿಂದ ತಿದ್ದಬೇಕಾಗಿರುತ್ತದೆ.

**ನಿಯಮದಿಂದ ಅಭ್ಯಾಸದ ಕಡೆಗೆ:** ಯಾವುದೇ ಕಾರಣಕ್ಕೂ ಎಂದಿಗಾದರೂ ಪ್ರಸಂಗ ಪೀಠವನ್ನು ಅದರ ಮೂಲ ಉದ್ದೇಶಗಳ ಹೊರತಾಗಿ ಸ್ವಂತಿಕೆಗಾಗಿ ಬಳಸಬೇಡಿ.

## ಸಂರಕ್ಷಣೆಯೇ ಹೊರತು ಹತೋಟಿಯಲ್ಲಿಟ್ಟುಕೊಳ್ಳುವುದಲ್ಲ

1 ಪೇತ್ರನು 5:1-4

**ಸಭೆಯ ಹಿರಿಯರೇ, ಜೊತೆ ಹಿರಿಯವನಾದ ನಾನು ಕ್ರಿಸ್ತನ ಬಾಧೆಗಳನ್ನು ಕಣ್ಣಾರೆ ಕಂಡವನೂ ಇನ್ನು ಮುಂದೆ ಪ್ರತ್ಯಕ್ಷನಾಗುವ ಪ್ರಭಾವದಲ್ಲಿ ಪಾಲುಗಾರನೂ ಆಗಿದ್ದು ನಿಮ್ಮನ್ನು ಎಚ್ಚರಿಸಿ ಹೇಳುವುದೇನೆಂದರೆ ನಿಮ್ಮಲ್ಲಿರುವ ದೇವರ ಮಂದೆಯನ್ನು ಕಾಯಿರಿ. ಬಲಾತ್ಕಾರದಿಂದಲ್ಲ ದೇವರ ಚಿತ್ತದ ಪ್ರಕಾರ ಇಷ್ಟಪೂರ್ವಕವಾಗಿಯೂ ನೀಚವಾದ ದ್ರವ್ಯಾಶೆಯಿಂದಲ್ಲ. ಸಿದ್ಧ ಮನಸ್ಸಿನಿಂದಲೂ, ಮೇಲ್ವಿಚಾರಣೆಮಾಡಿರಿ. ದೇವರು ನಿಮ್ಮ ವಶದಲ್ಲಿಟ್ಟಿರುವ ಸಭೆಗಳ ಮೇಲೆ ದೊರೆತನ ಮಾಡುವವರಂತೆ ನಡೆಯದೇ ಮಂದೆಗೆ**

**ಮಾದರಿಯಾಗಿಯೇ ನಡೆದುಕೊಳ್ಳಿರಿ. ಹಿರೀಕುರುಬನು ಪ್ರತ್ಯಕ್ಷನಾಗುವಾಗ ನೀವು ದೇವಪ್ರಭಾವವೆಂಬ ಎಂದಿಗೂ ಬಾಡದ ಜಯಮಾಲೆಯನ್ನು ಹೊಂದುವಿರಿ.**

2 ಕೊರಿಂಥದವರಿಗೆ 1:24

**ನಾವು ನಂಬಿಕೆಯ ವಿಷಯದಲ್ಲಿಯೂ ನಿಮ್ಮ ಮೇಲೆ ದೊರೆತನ ಮಾಡುವವರೆಂದು ನನ್ನ ತಾತ್ಪರ್ಯವಲ್ಲ; ನಿಮ್ಮ ಸಂತೋಷಕ್ಕೆ ನಾವು ಸಹಾಯಕರಾಗಿದ್ದೇವೆ. ನಂಬಿಕೆಯ ವಿಷಯದಲ್ಲಿ ದೃಢನಿಂತಿದ್ದೀರಿ.**

ಸಭೆಯಾಗಿ ನಮ್ಮ ವಶಕ್ಕೆ ಕೊಡಲ್ಪಟ್ಟ ಜನರಿಗೆ ಕುರುಬರಂತಿರುವ ಅವರ ಆತ್ಮಿಕ ವಿಷಯಗಳಲ್ಲಿ ಸಂರಕ್ಷಕರಾಗಿರುವ ಜವಾಬ್ದಾರಿ ಹೊಂದಿರುತ್ತೇವೆ. ಈ ದಿಶೆಯಲ್ಲಿ ಅವರನ್ನು ನಾವು ಎಚ್ಚರಿಕೆಯಿಂದ ಗಮನಿಸುವ ಹೊಣೆಗಾರಿಕೆ ಇರುತ್ತದೆಯೇ ಹೊರತು ಅವರ ಮೇಲೆ ದೊರೆತನ ಮಾಡುವ ಅಧಿಕಾರ ಇರುವುದಿಲ್ಲ. ಮೂಲ ಭಾಷೆಯಲ್ಲಿ ''ದೊರೆತನ'' ಎನ್ನುವ ಶಬ್ದಕ್ಕೆ ''ಕಟಕುರಿಯುವೋ''-ಇದರ ಅರ್ಥವೇನೆಂದರೆ ಅಧಿಕಾರ ನಡೆಸುವುದು ಅಂದರೆ ಹತೋಟಿಯಲ್ಲಿಡು, ಅಧೀನ ಮಾಡಿಕೋ, ದೊರೆತನ ಚಲಾಯಿಸು, ದಬ್ಬಾಳಿಕೆ ಮಾಡು, ಔಚಿತ್ಯ ತೋರಿ ಪ್ರಭಾವ ಬೀರುವುದು ಇತ್ಯಾದಿ. ದೇವರ ಸೇವಕರಾಗಿ ನಾವು ಸಭೆಯವರನ್ನು ಹತೋಟಿಯಲ್ಲಿಡುವ ಎಲ್ಲೆ ಮೀರಿ ಅವರನ್ನು ಅಧೀನ ಮಾಡಿಕೊಳ್ಳುವುದು ಅಥವಾ ಅವರ ಜೀವನದ ಎಲ್ಲಾ ಸಂಗತಿಗಳನ್ನು ನಾವೇ ನಿರ್ದೇಶಿಸುವ ಅಧಿಕಾರವಿಲ್ಲ. ನಾವು ಆತ್ಮಿಕ ವಿಷಯಗಳಲ್ಲಿ ಅವರ ಸಂರಕ್ಷಕರೇ ಹೊರತು ಅವರನ್ನು ಹತೋಟಿಯಲ್ಲಿಟ್ಟುಕೊಳ್ಳುವ ಪ್ರಭಾವಶಾಲಿಗಳೂ ಅಥವಾ ಅತಿಕ್ರಮಣಕಾರರೂ ಅಲ್ಲ.

ಒಂದು ವೇಳೆ ಸಭಾಪಾಲಕರು ಇಡೀ ಸಭೆಯ ಸರ್ವಾಧಿಕಾರಿಯಂತೆ ವರ್ತಿಸುತ್ತಾ ಯಾರು ಯಾರನ್ನು ಮದುವೆಯಾಗಬೇಕು, ಯಾರು ಯಾವ ವೃತ್ತಿಯಲ್ಲಿ ತೊಡಗಬೇಕು, ಜನರು ಎಲ್ಲ ಯಾವ ಕಡೆ ಹೋಗಬೇಕು, ಬರಬೇಕು-ಹೀಗೆ ಪ್ರತಿಯೊಂದನ್ನು ತಾನೇ ಸಾಧಿಸುತ್ತಾ ದಿಗ್ದರ್ಶನ ಮಾಡುತ್ತಾ ಹೋದರೆ ಆ ಸಭೆಯಲ್ಲಿ ಸಭಾಪಾಲಕರ ಸಲಹೆ ನಿರ್ದೇಶನಗಳಲ್ಲದೆ ಯಾರೂ ಏನನ್ನೂ ಮಾಡಲಾರದೇ ಇರುವ ಸ್ಥಿತಿ ನಿರ್ಮಾಣವಾಗುತ್ತದೆ. ಅಷ್ಟೇ ಅಲ್ಲ ಆ ಸಭೆಯಲ್ಲಿ ಒಂದು ತಪ್ಪಾದ ಅವ್ಯವಸ್ಥೆ ಕಾಣಿಸಿಕೊಳ್ಳುತ್ತದೆ. ಸಭಾಪಾಲಕರು ಇತರರ ಜೀವನದ ಸಂಗತಿಗಳೊಂದಿಗೆ ತೀವ್ರವಾಗಿ ವರ್ತಿಸುವವನಾಗದೆ ಇತರರು ಸ್ವಂತಿಕೆಯಲ್ಲಿ ಜೀವಿಸಲು ಅವಕಾಶ ಮಾಡಿಕೊಡಬೇಕು.

ಇನ್ನೂ ವಿಷದವಾಗಿ ಹೇಳಬೇಕೆಂದರ ಸಭಾಪಾಲಕನಿಗೆ ತಮ್ಮ ಒಬ್ಬ ವಿಶ್ವಾಸಿಯ ವೈಯಕ್ತಿಕ ಆತ್ಮೀಕ ಜೀವಿತ ಮತ್ತು ವಿಶ್ವಾಸಿಯ ಸೇವೆಯ ಮೇಲೆ ಯಾವುದೇ ಬಗೆಯ

ಹತೋಟಿ ಇರುವುದಿಲ್ಲ. ಅದಕ್ಕೆ ಬದಲಾಗಿ ದೇವಜನರನ್ನು ಸಿದ್ಧಗೊಳಿಸಿ ಅವರಿಗೆ ಮಾರ್ಗದರ್ಶನ ಮಾಡಿ ಅವರನ್ನು ಪ್ರೋತ್ಸಾಹಿಸುತ್ತಾ ಅವರ ಆತ್ಮಿಕ ವಿಷಯಗಳಲ್ಲಿ ಅಭಿವೃದ್ಧಿಯಾಗುವಂತೆ ಕಾರ್ಯನಿರ್ವಹಿಸುವುದು ಯುಕ್ತವಾದದ್ದು. ಈ ವಿಷಯಗಳಲ್ಲಿ ಜನರನ್ನು ಹತೋಟಿಯಲ್ಲಿಡಲಾಗದು. ನಮ್ಮಲ್ಲಿ ಅನೇಕ ಸಭಾಪಾಲಕರು ಮತ್ತು ಸೇವಕರುಗಳು ಒಂದು ಅಡ್ಡಿಯಾಗಿ ಮತ್ತು ಅಡಚಣೆಯುಳ್ಳವರಾಗಿರುತ್ತಾರೆ. ರಮೇಶ ಎಂಬ ಒಬ್ಬ ವಿಶ್ವಾಸಿಯ ಬಗ್ಗೆ ಹೇಳೋಣ. ಅವನು ಒಂದು ಸಭೆಯಲ್ಲಿ ಸದಸ್ಯನಾಗಿ ಮುಂದುವರೆಯುವ ಮುಂಚಿತವಾಗಿ ತನ್ನ ಮನೆಯಲ್ಲಿಯೇ ''ವಾರದ ಪ್ರಾರ್ಥನಾ ಕೂಟ''ವನ್ನು ಪ್ರಾರಂಭಿಸಿರಿ, ಈ ಸೇವೆಯಲ್ಲಿ ಆತನು ನಂಬಿಗಸ್ತನಾಗಿದ್ದನು ಮತ್ತು ದೇವರು ತಾನು ಅಪೇಕ್ಷಿಪಡುವ ರೀತಿಯಲ್ಲಿ ಈ ಪ್ರಾರ್ಥನಾ ಕೂಟಕ್ಕೆ ಜನರನ್ನು ಸೇರಿಸುತ್ತಾ ಬಂದನು.

ಕೆಲವು ಸಮಯದ ನಂತರ ಒಂದು ಸ್ಥಳೀಯ ಸಭೆ ಹತ್ತಿರದಲ್ಲಿಯೇ ಇರುವುದು ಈತನ ಗಮನಕ್ಕೆ ಬಂತು. ಸಾಂದರ್ಭಿಕವಾಗಿ ಅಲ್ಲಿಗೆ ಭೇಟಿಕೊಟ್ಟು ಆ ನಂತರ ಆ ಸಭೆಯ ಸದಸ್ಯನಾಗುವುದಾಗಿ ತೀರ್ಮಾನಿಸಿದ. ಇಂಥ ಸಂದರ್ಭಗಳಲ್ಲಿ ಬಹುಪಾಲು ಸಭಾಪಾಲಕರುಗಳು ಮತ್ತು ಸಭೆಗಳು ಮಾಡುವುದೇನೆಂದರೆ ರಮೇಶ್ ನಿಯೋಜಿಸಿದ್ದ ಪ್ರಾರ್ಥನಾಕೂಟದ ಮನೆಯಲ್ಲಿ ಇಲ್ಲದೇ ಆ ಪ್ರಾರ್ಥನಾ ಗುಂಪನ್ನು ಪೂರ್ತಿಯಾಗಿ ಸಭೆಗಳಿಗೆ ಮತ್ತು ಸಭಾಪಾಲಕರುಗಳ ಹತೋಟಿಗೆ ತೆಗೆದುಕೊಳ್ಳುವುದನ್ನು ನಾವು ನೋಡುತ್ತೇವೆ ಇದು ಸರಿಯಲ್ಲ ಯಾಕೆಂದರೆ ಅನೇಕ ವೇಳೆ ಇಂತಹ ಕಾರ್ಯಗಳು ಒಬ್ಬ ವಿಶ್ವಾಸಿ ಆಸಕ್ತಿಯಿಂದ ಮತ್ತು ಶ್ರಮದಿಂದ ಆರಂಭಿಸಿದ ಸೇವೆಯು ಕುಂಠಿತಗೊಳ್ಳುವಂತೆ ಮಾಡುತ್ತದೆ. ರಮೇಶ್ ಸ್ಥಳೀಯ ಸಭೆಗೆ ಬರುವ ಮುನ್ನವೇ ಈ ಪ್ರಾರ್ಥನಾ ಕೂಟವನ್ನು ಪ್ರಾರಂಭಿಸಿದ್ದ ಆತನು ಪ್ರಾರಂಭಿಸಿದ್ದ ಈ ಒಳ್ಳೇ ಕಾರ್ಯವನ್ನು ಪ್ರೋತ್ಸಾಹಿಸಿ ಆತನ ಸೇವೆ ಮುಂದುವರಿಯಲು ಸ್ವಾತಂತ್ರ್ಯವನ್ನು ಒದಗಿಸಿಕೊಡಬೇಕು ಹಾಗೂ ಪ್ರಾರ್ಥನಾಕೂಟದ ಮೂಲಕ ಆತನ ಸೇವೆ ಫಲಪ್ರದವಾಗಿ ಮುಂದುವರಿಯುವಂತೆ ಆತನನ್ನು ಮತ್ತಷ್ಟು ಸಿದ್ದಗೊಳಿಸಬೇಕು. ಇದು ಸಭಾಪಾಲಕರ ಕರ್ತವ್ಯ. ಒಂದು ವೇಳೆ ರಮೇಶ್ ತನ್ನ ಪ್ರಾರ್ಥನಾ ಗುಂಪನ್ನು ಸಭೆಯ ಅಧೀನಕ್ಕೆ ಮತ್ತು ಸಭಾಪಾಲಕರ ನಾಯಕತ್ವಕ್ಕೆ ಒಳಪಡಿಸುತ್ತಾನೋ ಇಲ್ಲವೋ ಎನ್ನುವುದು ಆತನ ಸ್ವಂತ ನಿರ್ಧಾರಕ್ಕೆ ಸೇರಿದ ವಿಷಯ. ಒಂದು ವೇಳೆ ಅದಕ್ಕೆ ಆತ ಒಪ್ಪಿಗೆ ಸೂಚಿಸಿದರೆ ಸಭಾಪಾಲಕರು ಈ ಕಾರ್ಯಕ್ಕೆ ಮುಂದಾಗಿ ಅವಶ್ಯಕವಾದವುಗಳನ್ನು ನಡೆಸಬಹುದು. ಒಂದು ವೇಳೆ ರಮೇಶ್ ತನ್ನ ಪ್ರಾರ್ಥನಾ ಗುಂಪನ್ನು ಸಭೆಯ ಅಧೀನಕ್ಕೆ ಇಲ್ಲದೇ

ಸಭಾಪಾಲಕರ ವಶಕ್ಕೆ ಒಪ್ಪಿಸದೇ ಹೋದರೆ ಅದೂ ಕೂಡ ಸರ್ವ ಸಮ್ಮತವೇ. ಇಂಥ ಸಂದರ್ಭಗಳಲ್ಲಿ ಸಭೆ ಮತ್ತು ಸಭಾಪಾಲಕರು ರಮೇಶ್ ಮಾಡುತ್ತಿರುವ ಸೇವಾ ಕಾರ್ಯಗಳಲ್ಲಿ ತಾವೂ ತಮ್ಮನ್ನು ತೊಡಗಿಸಿಕೊಂಡು ಆದರೆ ಅದಕ್ಕೆ ಯಾವುದೇ ಬಾಧಕವಾಗದಂತೆ ಆತನ ಪ್ರಾರ್ಥನಕೂಟದ ಸೇವೆ ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಬೇಕಾಗಿರುತ್ತದೆ.

**ನಿಯಮದಿಂದ ಅಭ್ಯಾಸದ ಕಡೆಗೆ:** ದೇವರ ಕುರಿಯನ್ನು ನಿನ್ನ ಹತೋಟಿಯಲ್ಲಿಟ್ಟು ಸಂರಕ್ಷಣೆ ಮಾಡುವುದು. ಅದಕ್ಕೆ ಅಗತ್ಯವಾದ ಸ್ವಾತಂತ್ರ್ಯವನ್ನು ಒದಗಿಸಿ ಅದು ಬೆಳೆಯುವಂತೆ ಮತ್ತು ದೇವರ ರಾಜ್ಯಕ್ಕೋಸ್ಕರ ಫಲಕೊಡುವಂತೆ ಕಾರ್ಯ ನಿರ್ವಹಿಸು.

## ದೇವ ಜನರೊಂದಿಗೆ ಸಮಾಲೋಚನೆ

ಅಪೊಸ್ತಲರ ಕೃತ್ಯಗಳು 20:28

**ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ.**

ಕೆಲವು ಸಂದರ್ಭಗಳಲ್ಲಿ ವಿಶ್ವಾಸಿಗಳು ತಾವು ಸದಸ್ಯರಾಗಿರುವ ಸಭೆಗಳ ಸಭಾಪಾಲಕರನ್ನು ಬಿಟ್ಟು ಇತರೆ ಪಾಲಕರ ಬಳಿಗೆ ಸಮಾಲೋಚನೆಗಾಗಿ ಹೋಗುವುದು ಕಂಡುಬರುತ್ತದೆ. ಇದಕ್ಕೆ ಬದಲಾಗಿ ಆಯಾ ಸಭಾಪಾಲಕರೇ ತಮ್ಮ ಸಭೆಯ ವಿಶ್ವಾಸಿಗಳ ಕುಂದುಕೊರತೆಗಳನ್ನು ನಿವಾರಿಸಿದಲ್ಲಿ ಇಲ್ಲವೇ ಸಮಾಲೋಚನೆ ನಡೆಸಿದಲ್ಲಿ ಅದು ಸರಿಯಾದ ಕ್ರಮವಾಗುತ್ತದೆ.

ಇತರೆ ಸಭೆಯವರು ನಮ್ಮ ಬಳಿ ಸಮಾಲೋಚನೆಗೆ ಬಂದಾಗ ಅವರು ಈಗಾಗಲೇ ಅವರ ಆತ್ಮಿಯ ವಿಷಯದಲ್ಲಿ ಜವಾಬ್ದಾರಿಯುಳ್ಳ ಅವರ ನಾಯಕರ ಬಳಿ ಚರ್ಚಿಸಿದ್ದಾರೆಯೇ ಎನ್ನುವುದನ್ನು ನಾವು ಗಮನಿಸುವುದು ಅಗತ್ಯ.

ಏಕೆಂದರೆ ಇದುವರೆವಿಗೂ ಅವರ ಆತ್ಮಿಕ ವಿಷಯಗಳ ಕಡೆ ಗಮನಕೊಡುತ್ತಾ ಪೋಷಿಸುತ್ತಾ ಬಂದವರು ಅವರ ಸಭೆಯ ಪಾಲಕರೇ ವಿನಹ ಇತರೇ ಪಾಲಕರಲ್ಲ. ಆದ್ದರಿಂದ ಈ ಕುರಿತು ಅವರೊಂದಿಗೇ ಮೊದಲು ಚರ್ಚೆ ನಡೆಸಿದರೆ ಉತ್ತಮ. ಒಂದು ವೇಳೆ ಹಾಗಿಲ್ಲದೇ ಹೋದರೆ ಆ ರೀತಿ ಸಮಾಲೋಚನೆಗಾಗಿ ಬಂದವರನ್ನು

ಅವರ ಆತ್ಮೀಯ ಬದುಕಿಗೆ ಪವಿತ್ರಾತ್ಮನಿಂದ ಜವಾಬ್ದಾರಿಯುತವಾಗಿ ನೇಮಿಸಲ್ಪಟ್ಟ ಅವರ ಸಭಾಪಾಲಕರ ಬಳಿ ಹೋಗುವಂತೆ ಸೂಚಿಸುವುದು ನಮ್ಮ ಜವಾಬ್ದಾರಿಯಾಗಿದೆ.

ಈ ವಿಷಯದಲ್ಲಿ ಅನೇಕ ವೇಳೆ ಸಭಾಸೇವಕರಾದ ನಮಗೆ ನಾವು ದೈವಿಕ ಕ್ರಮವನ್ನು ಅನುಸರಿಸಿತ್ತಿಲ್ಲವೇನೋ ಎಂಬ ಅಳುಕು ಇರುತ್ತದೆ. ಪೂರ್ವಾಪರ ಯೋಚಿಸಿದ ನಾವು ಸಮಾಲೋಚನೆ ನಡೆಸಲು ಮುಂದಾಗುತ್ತೇವೆ. ಅದಕ್ಕೆ ಬದಲಾಗಿ ಇತರ ಸಭೆಗಳವರು ಸಮಾಲೋಚನೆಗೆ ಬಂದಾಗ ನಾವು ಕೇಳಬೇಕಾದ ಮೊದಲನೆಯ ಪ್ರಶ್ನೆ ''ನೀವು ಈಗಾಗಲೇ ಈ ಸಮಸ್ಯೆಯನ್ನು ಕುರಿತು ನಿಮ್ಮ ಪಾಲಕರೊಂದಿಗೆ ಮಾತಾಡಿದ್ದೀರೋ?

ಒಂದು ಸಭೆಗೆ ಸೇರಿದ ಒಬ್ಬ ಯೌವನಸ್ಥನು ತನಗಿದ್ದ ಸಮಸ್ಯೆಯನ್ನು ಕುರಿತು ಚರ್ಚಿಸಲು ನನ್ನ ಬಳಿಗೆ ಬಂದನು. ಅದೇನೆಂದರೆ ಆತನ ಸಭೆಯಲ್ಲಿದ್ದ ಪಾಲಕರು ಯಾವಾಗಲೂ ಆತನನ್ನು ಕುರಿತು ಪ್ರಸಂಗ ಪೀಠದಿಂದ ಮೇಲಿಂದ ಮೇಲೆ ಆತನನ್ನು ಟೀಕಿಸುತ್ತಿದ್ದುದೇ ಆಗಿತ್ತು. ಕೂಡಲೇ ನಾನು ಆ ಸಭಾಪಾಲಕರನ್ನು ತಪ್ಪಿತಸ್ಥೆನೆಂದು ತೀರ್ಮಾನಿಸಿ ಆ ಯೌವನಸ್ಥನಿಗೆ ಆ ಸಭೆಯನ್ನು ಬಿಟ್ಟು ನನ್ನ ಸಭೆಗೆ ಬಂದು ಸೇರಿಕೋ ಎಂದು ಹೇಳಬಹುದಾಗಿತ್ತು. ಆದರೆ ನಾನು ಆತನಿಗೆ ಕೊಟ್ಟ ಸಲಹೆ ''ಹೋಗು ನಿನ್ನ ಸಭೆಯ ಪಾಲಕರೊಂದಿಗೆ ಈ ಕುರಿತು ಮಾತನಾಡು.'' ಆತನು ಹಾಗೆಯೇ ಮಾಡಿದ್ದರಿಂದ ಸಮಸ್ಯೆ ಪರಿಹಾರವಾಯಿತಲ್ಲದೆ ಈಗ ಆತನು ಅದೇ ಸಭೆಯಲ್ಲಿ ಸಂತೋಷದಿಂದ ಇದ್ದಾನೆ.

ಮತ್ತೊಬ್ಬ ಯೌವನಸ್ಥನು ನನ್ನನ್ನು ಭೇಟಿ ಮಾಡಲು ನನ್ನ ಬಳಿಗೆ ಬಂದನು. ಆತನು ಸಭೆಯ ವಿಷಯದಲ್ಲಿ ಅನೇಕ ಮುತುವರ್ಜಿಯನ್ನು ವ್ಯಕ್ತಪಡಿಸಿದ್ದು ತಾನಿರುವ ಆ ಸಭೆಯಲ್ಲಿ ಅವುಗಳು ಕಾರ್ಯರೂಪಕ್ಕೆ ಬರುತ್ತಿಲ್ಲವೆಂದು ವಿಷಾದಿಸಿದನು. ಆತನಿಗೆ ನಾನು ಹಾಕಿದ ಮೊದಲ ಪ್ರಶ್ನೆ ''ಈ ಬಗ್ಗೆ ನಿನ್ನ ಸಭಾಪಾಲಕರೊಂದಿಗೆ ನೀನು ಚರ್ಚೆ ಮಾಡಿದ್ದೀಯೋ?'' ಆತನ ಉತ್ತರ ''ಹೌದು'' ಮತ್ತು ಆತನ ಮಾತುಗಳಲ್ಲಿ ವ್ಯಕ್ತವಾಗಿದ್ದೇನೆಂದರೆ ತನ್ನ ಆಲೋಚನೆಗಳಿಂದ ಆ ಸಭಾಪಾಲಕರನ್ನು ಸಮಜಾಯಿಷಿ ಮಾಡಲು ಅಸಮರ್ಥನಾದದ್ದು. ಇಂತಹ ಸಂದರ್ಭಗಳಲ್ಲಿ ಕಂಡುಬರುವ ಸತ್ಯಾಂಶವೆಂದರೆ ಸಭಾಪಾಲಕರಗಳು ಕೂಡಲೇ ವರ್ಗಾವಣೆ ಆಗುವುದು. ಒಂದು ವೇಳೆ ವರ್ಗಾವಣೆ ಆಗದಿದ್ದ ಪಕ್ಷದಲ್ಲಿ ಆ ಸಮಸ್ಯೆಗಳನ್ನು ಹಾಗೆಯೇ ಸಂಭಾಳಿಸಿಕೊಳ್ಳುತ್ತಾ ಹೋದರೆ ಅದು ಯಾವಾಗ ಕೊನೆಗಣುವುದೋ ತಿಳಿಯಲಾಗದು. ಹಾಗೇನಾದರೂ

ವರ್ಗಾವಣೆಯಾಗಿ ಹೊಸ ಪಾಲಕರು ಬಂದರೆ ಪ್ರತಿಯೊಂದು ಸಹ ಹೊಸದಾಗಿ ಪ್ರಾರಂಭವಾಗಬೇಕಾಗಿರುತ್ತದೆ. ಇಂತಹ ಸಂದರ್ಭಗಳು ಬಂದಲ್ಲಿ ಸಮಾಲೋಚನೆಗಾಗಿ ಬಂದ ಯುವಕನಿಗೆ ನಮ್ಮ ಸಭೆಯಲ್ಲಿ ಸ್ಥಾನಮಾನಗಳನ್ನು ಕೊಡುವ ಹಲವಾರು ಆಸೆ ಆಮಿಷಗಳನ್ನು ಒಡ್ಡಿ ಆ ಸಭೆಯನ್ನು ಬಿಟ್ಟು ನಮ್ಮ ಸಭೆ ಸೇರಿಕೊಳ್ಳುವಂತೆ ಮಾಡಬಹುದಾಗಿದೆ. ಆದರೆ ನಾನು ನಿಜವಾಗಿ ಕೊಡುವ ಸಲಹೆ ಏನೆಂದರೆ ಆತನು ತನ್ನ ಸಭೆಗೆ ಹಿಂತಿರುಗಿ ಹೋಗಿ ಸಭಾಪಾಲಕರು ಮತ್ತು ಹಿರಿಯರು ಹಾಗೆಯೇ ಸಭೆಯ ಸಮಿತಿಯೊಂದಿಗೆ ಚರ್ಚಿಸಿ ಸೂಕ್ತವಾದ ನಿರ್ಧಾರಕ್ಕೆ ಬರಬೇಕೆಂಬುದೇ ಆಗಿರುತ್ತದೆ. ಇಷ್ಟಾಗಿಯೂ ಆತನೇನಾದರೂ ಬೇರೆ ಸಭೆಗೆ ಸೇರುವ ಇಚ್ಛೆಯನ್ನು ವ್ಯಕ್ತಪಡಿಸಿದಲ್ಲಿ ಯಾವುದಾದರೂ ಒಂದು ಸೂಕ್ತ ಸಭೆಯನ್ನು ಸೂಚಿಸಿ ಅಲ್ಲಿಗೆ ಸೇರಿಕೊಳ್ಳುವಂತೆ ಪ್ರೋತ್ಸಾಹಿಸುತ್ತೇನೆ.

ಬೇರೆ ಸಭೆಯವರಿಗೆ ಸಲಹೆ ಸಮಾಲೋಚನೆ ನೀಡುವುದು ತಪ್ಪೆಂದು ನಾನು ಭಾವಿಸುವುದಿಲ್ಲ. ನಾನು ಹೇಳುವುದೇನೆಂದರೆ ಪವಿತ್ರಾತ್ಮನಿಂದ ಸಭೆಯ ಮೇಲ್ವಿಚಾರಕರಾಗಿ ನೇಮಿಸಲ್ಪಟ್ಟ ಸಭಾ ಸೇವಕರಾದ ನಮ್ಮ ಬಳಿ ಯಾವುದೇ ವ್ಯಕ್ತಿ ಸಲಹೆ ಸಮಾಲೋಚನೆಗಾಗಿ ಬಂದಾಗ ನಾವು ದೈವಿಕ ಕ್ರಮವನ್ನು ಅನುಸರಿಸಿ ನಡೆದುಕೊಳ್ಳುವವರಾಗಿರಬೇಕು. ಯಾಕೆಂದರೆ ವಿಶ್ವಾಸಿಗಳೊಂದಿಗೆ ಸಮಾಲೋಚಿಸುವಾಗ ದೈವಿಕ ಕ್ರಮವು ಹೆಚ್ಚು ಉಪಯುಕ್ತವಾದುದು.

ಇನ್ನೊಂದು ಕಡೆಯಲ್ಲಿ ನೋಡುವುದಾದರೆ ಅನೇಕ ಸಭಾಪಾಲಕರು ತಮ್ಮ ಸಭೆಯವರು ಬೇರೆ ಪಾಲಕರ ಬಳಿ ಸಲಹೆ ಸಮಾಲೋಚನೆಗೆ ಹೋಗುವುದನ್ನು ಅಷ್ಟಾಗಿ ಇಷ್ಟಪಡುವುದಿಲ್ಲ ಮತ್ತು ಅದನ್ನು ತಡೆಹಿಡಿಯಲು ಸಹ ಪ್ರಯತ್ನಿಸುವುದೂ ಕೂಡ ಒಂದು ಅನಾರೋಗ್ಯಕರ ಕ್ರಮ. ಸಭಾಪಾಲಕರು ತಮ್ಮ ಕುರಿಗಳನ್ನು ಪೋಷಿಸುವವರಾದ್ದರಿಂದ ತಮ್ಮ ಸಭೆಯವರು, ತಮ್ಮ ಆತ್ಮಿಕ ವಿಷಯಗಳ ಕೊರತೆಗಳನ್ನು ನೀಗಿಸಿಕೊಳ್ಳಲು ಇತರೆ ಸೇವಕರ ಬಳಿಗೆ ಹೋಗುವುದಕ್ಕೆ ಅವಕಾಶ ಕೊಡುವಷ್ಟರಮಟ್ಟಿಗೆ ಸಭೆಯವರನ್ನು ಪ್ರೀತಿಸುವವರಾಗಿರಬೇಕು. ಆದರೆ ಬಹು ವೇಳೆ ಸಭಾಸೇವಕರಾದ ನಾವುಗಳು ನಮ್ಮ ಅಭದ್ರತೆಯನ್ನು ಯೋಚಿಸಿ ನಮ್ಮ ಸಭೆಯ ದೇವಜನರು ಅವರ ಜೀವನಕ್ಕೆ ಅಗತ್ಯವಾದ ಮಾರ್ಗದರ್ಶನವನ್ನು ಸರಿಯಾದವರಿಂದ ಹೊಂದಿಕೊಳ್ಳುವುದಕ್ಕೆ ನಾವುಗಳು ಅಡ್ಡಿಯಾಗುತ್ತವೆ.

**ನಿಯಮದಿಂದ ಅಭ್ಯಾಸದ ಕಡೆಗೆ:** ದೇವ ಜನರೊಂದಿಗೆ ಸಮಾಲೋಚಿಸುವಾಗ ಆತ್ಮಿಕ ಸಂಬಂಧವಾದ ಷರತ್ತುಗಳನ್ನು ಪಾಲಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ನಿಮಗಿರುವ ಮೇರೆಗಳನ್ನು ದಾಟಬೇಡಿ. ನಿಮಗಿಂತಲೂ ಸೂಕ್ತರೆಂದು ಕಂಡು ಬಂದವರ ಬಳಿಗೆ ಹೋಗುವಂತೆ ಪ್ರೋತ್ಸಾಹಿಸಲು ವಿಶಾಲ ಮನಸ್ಸುಳ್ಳವರಾಗಿರಿ.

## ಸುಳ್ಳು ಹಕ್ಕುಗಳು, ಉತ್ಪ್ರೇಕ್ಷೆಗಳು ಮತ್ತು ಎಲ್ಲೆ ಮೀರಿದುದು

ಎಫೆಸದವರಿಗೆ 4:25

**ಆದಕಾರಣ ಸುಳ್ಳಾಡುವುದನ್ನು ಬಿಟ್ಟು ಬಿಟ್ಟು ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ; ಯಾಕೆಂದರೆ ನಾವು ಒಬ್ಬರಿಗೊಬ್ಬರು ಅಂಗಗಳಾಗಿದ್ದೇವಲ್ಲಾ.**

ತೀತನಿಗೆ 2:7-8

**ಸತ್ಕಾರ್ಯ ಮಾಡುವುದರಲ್ಲಿ ನೀನೇ ಮಾದರಿಯಾಗಿರು. ನೀನು ಮಾಡುವ ಉಪದೇಶದಲ್ಲಿ ಯಥಾರ್ಥತ್ವವೂ ಗೌರವವೂ ಆಕ್ಷೇಪಣೆಗೆ ಆಸ್ಪದವಿಲ್ಲದಂಥ ಸ್ವಸ್ಥಬುದ್ಧಿಯೂ ಇರಬೇಕು; ಆಗ ನಮ್ಮನ್ನು ಎದುರಿಸುವವರು ನಮ್ಮ ವಿಷಯದಲ್ಲಿ ಕೆಟ್ಟದ್ದೇನೂ ಹೇಳುವುದಕ್ಕೆ ಅವಕಾಶವಿಲ್ಲದೆ ನಾಚಿಕೊಳ್ಳುವರು.**

ಸತ್ಯವನ್ನೇ ಬೋಧಿಸಬೇಕಾದ ದೇವರ ಸೇವಕರಾದ ನಾವುಗಳು ಕೆಲವು ವೇಳೆ ನಮ್ಮ ಸೇವೆಯ ಫಲಗಳನ್ನು ಕೊಡುವಾಗ ಸುಳ್ಳುಗಳು ಮತ್ತು ಉತ್ಪ್ರೇಕ್ಷೆಗಳಿಂದ ಕೂಡಿದ ಮಿತಿಮೀರಿದ ವರ್ತನೆ ಕಂಡುಬಂದು ಅದರ ಅಳುಕು ನಮ್ಮ ಮನಸ್ಸಿನಲ್ಲಿ ಇರುತ್ತದೆ.

ನನ್ನ ಸೇವೆಯು ಆರಂಭದ ದಿನಗಳಲ್ಲಿ ಈ ರೀತಿಯ ಅಳುಕು ನನ್ನಲ್ಲಿತ್ತು. ನಾನು ಅಮೆರಿಕ ದೇಶದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಅಲ್ಲಿನ ಮಿಷನರಿಗಳು ಸಲ್ಲಿಸುತ್ತಿದ್ದ ಸೇವೆಯ ವಿಧಾನಗಳನ್ನು ನಾನು ಅಳವಡಿಸಿಕೊಂಡಿದ್ದೆ. ಸೇವೆಯ ಪ್ರಮಾಣ ಎಷ್ಟೇ ಚಿಕ್ಕದಾಗಿದ್ದರೂ ಅದಕ್ಕೆ ಸಂಬಂಧಪಟ್ಟಂತೆ ಅತಿ ದೊಡ್ಡ ವರ್ಣರಂಜಿತ ಸಂಚಿಕೆಗಳನ್ನು ಮುದ್ರಿಸಿ ಜನರಿಗೆ ಹಂಚುತ್ತಾ ಅವರೆಲ್ಲರೂ ನನ್ನ ವಿಷಯದಲ್ಲಿ "ನಾನು ದೊಡ್ಡಸಾಧನೆ ಮಾಡಿದೆನೆಂದು ಅಭಿಪ್ರಾಯ ಪಡುವಂತೆ" ನಾನು ಉತ್ಪ್ರೇಕ್ಷೆಯಲ್ಲಿ ಕೊನೆಗೊಳ್ಳುತ್ತಿದ್ದೆನು. ನಾನು ನನ್ನ ಮಿಷನರಿ ಸೇವೆಯ ವಿವರಗಳನ್ನು ಸಿದ್ಧಪಡಿಸುವಾಗ ನನ್ನ ಪತ್ನಿ ಆ್ಯಮಿ ನನಗೆ ಸಲಹೆ ನೀಡಿ ತಿದ್ದಿದ್ದು ನನ್ನ ನೆನಪಿಗೆ ಬರುತ್ತದೆ. ಯಾವುದೇ ಉತ್ಪ್ರೇಕ್ಷೆಗಳಿಲ್ಲದ ಸರಳ ಅಂಶಗಳಿಂದ ಕೂಡಿದ ಸೇವೆಯ ಅಗತ್ಯತೆಯನ್ನು, ಅವುಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಲು ಆ್ಯಮಿಯಿಂದ ನನಗೆ ಸಹಾಯವಾಯಿತು.

ಒಂದು ಸಾರಿ ಬೇರೆ ಪಟ್ಟಣದ ಸಭೆಯ ಒಬ್ಬ ಸೇವಕರು ಅವರ ಸೇವೆಯನ್ನು ಕುರಿತು ನನ್ನೊಂದಿಗೆ ಹಂಚಿಕೊಂಡರು. ಒಂದು ಕೂಟದಲ್ಲಿ ಪ್ರಾರಂಭವಾದ ಭಕ್ತಿ ಸಂಜೀವನ 2-3 ತಿಂಗಳವರೆಗೆ ಆ ಸಭೆಯಲ್ಲಿ ಮುಂದುವರಿಯುತ್ತಾ ಇರುವುದನ್ನು ತಿಳಿಸಿದರು. ಆ ತರುವಾಯ ಅವರೊಂದಿಗೆ ಕೆಲವು ಸಂದರ್ಭಗಳಲ್ಲಿ ಮಾತನಾಡುವ ಅವಕಾಶ ಒದಗಿ ಬಂತು. ಆಗ ಗೊತ್ತಾದದ್ದೇನೆಂದರೆ ಆ ಸೇವಕರು ಆಡಿದ ಮಾತು ಸತ್ಯವಲ್ಲ ಎಂಬುದೇ. ಇದರಿಂದ ಆ ಸೇವಕರು ಭಕ್ತಿ ಸಂಜೀವನದ ಬಗ್ಗೆ ಮಾತನಾಡುವಾಗೆಲ್ಲ ಅವರು ಹೇಳುವುದೆಲ್ಲಾ ಸುಳ್ಳು ಎಂಬುದು ನನಗೆ ಅರಿವಾಗಿದೆ. ಮರುದಿನ ಬೇರೆ ಸ್ಥಳದ ಸೇವಕರಿಗೆ ಈ ವಿಷಯದ ಕುರಿತು ಖಚಿತ ಪಡಿಸುವಂತೆ ಸೂಚಿಸಿದಾಗ ಈ ಸಂಗತಿ ನಿಜವೆಂದು ತಿಳಿದು ಬಂತು. ಇದನ್ನು ಪರಿಶೀಲಿಸಿದ ದೇವರ ಸೇವಕರು ಸ್ಪಷ್ಟಪಡಿಸಿದ್ದೇನೆಂದರೆ ''ಆ ಸೇವಕರು ಬಂದು ಸಭೆಯಲ್ಲಿ ಕೂಟ ನಡೆಸಿದ್ದೇನೋ ನಿಜ. ಆದರೆ ಈ ದಿನದವರೆವಿಗೂ ಅವರಿಂದಲೇ ಇವುಗಳು ನಡೆಯುತ್ತಾ ಇವೆ ಎಂಬುದಂತೂ ಉತ್ಪ್ರೇಕ್ಷೆಯೇ ಸರಿ. ಇದಕ್ಕಿಂತಲೂ ಅವರು ''ನಾನು ನಡೆಸಿದ ಕೂಟದಲ್ಲಿ ಮೂವರು ರಕ್ಷಣೆ ಅನುಭವಕ್ಕೆ ಬಂದು ರಕ್ಷಿಸಲ್ಪಟ್ಟರು ಮತ್ತು ಒಬ್ಬರಿಗೆ ದೆವ್ವದ ಕಾಟದಿಂದ ಬಿಡುಗಡೆಯಾಯಿತು'' ಎಂದು ನಿಜ ಸಂಗತಿಗಳನ್ನು ಹೇಳಿದ್ದರೆ ಎಷ್ಟೋ ಒಳ್ಳೆಯದಾಗಿತ್ತು.

ದೇವರ ಸೇವಕರಾದ ನಾವುಗಳು ಪುರುಷರಾಗಲೀ ಸತ್ಯವನ್ನಲ್ಲದೆ ಬೇರೇನನ್ನೂ ಹೇಳಬಾರದು. ವಿಚಾರಗಳನ್ನು ಯಾವುದೇ ಬಣ್ಣಕಟ್ಟದೆ, ಉತ್ಪ್ರೇಕ್ಷೆಯಿಲ್ಲದೆ ಹೇಳಬೇಕು. ''ಕೂಟದಲ್ಲಿ ಒಂದು ವೇಳೆ ಹತ್ತು ಮಂದಿ ರಕ್ಷಣೆ ಹೊಂದಿದರೆ ಹತ್ತೇ ಮಂದಿ ರಕ್ಷಿಸಲ್ಪಟ್ಟರು ಎಂದು ಹೇಳಬೇಕೇ ವಿನಃ ಬಹಳಷ್ಟು ಜನರು ಕ್ರಿಸ್ತನಿಗೆ ತಮ್ಮನ್ನು ಒಪ್ಪಿಸಿಕೊಟ್ಟರು ಮತ್ತು ಅಗಾಧವಾದ ಪ್ರತಿಕ್ರಿಯೆ ದೊರೆಯಿತು'' ಎಂದು ಹೇಳಬಾರದು. ಒಂದು ವೇಳೆ ನೀವು ಮಧ್ಯ ಪ್ರಾಚ್ಯದ ಕುವೈತ್‌ನಲ್ಲಿ ಪ್ರಸಂಗಿಸಿದರೆ. ಹಿಂತಿರುಗಿ ಬಂದನಂತರ ನಾನು ಪ್ರಪಂಚದ ಎಲ್ಲಾ ದೇಶಗಳಿಗೆ ಭೇಟಿ ನೀಡಿ ಆ ಎಲ್ಲಾ ದೇಶಗಳಲ್ಲಿ ಪ್ರಸಂಗಿಸಿದೆ'' ಎಂದು ಹೇಳಬಾರದು.

ದೇವರ ಸೇವಕರಾದ ನಾವುಗಳು ಸುಳ್ಳಾಡುವುದನ್ನು, ಉತ್ಪ್ರೇಕ್ಷೆ ಮಾಡುವುದನ್ನು ಬಿಟ್ಟುಬಿಡೋಣ. ಸತ್ಯವನ್ನೇ ಹೇಳುವವರು ಮತ್ತು ಶುದ್ಧವಾದ ಮಾತುಗಳನ್ನೇ ಆಡುವವರಾಗಿರೋಣ.

**ನಿಯಮದಿಂದ ಅಭ್ಯಾಸದ ಕಡೆಗೆ:** ಉತ್ಪ್ರೇಕ್ಷೆ ಮತ್ತು ಸುಳ್ಳಾಡುವುದನ್ನು ತಡೆಹಿಡಿಯಿರಿ. ಸ್ಪಷ್ಟ ಮಾತುಗಳನ್ನಾಡಿರಿ.

## ಪ್ರವಾದಿಸುವುದೋ? ಅಥವಾ ಸುಳ್ಳು ಪ್ರವಾದಿಸುವುದೋ?

ಯೆರೆಮೀಯ 14:14

**ಆಗ ಯೆಹೋವನು ನನಗೆ ಹೇಗೆ ನುಡಿದನು-ಪ್ರವಾದಿಗಳು ನನ್ನ ಹೆಸರಿನಿಂದ ಸುಳ್ಳಾಗಿ ಪ್ರವಾದಿಸುತ್ತಾರೆ; ನಾನು ಅವರನ್ನು ಕಳುಹಿಸಲಿಲ್ಲ; ಅವರಿಗೆ ಅಪ್ಪಣೆ ಕೊಡಲಿಲ್ಲ, ಏನೂ ಹೇಳಲಿಲ್ಲ; ಅವರು ಸುಳ್ಳಾದ ದಿವ್ಯ ದರ್ಶನವನ್ನೂ ಕಣಿಯನ್ನೂ ಮಾಯ ತಂತ್ರವನ್ನೂ ಸ್ವಕಲ್ಪಿತ ಮೋಸವನ್ನೂ ನಿಮಗೆ ಪ್ರಕಟಿಸುತ್ತಾರೆ.**

ಯೆರೆಮೀಯ 23:21

**ನಾನು ಈ ಪ್ರವಾದಿಗಳನ್ನು ಕಳುಹಿಸಲಿಲ್ಲ, ತಾವೇ ಆತುರಗೊಂಡರು; ನಾನು ಇವರಿಗೆ ಏನೂ ಹೇಳಲಿಲ್ಲ, ತಾವೇ ಪ್ರವಾದಿಸಿದರು.**

ಯಾವಾಗ ಒಬ್ಬ ದೇವರ ಸೇವಕ ಆತ್ಮಿಕ ಅನುಭವಗಳ ವಿಷಯದಲ್ಲಿ ಸುಳ್ಳು ಹೇಳುವುದಕ್ಕೂ ಮತ್ತು ಉತ್ಪ್ರೇಕ್ಷೆ ಮಾಡುವುದಕ್ಕೂ ಹಿಂಜರಿಯುವುದಿಲ್ಲವೋ ಅಂಥ ಸೇವಕ ತನಗೆ ತೋಚಿದ ಹಾಗೆ ಸುಳ್ಳು ಪ್ರವಾದನೆಗಳನ್ನು ಮಾಡುವುದಿಲ್ಲ ಎಂದು ಭಾವಿಸುತ್ತೀರೋ? ಅನೇಕರು ತಾವೇ ಪ್ರವಾದಿಗಳೆಂದು ನಿರ್ಧರಿಸಿಕೊಂಡು ವಿಶ್ವಾಸಿಗಳ ಬಗ್ಗೆ ಎಲ್ಲಾ ವಿಧವಾದ ತೋಚಿದ ಪ್ರವಾದನೆಗಳನ್ನು ಮಾಡುತ್ತಿರುವುದು ಸಾಧಾರಣ ಸಂಗತಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ವಿಶ್ವಾಸಿಗಳನ್ನು ಕುರಿತು ಈ ರೀತಿಯಾಗಿ ಪ್ರವಾದಿಸುವುದು ಒಂದು ಬಗೆಯ ಪ್ರವೃತ್ತಿ ಇಲ್ಲವೇ ''ಫ್ಯಾಶನ್'' ಆಗಿದೆ. ದೇವರು ನಿಮ್ಮನ್ನು ದೇಶಗಳಿಗೆ ಕೊಂಡೊಯ್ಯುತ್ತಾನೆ ''.....'' ನಿಮ್ಮನ್ನು ಬಲವಾಗಿ ಅಭಿಷೇಕಿಸುತ್ತಾನೆ. ''ನಿಮಗೆ ಯೇಸುವಿನ ಮತ್ತು ದೇವದೂತರ ದರ್ಶನಗಳಾಗುವುವು ''...'' ನಿಮಗೆ ಕನಸುಗಳು ಬೀಳುವವು ಮತ್ತು ಪ್ರಕಟಣೆಗಳಾಗುವವು ''.....'' ನಿಮ್ಮಿಂದ ಬಲವಾದ ಸೇವೆ ಉಂಟಾಗುವುದು ''.......'' ನೀವು ಪ್ರವಾದಿಯಾಗಿ ಉಪಯೋಗಿಸಲ್ಪಡುವಿರಿ ಇತ್ಯಾದಿ...... ಇತ್ಯಾದಿ. ಯಾವ ವಿಶ್ವಾಸಿಯು ಇಂತಹ ಮಾತಿಗೆ ಮರುಳಾಗುವುದಿಲ್ಲ! ಆದರೆ ಕೆಲವರು ಈ ಪ್ರವಾದನೆಗಳು ನಿಜವಾಗುತ್ತವೋ? ಎಂದು ಕಾದು ನೋಡುತ್ತಾರೆ. ಬಡ ವಿಶ್ವಾಸಿ ಮಾತ್ರ ವರುಷದಿಂದ ವರುಷಕ್ಕೆ ಕಾಯುತ್ತ ಈ ಪ್ರವಾದನೆಗಳು ನೆರವೇರುತ್ತವೆ, ದರ್ಶನಗಳಾಗುತ್ತವೆ, ಪ್ರಕಟಣೆಗಳು ಉಂಟಾಗುತ್ತವೆ,

ಪ್ರವಾದನೆಯಿಂದ ಕೂಡಿದ ಸೇವೆ ಇತ್ಯಾದಿಗಳು ಬರುತ್ತವೆ ಎಂದು ತನ್ನನ್ನು ತಾನೇ ಸ್ವತಃ ಪ್ರೋತ್ಸಾಹಿಸಿಕೊಳ್ಳುತ್ತಿರುತ್ತಾನೆ. ಆದರೆ ಇದರ ಲೆಕ್ಕಾಚಾರವನ್ನು ಪರಿಶೀಲಿಸುವುದಕ್ಕೂ ಮತ್ತು ಅಂತಹ ಪ್ರವಾದಿಗಳನ್ನು ಹೊಣೆಗಾರರನ್ನಾಗಿ ಮಾಡುವುದಕ್ಕೂ ಯಾರೂ ಇರುವುದಿಲ್ಲ. ಇದು ತನ್ನನ್ನು ತಾನೇ ಅಭಿಷೇಕಿಸಿಗೊಂಡ ಯಾವುದೇ ಸೇವಕ ಗಲಿಬಿಲಿಗೆ ಒಳಗಾದ ಒಬ್ಬ ವಿಶ್ವಾಸಿಯನ್ನು ತನ್ನ ಕಡೆಗೆ ಸೆಳೆಯುವ ಒಂದು ತಂತ್ರವಾಗಿದೆ.

ದಯವಿಟ್ಟು ಅರ್ಥಮಾಡಿಕೊಳ್ಳಿ ನಾನು ಪ್ರವಾದನೆಯನ್ನು ನಂಬುತ್ತೇನೆ ಮತ್ತು ಅಪೇಕ್ಷಿಸುತ್ತೇನೆ. ಎಲ್ಲಾ ದೇವ ಜನರು ಹೇಗೆ ಪ್ರವಾದಿಸುವುದೆಂಬುದನ್ನು ಕಲಿಯಬೇಕಾಗಿದೆ. ನೈಜವಾದ ಪ್ರವಾದನೆಯ ಹೊನಲು ಬಹು ಆಶ್ಚರ್ಯಕರವು ಮತ್ತು ಆಶೀರ್ವಾದಕರವು ಆಗಿರುತ್ತದೆ. ಆದರೆ ಈ ದಿಶೆಯಲ್ಲಿ ದೇವರ ಸೇವಕರಾದ ನಾವುಗಳು ಎಲ್ಲವನ್ನು ಕ್ರಮವಾಗಿ ಮಾಡುವುದು ಅವಶ್ಯ.

ದೇವರ ಸೇವಕರಾದ ನಾವುಗಳು ನೈಜವಾಗಿ ಪ್ರವಾದಿಸಲು ಕರೆಯಲ್ಪಟ್ಟ ಸೇವೆಯೇ ವಿನಃ ಸುಳ್ಳು ಪ್ರವಾದನೆ ಮಾಡುವುದಕ್ಕಲ್ಲ. ಒಂದು ವೇಳೆ ಪವಿತ್ರಾತ್ಮನು ತಾನೇ ನಮ್ಮೊಂದಿಗೆ ಮಾತನಾಡದಿದ್ದ ಪಕ್ಷದಲ್ಲಿ ನಾವು ನಮ್ಮ ಬಾಯಿಗಳನ್ನು ಮುಚ್ಚಿಕೊಂಡಿರಲು ಕಲಿತುಕೊಳ್ಳಬೇಕಾಗಿರುವುದು ಅವಶ್ಯ. ಬರವಣಿಗೆಯಲ್ಲಿರುವ ದೇವರ ವಾಕ್ಯವೇ ಪ್ರವಾದನೆಗಳಲ್ಲಿ ಮೊಟ್ಟ ಮೊದಲನೆಯ ಸ್ಥಾನ ಪಡೆದಿದೆ ಮತ್ತು ನಾವು ಕೇವಲ ದೇವಜನರನ್ನು ಆ ವಾಕ್ಯದಲ್ಲಿ ಸಂಘಟಿಸುವವರಾಗಿದ್ದೇವೆ. ಬರೆಯಲ್ಪಟ್ಟ ದೇವರ ವಾಕ್ಯವು ಪ್ರತಿಯೊಬ್ಬ ವಿಶ್ವಾಸಿಯಲ್ಲಿ ಖಂಡಿತವಾದ ತಳಹದಿಯಾಗಿದೆ.

ನಮ್ಮ ಪ್ರವಾದನೆಗಳು ನಾವು ಕೇಳುವುದು ಅವಶ್ಯವಾಗಿದೆ. ಒಂದು ವೇಳೆ ಪ್ರವಾದನೆಗಳನ್ನು ಸ್ವೀಕರಿಸಿದವರು ಹೊರಗಿನ ಸಭೆಗಳಿಗೆ ಸೇರಿದವರಾಗಿದ್ದರೆ ತಿದ್ದುಪಡಿಗೂ ಪ್ರಬೋಧನೆಗೂ ಮತ್ತು ಸಂತೈಸುವಿಕೆಗೂ ಈ ವಿಷಯದಲ್ಲಿ ಅವರು ತಮ್ಮ ಸಭಾಪಾಲಕರನ್ನಾಗಲೀ ಅಥವಾ ತಮ್ಮ ಆತ್ಮಿಕ ವಿಷಯಗಳ ಮೇಲ್ವಿಚಾರಕರ ಬಳಿಯಲ್ಲಿಯಾಗಲಿ ಈ ಪ್ರವಾದನೆಯನ್ನು ಕುರಿತು ಮೌಲ್ಯಮಾಪನ ಮಾಡುವುದಕ್ಕೆ ನಾವು ಪ್ರೋತ್ಸಾಹಿಸುವುದು ಅವಶ್ಯಕ.

ಸಾಧ್ಯವಾದಷ್ಟೂ ನಾವು ಪ್ರವಾದಿಸುವುದು ಖಾಸಗಿ ಸ್ಥಳಗಳಲ್ಲಿ ಅಲ್ಲದೆ ಇರುವುದರಿಂದ ಒಂದು ವೇಳೆ ಅಲ್ಲಿರುವವರು ಆತ್ಮೀಕವಾಗಿ ಪರಿಪಕ್ವತೆ

ಹೊಂದಿಲ್ಲದಿರುವ ಸಾಧ್ಯತೆ ಇದ್ದು ನಾವು ಪ್ರವಾದಿಸಿದ ಸಂಗತಿಗಳನ್ನು ತೀರ್ಪಿಗೆ ಒಳಪಡಿಸಲಾಗದು ಎಂಬುದನ್ನೂ ಸಹ ನಾವು ಖಾತರಿ ಮಾಡಿಕೊಳ್ಳಬೇಕಾಗುತ್ತದೆ.

**ನಿಮಯದಿಂದ ಅಭ್ಯಾಸದ ಕಡೆಗೆ**: ಪ್ರವಾದಿಸು, ಸುಳ್ಳಾಗಿ ಪ್ರವಾದಿಸಬೇಡ, ಸುಳ್ಳಾಡಬೇಡ

## ಮತ್ತೊಬ್ಬರಲ್ಲಿ ನೀವು ದೀನಭಾವವುಳ್ಳವರಾಗಿರಿ

ಫಿಲಿಪ್ಪಿಯವರಿಗೆ 2:1-5

**ಕ್ರಿಸ್ತನಿಂದ ಉತ್ತೇಜನ, ಪ್ರೀತಿಯ ಪ್ರೇರಣೆ, ಪವಿತ್ರಾತ್ಮನ ಅನ್ಯೋನ್ಯತೆ, ಕಾರುಣ್ಯ ದಯಾರಸಗಳು ಉಂಟಾಗುವುದಾದರೆ ಐಕಮತ್ಯವುಳ್ಳವರಾಗಿದ್ದು ನನ್ನ ಸಂತೋಷವನ್ನು ಪರಿಪೂರ್ಣ ಮಾಡಿರಿ. ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ, ಅನ್ಯೋನ್ಯಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರ್ರಿ. ಪಕ್ಷಪಾತದಿಂದಾಗಲಿ ಒಣ ಹೆಮ್ಮೆಯಿಂದಾಗಲಿ ಯಾವುದನ್ನೂ ಮಾಡದೆ ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ. ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ. ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ.**

ಇಬ್ಬರು ದೇವರ ಸೇವಕರುಗಳು ಪರಸ್ಪರ ಚರ್ಚಿಸುತ್ತಿದ್ದರು. ಆ ಸಂದರ್ಭದಲ್ಲಿ ಒಬ್ಬರು ಹೀಗೆಂದರು. ನಿಮ್ಮ ಸಭೆಯಿಂದ ಕೆಲವರು ವಾಕ್ಯೋಪದೇಶಕ್ಕಾಗಿ ನನ್ನ ಬಳಿ ಬಂದರು. ನಾನು ಅವರಿಗೆ ಉಪದೇಶಿಸಿದೆ. ಆಗ ಅವರು ಕೊಟ್ಟ ಅಭಿಪ್ರಾಯ ಏನೆಂದರೆ ''ಅಯ್ಯನವರೇ ನೀವು ನಮಗೆ ಮೊದಲೆ ಗೊತ್ತಾಗಿದ್ದರೆ ನಾವು ಆ ಸಭೆಗೆ ಹೋಗದೇ ನಿಮ್ಮ ಸಭೆಗೇ ಬರುತ್ತಿದ್ದೆವು.'' ಒಂದು ನಿಮಿಷ ಯೋಚಿಸಿ ಇದು ಒಬ್ಬ ಸೇವಕರು ಮತ್ತೊಬ್ಬ ಸೇವಕರಿಗೆ ಮುಖದ ಮೇಲೆ ಹೊಡೆದಂತೆ ನಿಗೂಢವಾಗಿ ಚುಚ್ಚಿ ಮಾತಾಡಿದ ಬಗೆ. ಇದು ನಿಜಕ್ಕೂ ಕೆಟ್ಟ ಪ್ರವೃತ್ತಿ.

ಆದರೆ ಈ ಸೇವಕರು ಮತ್ತೋರ್ವರ ಬಗೆಗೆ ಪ್ರಜ್ಞೆ ಇಲ್ಲದೆ ಉದಾಸೀನದಿಂದ ಟೀಕೆ ಮಾಡುವುದು ನನಗೆ ಇನ್ನೂ ಆಶ್ಚರ್ಯವಾಗಿ ತೋರುತ್ತದೆ. ನಾವು ದೇವರ ಸೇವಕರಾಗಿ ಎಷ್ಟರ ಮಟ್ಟಿಗೆ ವರಗಳಿಂದ ತುಂಬಿದ್ದೇನೆ ಅಥವಾ ಅಭಿಷೇಕ ಹೊಂದಿದ್ದೇವೆ ಎಂಬುದು ಇಲ್ಲಿ ಮುಖ್ಯವಲ್ಲ. ನಾವೆಲ್ಲರೂ ಕರ್ತನ ಜೊತೆಯಲ್ಲಿ ಕೆಲಸ ಮಾಡುವವರಾಗಿದ್ದೇವೆ. ಜನರ ಅವಶ್ಯಕತೆಗಳನ್ನು ಪೂರೈಸಲು ದೇವರು ತಾನೇ ನಮ್ಮನ್ನು ವರಗಳಿಂದ ತುಂಬಿಸಿ, ಅಭಿಷೇಕಿಸಿ ಉಪಯೋಗಿಸುವವನಾಗಿದ್ದಾನೆ.

ಆದ್ದರಿಂದ ಈ ಘಟನೆಯನ್ನು ವೈಭವೀಕರಿಸುವುದೂ ಮತ್ತು ಪಾಲಕರು ಆ ವ್ಯಕ್ತಿಯ ಅವಶ್ಯಕತೆಯನ್ನು ಆ ಸಂದರ್ಭದಲ್ಲಿ ಮಾತ್ರ ಪೂರೈಸಲಾಗದೇ ಹೋದದ್ದಕ್ಕಾಗಿ ಅವರನ್ನು ನಿಕೃಷ್ಟವಾಗಿ ಕಾಣುವುದೂ ಎರಡೂ ತಪ್ಪಾಗುತ್ತದೆ.

ದೇವರ ಸೇವಕರನ್ನು ನಾವು ಎಂದಿಗಾದರೂ ಕನಿಷ್ಟರೆಂದೆಣಿಸುವುದಿಲ್ಲ. ಬೇರೊಬ್ಬ ಸೇವಕರಿಗೆ ಎಂದಿಗೂ ನಾವು ಹೀಗೆ ಹೇಳುವುದಿಲ್ಲ. ''ಕಳೆದ ವರ್ಷ ಅಭಿಷೇಕ ಹೊಂದಿದ ಹಾಗೆ ಈ ವರ್ಷ ಇಲ್ಲ'' ಅಥವಾ ''ದೇವರು ನಿನ್ನನ್ನು ಬಲವಾಗಿ ಉಪಯೋಗಿಸುತ್ತಿಲ್ಲ'' ಅಥವಾ ''ನಿನ್ನ ಸಭೆಯು ಸದಸ್ಯರು ನನ್ನ ಬಳಿ ವಾಕ್ಯೋಪದೇಶಕ್ಕಾಗಿ ಬಂದಿದ್ದರು. ನಾನೇ ಅವರ ಅಗತ್ಯತೆಗಳನ್ನು ಪೂರೈಸಿದೆ. ನೀನು ಅವರಿಗಾಗಿ ಏನು ಮಾಡುತ್ತಿದ್ದೆ?'' ಈ ರೀತಿಯಾ ಮಾತುಗಳು ಬಲು ಕೆಟ್ಟ ಪ್ರವೃತ್ತಿಯದ್ದಾಗಿದೆ ಮತ್ತು ಇದರಿಂದ ಯಾವುದೇ ಬಗೆಯ ಅಭಿವೃದ್ಧಿ ಅಥವಾ ತಿದ್ದುಪಡಿ ಆಗಲಾರದು. ಸ್ವಾರ್ಥವನ್ನು ಮಾತ್ರ ಹೆಚ್ಚಿಸುತ್ತದೆ. ದೇವರು ಕೃಪೆಯಿಂದ ಒಬ್ಬ ಮನುಷ್ಯನ ಅವಶ್ಯಕತೆಗಳನ್ನು ಆಯಾ ಸಂದರ್ಭಗಳಲ್ಲಿ ಪೂರೈಸುತ್ತಾನೆ. ಅದಕ್ಕೋಸ್ಕರ ಅಂದರೆ ಕೇವಲ ಒಬ್ಬ ವ್ಯಕ್ತಿಯ ಸಂದರ್ಭೋಚಿತ ಅವಶ್ಯಕತೆಗಳನ್ನು ಪೂರೈಸಲು ಉಪಯೋಗಿಸಲ್ಪಡದ ಸೇವಕರನ್ನು ತುಚ್ಛೀಕರಿಸಿ ಅವರ ಭರವಸೆ ಮತ್ತು ಅಂತರಂಗದ ಶಕ್ತಿಯನ್ನು ಕುಂಠಿತಗೊಳಿಸುವುದು ಸರಿಯಲ್ಲ. ಈ ದಿಶೆಯಲ್ಲಿ ಇತರರ ಸ್ಥಾನಗಳಲ್ಲಿ ನಮ್ಮನ್ನು ನೀವು ಕಲ್ಪಿಸಿಕೊಂಡು ನಿಮ್ಮ ಭಾವನೆಗಳು ಏನೆಂಬುದನ್ನು ಚಿಂತಿಸಿ ಅನುಭವಿಸಿರಿ ಯೋಚಿಸಿರಿ.

ಒಂದು ಸಾರಿ ಒಬ್ಬ ಮಹಿಳೆ ನನ್ನನ್ನು ಸಂಪರ್ಕಿಸಿ ತಾನು ಖರೀದಿಸಿದ್ದ ಒಂದು ನಿವೇಶನದಲ್ಲಿ ಮನೆಕಟ್ಟುವ ಯೋಚನೆಯನ್ನು ಅದರ ನಿರ್ಮಾಣದ ಪ್ರಾರಂಭೋತ್ಸವದ ಕುರಿತು ಮಾತನಾಡುತ್ತಾ ಹೀಗೆಂದರು-''ಪಾಲಕರೆ, ನೀವು ಶುದ್ಧ ಹಸ್ತಗಳುಳ್ಳ ಮನುಷ್ಯರೆಂದು ಕೇಳಿದ್ದೇನೆ. ಆದ್ದರಿಂದ ಈ ಭೂಮಿ ಅಗೆತದ ಪ್ರಾರಂಭವನ್ನು ನಿಮ್ಮಿಂದಲೇ ಮಾಡಿಸಬೇಕೆಂದಿದ್ದೇನೆ'' ಇತ್ಯಾದಿ ಇತ್ಯಾದಿ. ಇದು ನಿಜಕ್ಕೂ ತೀವ್ರವಾದ ಹೊಗಳಿಕೆಯಿಂದ ಕೂಡಿದ ಆಹ್ವಾನವಾಗಿತ್ತು. ಆದರೆ ಇದನ್ನು ನಾನು ಬಹು ಕಾರಣಗಳಿಗಾಗಿ ವಿನಯದಿಂದ ತಿರಸ್ಕರಿಸಿದೆ. ಈ ಮಹಿಳೆಯ ಆತ್ಮಿಕ ವಿಷಯಗಳ ಬಗ್ಗೆ ನಾನು ನೇರವಾಗಿ ಮೇಲ್ವಿಚಾರಕನಾಗಿರಲಿಲ್ಲ. ಆದರೂ ಭೂ ಅಗೆತದಿಂದ ಕಾರ್ಯದಲ್ಲಿ ಭಾಗವಹಿಸುವುದು ಸಮಸ್ಯೆಯಾಗಿರಲಿಲ್ಲ. ಪರಿಸ್ಥಿತಿ ಏನೆಂದರೆ ಮೊದಲನೆಯದಾಗಿ ಆಕೆಯ ಆತ್ಮಿಕ ಅಭಿವೃದ್ಧಿಗೆ ಆತ್ಮಿಕ ಜೀವನಕ್ಕೆ ನೆರವಾಗುತ್ತಿರುವ

ಆಕೆಯ ಸಭಾಪಾಲಕರನ್ನು ಈ ವಿಷಯದಲ್ಲಿ ಸ್ಥಾನ ನೀಡದೆ, ಗೌರವಿಸದೆ ಇದ್ದದ್ದು ಸರಿಯೋ? ಎರಡನೆಯದಾಗಿ ನನಗಿರುವ ಸಮಯ ಮಿತಿಯುಳ್ಳದ್ದು. ನಾನು ಅದನ್ನು ನೇರವಾಗಿ ನನ್ನ ಜವಾಬ್ದಾರಿಕೆಯಲ್ಲಿರುವ ಜನರ ಆತ್ಮೀಕ ಅಭಿವೃದ್ಧಿಗಾಗಿ ಉಪಯೋಗಿಸಲು ಇಚ್ಛಿಸುತ್ತೇನೆ. ಯಾಕೆಂದರೆ ಇದು ಬಹಳವಾಗಿ ಮುಖ್ಯವಾದುದು. ಮೂರನೆಯದಾಗಿ ಮುಂದೆ ತನ್ನ ಸ್ವಂತ ಸಭೆಗೆ ಸಂಬಂಧಿಸಿದ ಸಮಸ್ಯೆಗಳು ಈ ಮಹಿಳೆಗೆ ಎದುರಾದರೆ ಆಕೆ ಖಂಡಿತವಾಗಿ ನನ್ನ ಬಳಿ ಸಲಹೆಗೆ ಬಾರದೆ ಆಕೆ ಅವರ ಸಭಾಪಾಲಕರ ಬಳಿಗೆ ಹೋಗುವ ಸಂಭವವೇ ಹೆಚ್ಚು. ಆದ್ದರಿಂದ ಆಕೆಯ ಕಷ್ಟ ಸಮಸ್ಯೆಗಳ ಪರಿಹಾರಕ್ಕೆ ನೆರವಾಗುವ ಪಾಲಕರು ಆಕೆಯ ಸಂತೋಷ ಮತ್ತು ಆಶೀರ್ವಾದದ ಸಮಯಗಳಲ್ಲಿಯೂ ಯಾರ ಪಾಲುಗಾರರಾಗಬಾರದು. ಒಂದು ವೇಳೆ ಆಕೆ ತನ್ನ ಸಭಾಪಾಲಕರನ್ನು ಸಂಪರ್ಕಿಸಿ ಅವರೊಂದಿಗೆ ಮಾತನಾಡಿ ಈ ವಿಷಯದಲ್ಲಿ ಅವರ ಒಪ್ಪಿಗೆ ಪಡೆದು ನಂತರ ನನ್ನನ್ನು ಈ ಕಾರ್ಯದಲ್ಲಿ ಭಾಗವಹಿಸಲು ಆಹ್ವಾನಿಸಿದರೆ ಅಪಚಾರವೇನಿಲ್ಲ. ಅದು ಎಂದಿಗೂ ಸಮಸ್ಯೆಯಾಗುವುದಿಲ್ಲ. ಹೇಗೂ ಕಾರ್ಯಗಳನ್ನು ಯುಕ್ತವಾಗಿ ಮತ್ತು ಕ್ರಮದಿಂದ ನಡೆಸುವುದು ಒಳ್ಳೆಯದು.

**ನಿಯಮದಿಂದ ಅಭ್ಯಾಸದ ಕಡೆಗೆ**: ನಿಮ್ಮ ಸಹಸೇವಕರನ್ನು ನಿಮ್ಮಂತೆಯೇ ಭಾವಿಸಿ ಅವರು ನಿಮಗೆ ಏನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ.

## ನಿಮ್ಮ ಸಹೋದರರ ಬಗ್ಗೆ ನೀವು ಏನು ಹೇಳುತ್ತೀರಿ? ಎಚ್ಚರಿಯಾಗಿರಿ

1 ಸಮುವೇಲನು 26:9

**ಆದರೆ ದಾವೀದನು-ಅವನನ್ನು ಕೊಲ್ಲಬೇಡ; ಯೆಹೋವನ ಅಭಿಷಿಕ್ತನಿಗೆ ವಿರೋಧವಾಗಿ ಕೈಯೆತ್ತುವ ಯಾವನಾದರೂ ನಿರಪರಾಧಿಯೆಂದು ಎಣಿಸಲ್ಪಡುವನೋ ಅಂದನು.**

1 ಸಮುವೇಲನು 26:11

**ತನ್ನ ಅಭಿಷಿಕ್ತನಿಗೆ ವಿರೋಧವಾಗಿ ಕೈಯೆತ್ತದಂತೆ ಯೆಹೋವನೇ ನನ್ನನ್ನು ತಡೆಯಲಿ. ಈಗ ಅವನ ತಲೆಯ ಬಳಿಯಲ್ಲಿರುವ ಬರ್ಜಿಯನ್ನೂ ತಂಬಿಗೆಯನ್ನೂ ತೆಗೆದುಕೊಂಡು ಹೋಗೋಣ....**

ಯಾಕೋಬನು 3:8-10

**ಆದರೆ ನಾಲಿಗೆಯನ್ನು ಯಾವ ಮಾನವನೂ ಹತೋಟಿಗೆ ತರಲಾರನು. ಅದು ಸುಮ್ಮನಿರಲಾರದ ಕೆಡುಕಾಗಿದೆ. ಮರಣಕರವಾದ ವಿಷದಿಂದ ತುಂಬಿದೆ. ನಾಲಿಗೆಯಿಂದ ತಂದೆಯಾದ ಕರ್ತನನ್ನು ಕೊಂಡಾಡುತ್ತೇವೆ. ಆದ್ದರಿಂದಲೇ ದೇವರ ಹೋಲಿಕೆಗೆ ಸರಿಯಾಗಿ ಉಂಟುಮಾಡಲ್ಪಟ್ಟ ಮನುಷ್ಯರನ್ನು**

**ಶಪಿಸುತ್ತೇವೆ. ಅದೇ ಬಾಯಿಂದ ಸ್ತುತಿ ಶಾಪ ಎರಡೂ ಬರುತ್ತೇವೆ. ನನ್ನ ಸಹೋದರರೇ, ಹೀಗಿರುವುದು ಯೋಗ್ಯವಲ್ಲ.**

ದೇವರ ಸೇವಕರಾದ ನಾವುಗಳು ಕೆಲವು ವೇಳೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ನಮ್ಮ ಮಾತುಗಳಲ್ಲಿ ತುಚ್ಛೀಕರಿಸಿ, ನಿಂದಿಸಿ ಅವರನ್ನು ಅವಮಾನಗೊಳಿಸುತ್ತೇವೆ. ಒಬ್ಬ ದೇವರ ಸೇವಕನು ದೇವರಿಗಾಗಿ ಉಪಯೋಗಿಸಲ್ಪಡುವುದು ಮತ್ತು ಅದೇ ಸಮಯದಲ್ಲಿ ಇಡೀ ಜಗತ್ತೇ ತನ್ನ ಕಾಲು ಬಳಿಯಲ್ಲಿದೆ ಎಂದು ಭಾವಿಸುವುದು ಮತ್ತು ಇತರೆ ಸೇವಕರುಗಳ ಬಗೆಗೆ ಕೆಟ್ಟ ಮಾತುಗಳನ್ನಾಡಲು ಹಿಂಜರಿಯದೇ ಇರುವುದು ಬಹು ರಂಜನೀಯವಾಗಿ ತೋರುತ್ತದೆ.

ಯಾವಾಗ ನಾವು ದೈವಿಕ ಕ್ರಮವನ್ನು ಅನುಸರಿಸಿ ನಡೆಯುತ್ತೇವೋ ಆಗ ಇತರ ಸೇವಕರಿಗೆ ಬಂದ ಕರೆ, ದೊರೆತ ವರದಾನಗಳು ಮತ್ತು ಉಂಟಾದ ಅಭಿಷೇಕವನ್ನು ಗೌರವಿಸಲು ಕಲಿಯುತ್ತೇವೆ. ಇತರರ ಸೇವೆಯನ್ನು ಮೊಟಕುಗೊಳಿಸಿ ಆ ಮೂಲಕ ನಮ್ಮ ಸೇವೆಯನ್ನು ಅಭಿವೃದ್ಧಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಒಂದು ವೇಳೆ ಪಟ್ಟಣದ ಎಲ್ಲಾ ಕ್ರಿಸ್ತೀಯ ಸಭಾಸೇವಕರು ತಾವು ಇತರೆ ಸೇವಕರುಗಳ ಬಗ್ಗೆ ಆಡಿದ ಮಾತನ್ನು ಎಚ್ಚರಿಕೆಯಿಂದ ಗಮನಿಸಿದ ಪಕ್ಷದಲ್ಲಿ ಸಭೆಗಳ ನಡುವೆ ಭಿನ್ನಭೇದಗಳನ್ನು ಜಗಳಗಳನ್ನು ತಂದೊಡ್ಡುವ ಸೈತಾನನಿಗೆ ನಾಶಮಾಡುವ ಅವಕಾಶಗಳು ಕಡಿಮೆಯಾಗುತ್ತವೆ ಎನ್ನಬಹುದು. ಆಗ ಪಟ್ಟಣ ವ್ಯಾಪ್ತಿ ಮತ್ತು ಸ್ಥಳೀಯ ಸಭೆಗಳು ಹೆಚ್ಚು ಬಲದಿಂದಲೂ ಮತ್ತು ಸ್ವಸ್ಥತೆಯಿಂದಲೂ ಕೂಡಿರಲು ಸಾಧ್ಯ.

ದೇವರ ಸೇವಕರಾದ ನಾವು ಪರಿಶುದ್ಧತೆಯಲ್ಲಿ ನಡೆಯೋಣ. ನಮ್ಮನ್ನು ಅಭಿಷೇಕಿಸಿದ ಪವಿತ್ರಾತ್ಮನೇ ಇತರೆ ಸಹ ಸೇವಕರನ್ನು ಅಭಿಷೇಕಿಸಿದ್ದಾನೆ ಎಂಬುದನ್ನು ಜ್ಞಾಪಕ ಮಾಡಿಕೊಳ್ಳೋಣ. ಇತರೆ ಸೇವಕರ ಕುರಿತು ಕೆಟ್ಟದನ್ನು ಆಡದಿರೋಣ.

**ನಿಯಮದಿಂದ ಅಭ್ಯಾಸದ ಕಡೆಗೆ**: ನಿಮ್ಮ ಸಹ ಸೇವಕರ ಬಗ್ಗೆ ಎಂದಿಗಾದರೂ ಕೆಟ್ಟದ್ದನ್ನು ಆಡದಿರಿ.

## ವಿಮರ್ಶೆಯನ್ನು ನಿರ್ವಹಿಸುವುದು

ರೋಮಾಪುರದವರಿಗೆ 12:16 ಬಿ-19

**ನಿಮ್ಮನ್ನು ನೀವೇ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ. ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ. ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ.**

**ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ. ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವುದನ್ನು ದೇವರಿಗೆ ಬಿಡಿರಿ. ಯಾಕೆಂದರೆ ಮುಯ್ಯಿಗೆ ಮುಯ್ಯಿ ತೀರಿಸುವುದು ನನ್ನ ಕೆಲಸ. ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬುದಾಗಿ ಬರೆದಿದೆ.**

2 ಕೊರಿಂಥದವರಿಗೆ 6:3,4,8

**ನಿಂದೆಗೆ ಅವಕಾಶಕೊಡದೆ ಎಲ್ಲಾ ಸಂಗತಿಗಳಲ್ಲಿ ದೇವರ ಸೇವಕರೆಂದು ನಮ್ಮನ್ನು ಸಮ್ಮತರಾಗ ಮಾಡಿಕೊಳ್ಳುತ್ತೇವೆ. ನಾವು ಸಂಕಟಗಳಲ್ಲಿಯೂ ಕೊರತೆಗಳಲ್ಲಿಯೂ ಇಕ್ಕಟ್ಟುಗಳಲ್ಲಿಯೂ ಪೆಟ್ಟುಗಳಲ್ಲಿಯೂ.... ಧರಿಸಿಕೊಂಡವರೂ ಮಾನ, ಅವಮಾನ ಕೀರ್ತ ಅಪಕೀರ್ತಿಗಳನ್ನು ಹೊಂದಿದವರೂ ಆಗಿದ್ದೇವೆ. ಮೋಸಗಾರರೆನಿಸಿಕೊಂಡರೂ ಸತ್ಯವಂತರು.**

ಪ್ರತಿಯೊಬ್ಬ ದೇವರ ಸೇವಕನೂ ವಿಮರ್ಶೆ, ಸುಳ್ಳು ಆಪಾದನೆಗಳು, ಮಾನನಷ್ಟ ಹಾಗೂ ಅಂತಹದೇ ಪ್ರಕರಣಗಳು ಮುಂತಾದವುಗಳನ್ನು ಮುಖಾಮುಖಿಯಾಗಿ ಎದರಿಸಬೇಕಾಗುತ್ತದೆ. ಇಲ್ಲಿ ಆಶ್ಚರ್ಯ ಹುಟ್ಟಿಸುವೇನೆಂದರೆ ಕೆಲವು ವೇಳೆ ವಿಮರ್ಶೆ ಮತ್ತು ಕೆಟ್ಟ ವರದಿಗಳು ಸಹ ಸೇವಕರಿಂದಲೇ ಮತ್ತು ದೇವಜನರಿಂದಲೇ ಬರುವಂಥದ್ದಾಗಿದೆ. ನಾವು ಎಷ್ಟೇ ಪ್ರಯತ್ನ ಪಟ್ಟು ನಮ್ಮ ಸ್ವಂತ ಜೀವನದಲ್ಲಿ ಮತ್ತು ಇತರರ ಎದುರಿನಲ್ಲಿ ಗೌರವಯುತವಾಗಿ ನಡೆದುಕೊಂಡರೂ ಸಹ ಯಾರಾದರೂ ಒಬ್ಬರು ನಮ್ಮನ್ನು ಟೀಕಿಸಿ, ನಮ್ಮ ಸೇವೆಯನ್ನು ಸ್ಮರಿಸದೆ ನಿಂದಿಸುವವರಿರುತ್ತಾರೆ. ಇವುಗಳಲ್ಲಿ ಕೆಲವು ಉದ್ದೇಶ ಪೂರ್ವಕವಾಗಿದ್ದರೆ ಇನ್ನೂ ಕೆಲವು ಕೇವಲ ಮೌಢ್ಯದಿಂದ ಉಂಟಾದದ್ದಾಗಿರುತ್ತದೆ.

ಇವುಗಳನ್ನು ನಾವು ತಡೆಹಿಡಿಯುವುದು ಸಾಧ್ಯವಾಗದಿದ್ದರೂ ವಿಮರ್ಶೆ ಸುಳ್ಳು ಆಪಾದನೆಗಳು, ಮಾನನಷ್ಟ ಇತ್ಯಾದಿ ಪ್ರಕರಣಗಳಿಗೆ ನಾವು ನೀಡುವ ಪ್ರತಿಕ್ರಿಯೆ ಮತ್ತು ನಮ್ಮ ಸ್ಪಂದಿಸುವಿಕೆಯನ್ನು ಖಂಡಿತವಾಗಿಯೂ ಹತೋಟಿಯಲ್ಲಿಟ್ಟು-ಕೊಳ್ಳಬಹುದು. ಈ ವಿಷಯದಲ್ಲಿ ನಾವು ಜ್ಞಾನಿಗಳಾಗಿದ್ದು ಕೆಟ್ಟದ್ದಕ್ಕೆ ತಿರುಗಿ ಕೆಟ್ಟದ್ದೇ ಸರಿ ಎಂದು ಯೋಚಿಸದೆ ಮುಯ್ಯಿ ತೀರಿಸಿಕೊಳ್ಳುವವರಾಗಬಾರದು. ಪ್ರತೀಕಾರ ಮತ್ತು ಸೇಡಿನ ಮನೋಭಾವ ಬಿಟ್ಟು ಎಲ್ಲರೊಂದಿಗೆ ಶಾಂತಿಯುತ ಬಾಳ್ವೆ ನಡೆಸುವವ-ರಾಗಿರಬೇಕು. ಇದು ನಿಜವಾಗಿ ನಮ್ಮ ನಡತೆಯನ್ನು ಪರೀಕ್ಷಿಸುವುದಾಗಿರುತ್ತದೆ. ಈ ಸಂದರ್ಭಗಳಲ್ಲಿ ನಾವು ಹೇಗೆ ವರ್ತಿಸುತ್ತೇವೆಂಬುದು ನಾವು ಎಷ್ಟರ ಮಟ್ಟಿಗೆ ಕ್ರಿಸ್ತನ ಸಾಮೀಪ್ಯದ ಕಡೆಗೆ ಬೆಳೆದಿದ್ದೇವೆಂಬುದನ್ನು ನಿರೂಪಿಸುತ್ತದೆ.

ನಿಯಮದಿಂದ ಅಭ್ಯಾಸದ ಕಡೆಗೆ: ವಿಮರ್ಶೆ ಮತ್ತು ಸುಳ್ಳು ಆಪಾದನೆಗಳಿಗೆ ಕ್ರಿಸ್ತನ ಸಾರೂಪ್ಯದಲ್ಲಿ ಸ್ಪಂದಿಸುವುದನ್ನು ಕಲಿತುಕೊಳ್ಳಿ.

## ಹೊಗಳಿಕೆಯ ಬಗ್ಗೆ ಎಚ್ಚರದಿಂದಿರಿ

ಯಾಕೋಬನು 2:1-9

**ನನ್ನ ಸಹೋದರರೇ, ಪ್ರಭಾವವುಳ್ಳ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಪಕ್ಷಪಾತಿಗಳಾಗಿರಬಾರದು. ಹೇಗೆಂದರೆ ಒಬ್ಬ ಮನುಷ್ಯನು ಚಿನ್ನದ ಉಂಗುರವನ್ನೂ ಶೋಭಾಯಮಾನವಾದ ವಸ್ತ್ರಗಳನ್ನೂ ಹಾಕಿಕೊಂಡು ನಿಮ್ಮ ಸಭಾಮಂದಿರದೊಳಗೆ ಬರಲು ಮತ್ತು ಒಬ್ಬ ಬಡಮನುಷ್ಯನು ಹೀನವಾದ ಬಟ್ಟೆ ಹಾಕಿಕೊಂಡು ಬರಲು ನೀವು ಶೋಭಾಯಮಾನವಾದ ವಸ್ತ್ರಗಳನ್ನು ಧರಿಸಿಕೊಂಡಿರುವವನನ್ನು ಮರ್ಯಾದೆಯಿಂದ ನೋಡಿ ಅವನಿಗೆ ನೀವು ಇಲ್ಲಿ ಸುಖಾಸನದ ಮೇಲೆ ಕೂತುಕೊಳ್ಳಿರಿ ಎಂತಲೂ ಆ ಬಡಮನುಷ್ಯನಿಗೆ ನೀನು ಅಲ್ಲಿ ನಿಂತುಕೊ, ಇಲ್ಲವೇ ನನ್ನ ಕಾಲ್ಮಣೆಯ ಹತ್ತಿರ ನೆಲದ ಮೇಲೆ ಕೂತುಕೋ ಎಂತಲೂ ಹೇಳಿದರೆ ನೀವು ನಿಮ್ಮಲ್ಲಿ ಭೇದಮಾಡುವವರಾಗಿ ಅನ್ಯಾಯವಾದ ತೀರ್ಪನ್ನು ಮಾಡುವವರಾದಿರಲ್ಲಾ. ನನ್ನ ಪ್ರಿಯ ಸಹೋದರರೇ, ಕೇಳಿರಿ, ದೇವರು ಲೌಕಿಕ ವಿಷಯದಲ್ಲಿ ಬಡವರಾಗಿರುವವರನ್ನು ಆದುಕೊಂಡು ಅವರು ನಂಬಿಕೆಯಲ್ಲಿ ಐಶ್ವರ್ಯವಂತರಾಗಿಯೂ ತನ್ನನ್ನು ಪ್ರೀತಿಸುವವರಿಗೆ ತಾನು ವಾಗ್ದಾನ ಮಾಡಿದ ರಾಜ್ಯಕ್ಕೆ ಬಾಧ್ಯರಾಗಿಯೂ ಇರಬೇಕೆಂದು ನೇಮಿಸಲಿಲ್ಲವೋ? ನೀವಾದರೋ ಬಡವರನ್ನು ಅಪಮಾನಪಡಿಸಿದ್ದೀರಿ. ನಿಮ್ಮನ್ನು ಬಾಧಿಸಿ ನ್ಯಾಯಸ್ಥಾನಕ್ಕೆ ಎಳೆದುಕೊಂಡು ಹೋಗುವವರು ಐಶ್ವರ್ಯವಂತರಲ್ಲವೋ? ನೀವು ಕರೆಸಿಕೊಳ್ಳುವ ಶ್ರೇಷ್ಠವಾದ ನಾಮವನ್ನು ದೂಷಿಸುವವರು ಅವರಲ್ಲವೋ? ಆದರೂ ಶಾಸ್ತ್ರಕ್ಕೆ ಸರಿಯಾಗಿ ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕೆಂಬ ರಾಜಾಜ್ಞೆಯನ್ನು ನೀವು ನೆರವೇರಿಸುತ್ತಿದ್ದರೆ ನೀವು ಒಳ್ಳೇದನ್ನು ಮಾಡುವವರು. ಅದನ್ನು ಬಿಟ್ಟು ಪಕ್ಷಪಾತ ತೋರಿಸುವವರಾಗಿದ್ದರೆ ನೀವು ಪಾಪ ಮಾಡುವವರಾಗಿದ್ದು ಅಪರಾಧಿಗಳೆಂದು ಧರ್ಮಶಾಸ್ತ್ರದಿಂದ ತೀರ್ಮಾನಿಸಲ್ಪಡುತ್ತೀರಿ.**

1 ತಿಮೊಥೆಯನಿಗೆ 5:21, 22

**ನೀನು ವಿಚಾರಿಸುವುದಕ್ಕೆ ಮೊದಲೇ ತಪ್ಪು ಹೊರಿಸಿದೆಯೂ ಪಕ್ಷಪಾತದಿಂದ ಏನೂ ಮಾಡದೆಯೂ ನಾನು ಹೇಳಿರುವ ಮಾತುಗಳ ಪ್ರಕಾರವೇ ನಡೆಯಬೇಕೆಂದು ದೇವರ ಮುಂದೆಯೂ ಯೇಸುವಿನ ಮುಂದೆಯೂ ಆಯಲ್ಪಟ್ಟಿರುವ ದೇವದೂತರ ಮುಂದೆಯೂ ಖಂಡಿತವಾಗಿ ಹೇಳುತ್ತೇನೆ. ಅವಸರದಿಂದ ಯಾರ ತಲೆಯ ಮೇಲೆಯಾದರೂ ಹಸ್ತವನ್ನಿಟ್ಟು ಸಭೆಯ ಉದ್ಯೋಗಕ್ಕೆ ನೇಮಿಸಬೇಡ ಹಾಗೆ ನೇಮಿಸಿದರೆ ಮತ್ತೊಬ್ಬರು ಮಾಡಿದ ಪಾಪದಲ್ಲಿ ನೀನು ಪಾಲುಗಾರನೆಂದು ತೋರಿ ಬಂದೀತು, ನೀನು ಶುದ್ಧನಾಗಿರುವ ಹಾಗೆ ನೋಡಿಕೋ.**

ನಾವು ವಿಶ್ವಾಸಿಗಳೊಂದಿಗೆ ಉದ್ಯೋಗಸ್ಥರೊಂದಿಗೆ ಸಾಮಾಜಿಕವಾಗಿ ಅಥವಾ ಆರ್ಥಿಕವಾಗಿ ಉನ್ನತ ಸ್ಥಿತಿಯಲ್ಲಿರುವವರೊಂದಿಗೆ ಒಡನಾಟ ಮಾಡುವಾಗ ಅವರ ಹೊಗಳಿಕೆಯ ವಿರುದ್ಧ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕಾಗಿದೆ. ವಿಶ್ವಾಸಿಗಳು ಉದ್ದೇಶ

ಪೂರ್ವಕವಾಗಿಯೋ ಅಥವಾ ಯಾವುದೇ ಉದ್ದೇಶವಿಲ್ಲದೆಯೋ ಬಹಳವಾಗಿ ಆತ್ಮಿಕ ವಿಷಯಗಳನ್ನು ಕುರಿತು ನಮ್ಮೆದುರಿಗೆ ಮಾತನಾಡುವಾಗ ಅವರು ಕರ್ತನಿಗೆ ಪೂರ್ಣವಾಗಿ ಪ್ರತಿಷ್ಠಿಸಲ್ಪಟ್ಟವರೆಂದು ಭಾವಿಸುತ್ತೇವೆ. ನಿಜವಾಗಿ ಹೇಳಬೇಕೆಂದರೆ ಅವರ ಮಾತುಗಳ ಮಟ್ಟಕ್ಕಿಂತ ಆಳವಾಗಿ ಅವರು ಕರ್ತನಿಗೆ ಪ್ರತಿಷ್ಠಿಸಿಕೊಂಡವರಲ್ಲ. ನಮ್ಮೆದುರಿನಲ್ಲಿ ದೇವದೂತರಂತೆ ವರ್ತಿಸುತ್ತಾರೆ. ಆದರೆ ಸಭಾಪಾಲಕರು ಹಾಗೂ ಹಿರಿಯರು ಅವರನ್ನು ಗಮನಿಸದೆ ಇರುವಾಗ ಹೇಗೆ ವರ್ತಿಸುತ್ತಾರೆಂಬುದನ್ನು ನಿಜವಾಗಿ ಹೇಳದಿರುವುದೇ ವಾಸಿ ಬಹುಶಃ ವಿವೇಚನೆಯ ಕೊರತೆಯಿಂದಲೇ ನಮ್ಮಲ್ಲಿ ಹೆಚ್ಚಿನವರು ಇಂತಹ ಹೊಗಳಿಕೆಗೆ ಬಲಿಯಾಗಿ ಬಿಟ್ಟುಹೋಗುವುದು ಮತ್ತು ಆ ರೀತಿ ಹೊಗಳುವ ವಿಶ್ವಾಸಿಗಳನ್ನೇ ನಿಜವಾಗಿಯೂ ಅವರು ಆತ್ಮಿಯ ಜವಾಬ್ದಾರಿ ಸೇವೆಯನ್ನು ನಿರ್ವಹಿಸಲು ಇಂಥಹವರು ಸಮರ್ಥರೇ ಎಂಬುದನ್ನು ಪರೀಕ್ಷಿಸುವ ಗೋಜಿಗೇ ಹೋಗದೇ ಆತುರ ಆತುರವಾಗಿ ಇವರಿಗೆ ಹೊಣೆಗಾರಿಕೆಯನ್ನು ನೀಡಲಾಗುತ್ತದೆ. ಕೂಡಲೇ ಅಥವಾ ಆ ನಂತರ ನಿಜ ಹೊರಬೀಳುತ್ತದೆ ಮತ್ತು ಕೆಲವು ಪ್ರಕರಣಗಳಲ್ಲಿ ಅಷ್ಟರಲ್ಲಿಯೇ ಆ ಸಂಬಂಧಪಟ್ಟ ವಿಶ್ವಾಸಿಗಳು ಇತರೇ ವಿಶ್ವಾಸಿಗಳನ್ನು ನೋಯಿಸಿ ಇಲ್ಲವೇ ನಿಂದಿಸಿ ಸಾಕಷ್ಟು ನಷ್ಟವನ್ನು ಉಂಟುಮಾಡಿರುತ್ತಾರೆ.

ಈ ಸಂಬಂಧದಲ್ಲಿ ದೇವರ ಸೇವಕರಾದ ನಾವುಗಳು ಮತ್ತೊಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕಾದ ಅಗತ್ಯತೆ ಇದೆ. ಅದೇನೆಂದರೆ ವಿದ್ಯಾವಂತರಾಗಿದ್ದು ಉದ್ಯೋಗದಲ್ಲಿ ಪರಿಣಿತರಾಗಿದ್ದ ಮಾತ್ರಕ್ಕೆ ಅಥವಾ ಹಣಕಾಸಿನಲ್ಲಿ ಸಾಕಷ್ಟು ಸ್ಥಿತಿವಂತರಾಗಿದ್ದ ಮಾತ್ರಕ್ಕೆ ಅವರು ಅದರ ನಿಮಿತ್ತ ಕ್ರಿಸ್ತೀಯ ಸೇವೆಗೆ ಸೂಕ್ತವಾದವರು ಎಂದು ಅರ್ಥವಲ್ಲ. ಉಧ್ಯಮದಲ್ಲಿ 50 ಮಂದಿಯ ಮೇಲಿನ ಮೇಲ್ವಿಚಾರಣೆ ಕಾರ್ಯಕ್ಕಿಂತಲೂ ಒಂದು ಸಭೆಯ 50 ಮಂದಿ ವಿಶ್ವಾಸಿಗಳನ್ನು ಕಾಯುವುದು ಭಿನ್ನವಾಗಿದೆ. ಕೆಲವು ಮಂದಿಯ ಕೌಶಲ್ಯ ಮತ್ತು ಕೆಲವು ಬಗೆಯ ನಾಯಕತ್ವದ ನೈಪುಣ್ಯತೆ ಒಬ್ಬರಿಂದೊಬ್ಬರಿಗೆ ''ನಾಯಕತ್ವವನ್ನೇ'' ರೂಪಿಸುತ್ತದೆ. ಆದರೆ ಈ ರೀತಿಯ ರೂಪಾಂತರ ವಾಣಿಜ್ಯ ಪ್ರಪಂಚದಲ್ಲಿ ಅಭಿವೃದ್ಧಿಯಾಗಿಲ್ಲ. ಆದರೂ ಬಹುಪಾಲು ಸಭಾಪಾಲಕರುಗಳು ವಿವೇಚನೆಯಿಂದ ವರ್ತಿಸದೆ ಜನರು ವಾಣಿಜ್ಯ ಪ್ರಪಂಚದಲ್ಲಿ ಸಾಧಿಸಿರುವ ಕೀರ್ತಿ ಸಾಧನೆ ಪ್ರಭಾವಗಳನ್ನೇ ಗಣನೆಗೆ ತೆಗೆದುಕೊಂಡು ಅವರನ್ನು ಸಭೆಯೊಳಗೆ ಆತ್ಮಿಕ ಜವಾಬ್ದಾರಿಯ ಸೇವೆಗಳಿಗೆ ನೇಮಿಸಿ ಬಿಡುತ್ತಾರೆ. ಹೀಗೆ ಮಾಡುವುದು ಜಾಣ್ಮೆಯ ಕಾರ್ಯವಲ್ಲ.

**ನಿಯಮದಿಂದ ಅಭ್ಯಾಸದ ಕಡೆಗೆ**: ಯಾವುದನ್ನೂ ಪಕ್ಷಪಾತದಿಂದ ಮಾಡಬೇಡಿ. ಆತ್ಮಿಕ ವಿವೇಚನೆಯಿಲ್ಲದೆ ಎಂದೂ ನಡೆದುಕೊಳ್ಳಬೇಡಿ.

## ಆತ್ಮಿಕ ಹೊದಿಕೆಯೋ ಅಥವಾ ಭಕ್ತಿಯ ಮುಖವಾಡವೋ?

2 ಕೊರಿಂಥದವರಿಗೆ 8:23

**ತೀತನನ್ನು ಕುರಿತು ಕೇಳುತ್ತೀರೋ, ಅವನು ನನ್ನ ಪಾಲುಗಾರನೂ ನಿಮ್ಮ ಪ್ರಯೋಜನಕ್ಕಾಗಿ ನನಗೆ ಸಹಕಾರಿಯೂ ಆಗಿದ್ದಾನೆ; ಆ ಸಹೋದರರನ್ನು ಕುರಿತು ಕೇಳುತ್ತೀರೋ ಅವರು ಸಭೆಗಳಿಂದ ಕಳುಹಿಸಲ್ಪಟ್ಟವರೂ ಕ್ರಿಸ್ತನ ಮಹಿಮೆಯನ್ನು ಪ್ರಕಾಶಪಡಿಸುವವರೂ ಆಗಿದ್ದಾರೆ.**

2 ಕೊರಿಂಥದವರಿಗೆ 12:18

**ನಿಮ್ಮ ಬಳಿಗೆ ಹೋಗುವುದಕ್ಕೆ ನಾನು ತೀತನನ್ನು ಬೇಡಿಕೊಂಡು ಅವನ ಜೊತೆಯಲ್ಲಿ ಆ ಸಹೋದರರನ್ನು ಕಳುಹಿಸಿಕೊಟ್ಟೆನಷ್ಟೆ. ತೀತನು ನಿಮ್ಮನ್ನು ವಂಚಿಸಿ ಏನನ್ನಾದರೂ ತೆಗೆದುಕೊಂಡನೋ; ನಾವಿಬ್ಬರೂ ಒಬ್ಬ ಆತ್ಮನಿಂದಲೇ ಪ್ರೇರಿತರಾಗಿ ಒಂದೇ ಹೆಜ್ಜೆ ಜಾಡಿನಲ್ಲಿ ನಡೆಯಲಿಲ್ಲವೋ?**

ಆತ್ಮಿಕ ಹೊದಿಕೆ ಎಂಬುದು ಮಾತಿನ ಜೋಡಣೆಯಾಗಿದ್ದು ನಮ್ಮ ಸುತ್ತುಮುತ್ತಲು ಬಹಳವಾಗಿ ವ್ಯಾಪಿಸಿಕೊಂಡು ತನ್ನ ನಿಜ ಅರ್ಥವನ್ನು ಕಳೆದುಕೊಂಡಿದೆ.

ನಮ್ಮ ಸೇವಕರುಗಳ ನಡುವೆ ಇರುವ ನಿಜವಾದ ಸಮಸ್ಯೆ ಏನೆಂದರೆ, ನಾವು ಯಾವಾಗಲೂ ಬಹು ಜನಪ್ರಿಯ ಸೇವಕರ ಜೊತೆ ಇಲ್ಲವೇ ದೊಡ್ಡ ಸಭೆಯೊಂದಿಗೆ ಬಹಳವಾದ ಸಂಪರ್ಕ ಇದೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಾ ಇರುವುದು. ಆದರೆ ನಿಜವಾಗಿಯೂ ಇದು ನಮ್ಮ ಮಾತುಗಳಲ್ಲಿ ಕಂಡು ಬರುತ್ತದೆಯೇ ಹೊರತು ಕಾರ್ಯರೂಪದಲ್ಲಲ್ಲ. ಆದ್ದರಿಂದ ಈ ಕುರಿತು ಅಂಥಹ ಸೇವಕರಿಗಾಗಲೀ ಅಥವಾ ಆ ಸಭೆಗಾಗಲೀ ಯಾವುದೇ ರೀತಿಯ ಲೆಕ್ಕ ಕೊಡಬೇಕಾದ ಹೊಣೆಗಾರಿಕೆ ಇರುವುದಿಲ್ಲ. ಆದ್ದರಿಂದ ಇದು ಬರೇ ಭಕ್ತಿಯ ಮುಖವಾಡವೇ ಹೊರತು ಇದಕ್ಕೆ ಯಾವ ನಿಜವಾದ ಬೆಲೆಯೂ ಇರುವುದಿಲ್ಲ. ನಿಜ ಹೇಳಬೇಕಾದರೆ ನಾವು ಅನೇಕ ವೇಳೆ ನಮಗೆ ಇಷ್ಟ ಬಂದ ಹಾಗೂ ಅನುಕೂಲಕ್ಕೆ ತಕ್ಕಂತೆ ಮತ್ತು ನಮ್ಮ ಸ್ವಂತ ಕಾರ್ಯಗಳನ್ನು ಸಾಧಿಸಿಕೊಳ್ಳುವುದಕ್ಕೋಸ್ಕರ ಬೇರೆ ಸೇವಕರ ಇಲ್ಲವೇ ಸೇವೆಯ ಹೆಸರನ್ನು ಬಳಸಿಕೊಳ್ಳುತ್ತೇವೆ.

ಆದರೆ ದೇವರ ಸೇವಕರಾಗಿರುವ ನಾವು ಬೇರೆ ಸೇವೆಯೊಂದಿಗೆ ಒಡನಾಟಗಳನ್ನು ಇಟ್ಟುಕೊಂಡಿದ್ದೇವೆಂದು ಸುಳ್ಳು ಹೇಳಬಾರದು ಅಥವಾ ಭಕ್ತಿಯ ಮುಖವಾಡವನ್ನು

ಧರಿಸಿಕೊಳ್ಳಲೂಬಾರದು. ಯಾಕೆಂದರೆ ವಾಸ್ತವವಾಗಿ ಅಲ್ಲಿ ಏನೂ ಅಸ್ತಿತ್ವದಲ್ಲಿರುವುದಿಲ್ಲ.

ಹೊಸ ಒಡಂಬಡಿಕೆಯಲ್ಲಿ ತೀತನಿಗೆ ಸೇವೆಯಲ್ಲಿ ಸಹಭಾಗಿಯಾಗಿದ್ದ ಅಪೊಸ್ತಲನಾದ ಪೌಲನು ಈ ವಿಷಯದಲ್ಲಿ ಮನಃಪೂರ್ವಕವಾಗಿ ಮತ್ತು ಹೃದಯ ತುಂಬಿದವನಾಗಿ ಅಪ್ಪಣೆ ಕೊಡುತ್ತಾನೆ. ಒಂದು ವೇಳೆ ನಾವು ಯಾರ ಹೆಸರನ್ನು ಬಳಸುತ್ತೇವೋ ಆ ಸೇವಕರೊಂದಿಗೆ ನಮಗೆ ಯಾವುದೇ ಒಡನಾಟವಿಲ್ಲದೆ ಪಕ್ಷದಲ್ಲಿ ಮತ್ತು ಅವರೊಂದಿಗೆ ಯಾವುದೇ ಸಂಪರ್ಕವಿಲ್ಲದೇ ಇದ್ದಲ್ಲಿ ಅವರ ಹೆಸರನ್ನು ಬಳಸಿಕೊಳ್ಳುವ ಯಾವುದೇ ಹಕ್ಕು ನಮಗಿರುವುದಿಲ್ಲ. ಹಾಗಿದ್ದೂ ನಾವು ಆ ರೀತಿ ಮಾಡಿದರೆ ಇನ್ನೊಬ್ಬರ ಗೌರವವನ್ನು ನಮ್ಮದನ್ನಾಗಿಸಿಕೊಳ್ಳಲು ಕಳ್ಳತನ ಮಾಡಿದಂತಾಗುತ್ತದೆ. ಸೇವೆಯ ಕುರಿತಾದ ಹೆಸರಿಗಿಂತಲೂ ಸೇವಕರೊಂದಿಗಿರುವ ಆಳವಾದ ಸಂಬಂಧ ಮತ್ತು ಆ ಸೇವೆಯಲ್ಲಿ ನಾವು ತೆಗೆದುಕೊಳ್ಳುವ ಪಾಲು ಬಹಳ ಮುಖ್ಯವಾಗಿರುತ್ತದೆ. ಆ ಸೇವೆಯೊಂದಿಗೆ ನಮಗೆ ಯಾವುದೇ ಸಂಬಂಧಗಳಿಲ್ಲದೇ ಇದ್ದರೆ ಅದು ಬರೇ ಅಕ್ಷರಗಳಿಂದ ಕೂಡಿದ ಕಾಗದದ ಚೂರುಗಳಾಗಿರುತ್ತವೆಯೇ ಹೊರತು ಹೆಚ್ಚೇನೂ ಅಲ್ಲ. ತೀತನು ಪೌಲನೊಂದಿಗೆ ಸೇವೆಯಲ್ಲಿ ಇರಿಸಿಕೊಂಡಿದ್ದ ಸಂಬಂಧ ಶುದ್ಧವಾಗಿತ್ತು. ಇದರಿಂದ ತೀತನು ಆತ್ಮಪರವಶನಾಗಿಯೇ ತನ್ನ ಹೆಜ್ಜೆ ಜಾಡನ್ನೇ ದೃಢವಾಗಿ ಅನುಸರಿಸಿ ನಡೆದನೆಂದು ತೀತನು ವಿಷಯದಲ್ಲಿ ಪೌಲನು ಹೇಳುವುದಕ್ಕೆ ಸಾಧ್ಯವಾಯಿತು.

ಸೇವಕರಾದ ನಾವುಗಳು ನಿಜವಾಗಿಯೂ ಕರ್ತನಿಗೆ ಲೆಕ್ಕ ಕೊಡಬೇಕಾದವರು ಎಂಬುದನ್ನು ಅರ್ಥಮಾಡಿಕೊಂಡಿದ್ದೇವೆ. ನಿಜವಾದ ಹೊಣೆಗಾರಿಕೆ ಎಂದರೆ ನಾವು ದೇವರಿಗೆ ನಮ್ಮ ಮನಸ್ಸಾಕ್ಷಿಗೆ ನಮ್ಮ ಸ್ವಂತ ಕುಟುಂಬಕ್ಕೆ ಮತ್ತು ನಾವು ಸೇವೆ ಸಲ್ಲಿಸುವ ಜನರಿಗೆ ಒಪ್ಪಿಸಬೇಕಾದ ಲೆಕ್ಕಾಚಾರ ಹೊಣೆಗಾರಿಕೆಯೇ ಆಗಿದೆ. ಒಂದು ವೇಳೆ ಇದರಲ್ಲಿ ನಾವು ಬಿದ್ದುಹೋದರೆ ಬೇರೆ ಯಾವುದೇ ಸೇವೆಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡಾಗ ಅದು ಸೇವೆಯಾಗಿ ಮಾರ್ಪಡದೆ ಬರೆ ಹೆಸರಿಗಾಗಿಯೇ ಇರುತ್ತದೆ.

**ನಿಯಮದಿಂದ ಅಭ್ಯಾಸದ ಕಡೆಗೆ**: ಇತರೇ ಸೇವಕರ ಇಲ್ಲವೇ ವ್ಯಕ್ತಿಗಳ ಸೇವೆಯ ಗೌರವವನ್ನು ಕದಿಯಬೇಡಿ.

## ನಿಜವಾಗಿ ಹಣ ಎಲ್ಲಿ ವ್ಯಯವಾಗುತ್ತಿದೆ?

ಮತ್ತೊಂದು ''ಕ್ರಮವಿಲ್ಲದ'' ಸಂಗತಿ ಎಂದರೆ ಸೇವಕರಾದ ನಾವುಗಳು ತಿಳಿದೋ ಅಥವಾ ತಿಳಿಯದೆಯೋ ಹಣ ಸಂಗ್ರಹಿಸುವುದರಲ್ಲಿ ಅದನ್ನು ಖರ್ಚುಮಾಡುವುದರಲ್ಲಿ ನಿರತರಾಗಿರುವುದು. ಸಭಾಪಾಲಕರುಗಳು ಮತ್ತು ಸೇವಕರುಗಳು ಒಂದು ನಿರ್ದಿಷ್ಟವಾದ ಕಾರ್ಯಕ್ಕೆ ಹಣಬೇಕು ಎಂಬುದನ್ನು ಜನರಿಗೆ ತಿಳಿಸುತ್ತಲೇ ಇರುತ್ತಾರೆ. ಆದ್ದರಿಂದ ಜನರು ಆ ನಿರ್ದಿಷ್ಟವಾದ ಕಾರಣಕ್ಕೆ ಅಥವಾ ಕಾರ್ಯಕ್ಕೆ ಹಣವನ್ನು ನೀಡುತ್ತಾರೆ. ಹೇಗಾದರೂ ಈ ರೀತಿಯ ಹಣ ಪೂರ್ತಿಯಾಗಿ ಇಲ್ಲವೇ ಸ್ವಲ್ಪಭಾಗ ಬೇರೆ ಕಾರ್ಯಗಳಿಗಾಗಿಯೂ ಖರ್ಚಾಗುತ್ತದೆ. ಇಂಥ ಸಂದರ್ಭಗಳಲ್ಲಿ ಆ ಹಣ ಕೊಟ್ಟವರಿಗೂ ಯಾವ ಉದ್ದೇಶಕ್ಕೆ ಇದನ್ನು ಬಳಸಲಾಯಿತು ಎಂಬುದು ಗೊತ್ತಾಗುವುದಿಲ್ಲ ಅದನ್ನು ಹೇಳುವುದೂ ಇಲ್ಲ. ಒಂದು ವೇಳೆ ಇದನ್ನು ನಾವು ಹೇಗಾದರೂ ಸಮರ್ಥಿಸಿಕೊಳ್ಳಬಹುದು. ಆದರೆ ಇದು ಸರಿಯಾದ ಕ್ರಮವಲ್ಲ.

ಒಂದು ವೇಳೆ ನಾವು ಅನಾಥಾಲಯಕ್ಕಾಗಿ ಹಣ ಸಂಗ್ರಹಿಸಿ ಅದನ್ನು ಪೂರ್ತಿಯಾಗಿ ಇಲ್ಲವೇ ಸ್ವಲ್ಪಭಾಗ ಸಂಗೀತದ ಉಪಕರಣಗಳನ್ನು ಕೊಂಡುಕೊಳ್ಳಲು ಬಳಸಿಕೊಂಡರೆ ಹಣಕೊಟ್ಟರೆ ಜನರಿಗೆ ನಾವು ಮೋಸಮಾಡಿದಂತೆ ಅನಾಥಾಲಯಕ್ಕೆಂದು ಕೊಟ್ಟ ಹಣವನ್ನು ಪೂರ್ತಿಯಾಗಿ ಅನಾಥಾಲಯಕ್ಕೇ ಬಳಸಬೇಕೇ ವಿನಃ ಬೇರೆ ಉದ್ದೇಶಕ್ಕಾಗಿ ಅಲ್ಲ. ಹಾಗೊಂದು ವೇಳೆ ಆ ಹಣದಲ್ಲಿ ಅತಿ ಸ್ವಲ್ಪ ಭಾಗವನ್ನಾದರೂ ಬೇರೆ ಉದ್ದೇಶಕ್ಕೆ ಬಳಸುವುದು ಅನಿವಾರ್ಯವಾದಲ್ಲಿ ಅದನ್ನು ಕನಿಷ್ಟ ಹಣಕೊಟ್ಟ ದಾನಿಗಳ ಗಮನಕ್ಕೆ ತರುವುದು ಸೂಕ್ತವಾದದ್ದು.

**ನಿಯಮದಿಂದ ಅಭ್ಯಾಸಕ್ಕೆ:** ನಮ್ಮ ವಶಕ್ಕೆ ಕೊಡಲ್ಪಟ್ಟಿರುವ ಹಣದೊಂದಿಗೆ ವ್ಯವಹರಿಸುವಾಗ ದೃಢತೆ ಮತ್ತು ಪ್ರಾಮಾಣಿಕತೆಯಿಂದಿರಿ.

## ಸಭೆಗಳು ವಿಶ್ವಾಸಿಗಳ ಹೊಣೆಗಾರಿಕೆಯನ್ನು ಹಿಡಿದುಕೊಳ್ಳಬೇಕು

ಪ್ರತಿಯೊಬ್ಬ ಸಭಾಪಾಲಕನೂ ತನ್ನ ಸಭೆಯ ಸಂಖ್ಯೆಯಲ್ಲಿ ಹೆಚ್ಚು ವೃದ್ಧಿಯಾಗುವುದನ್ನು ನೋಡಲು ಅಪೇಕ್ಷಿಸುತ್ತಾನೆ. ನಮ್ಮಲ್ಲಿ ಕೆಲವರು ಅವರವರ ಸಭೆಯ ವ್ಯಾಪ್ತಿಯಲ್ಲಿ ಬೇರೆಯವರು ಶ್ರಮಪಟ್ಟು ಕೆಲಸ ಮಾಡುತ್ತಿದ್ದರೂ ಅದನ್ನು ಗಮನಿಸದಂತೆ ಇರುತ್ತಾರೆ. ಎಳ್ಳಷ್ಟೂ ಕಾಳಜಿವಹಿಸುವವರನ್ನು ನಾವು ಹಿಡಿದಿಟ್ಟುಕೊಂಡು ಪ್ರತ್ಯಕ್ಷ ಇಲ್ಲವೇ

ಪರೋಕ್ಷವಾಗಿ ಅವರು ಇಲ್ಲಿಗೇ ವರ್ಗಾಯಿಸಲ್ಪಡುವಂತೆ ಪ್ರಯತ್ನಿಸುತ್ತೇವೆ. ಇದು ಸಭಾಪಾಲಕರುಗಳ ನಡುವೆ ಕಂಡು ಬರುವ ಅನಾರೋಗ್ಯಕರವಾದ ಅಭ್ಯಾಸವಾಗಿರುತ್ತದೆ.

ಕೆಲವು ಸಭೆಗಳಲ್ಲಿ ಒಂದು ಆರೋಗ್ಯಕರವಾದ ಅಭ್ಯಾಸವಿದೆ. ತಮ್ಮಲ್ಲಿ ಆರಾಧನೆಗಾಗಿ ಆಗಾಗ್ಗೆ ಬರುವ ಅತಿಥಿಗಳಿಗೆ ತಮ್ಮ ತಮ್ಮ ಸಭೆಗಳಲ್ಲೇ ಅವರು ನೆಲೆಯಾಗಿದ್ದು ಅಲ್ಲಿನ ವಾಕ್ಯೋಪದೇಶದಲ್ಲಿಯೇ ನಿರತರಾಗಿದ್ದುಕೊಂಡು ನಂಬಿಗಸ್ತರಾಗಿರುವಂತೆ ಸೂಚಿಸುತ್ತಾರೆ. ಇದರೊಂದಿಗೆ ಅವರಿಗೆ ಮತ್ತು ಹೇಳುವುದೆಂದರೆ ''ನೀವು ಒಂದು ವೇಳೆ ಸಕಾರಣವಾಗಿ ಸಭೆಯನ್ನು ಬದಲಾಯಿಸಬೇಕಾದರೆ ಆ ಕುರಿತು ಪ್ರಾರ್ಥಿಸಿರಿ. ಆನಂತರ ನೂತನ ಸಭೆಗೆ ಸೇರಿಕೊಳ್ಳಿ.'' ಹೀಗಾದ ನಂತರವೂ ಬೇರೆ ಸಭೆಗಳಿಂದ ಬರುವವರು ಪುನಃ ಪುನಃ ಅದೇ ನೂತನ ಸಭೆಗೆ ಬರುತ್ತಾ ಇದ್ದರೆ ಮೊದಲು ಯಾವ ಕಾರಣಕ್ಕಾಗಿ ಅವರು ಈ ತಮ್ಮ ನಿರ್ಧಾರವನ್ನು ಹಿಂದಿನ ಸಭೆಯ ಪಾಲಕರು ಈ ವಿಷಯವನ್ನು ಗಮನಕ್ಕೆ ತಂದಿದ್ದಾರೆಯೇ ಎಂಬುದನ್ನು ತಿಳಿಯುವುದು ಸಹ ಅವಶ್ಯಕ. ಇದು ಒಂದು ಆರೋಗ್ಯ ಪೂರ್ಣವಾದ ಕ್ರಮವಾಗಿದ್ದು ''ಸಭಾ ಸದಸ್ಯರ ವರ್ಗಾವಣೆ''ಯೂ ಸಹ ಗೌರವಯುತವಾಗಿ ಮತ್ತು ಕ್ರಮದಿಂದ ಕೂಡಿರುವುದಕ್ಕೆ ಸಹಾಯವಾಗುತ್ತದೆ.

ಸಭೆಗಳು ಬೇರೆ ಬೇರೆ ಸಭೆಗಳ ಸದಸ್ಯರು ಅವರ ಆ ಸಭೆಯನ್ನು ಬಿಟ್ಟು ತಮ್ಮ ಸಭೆಗಳಿಗೇ ಸೇರಿಕೊಳ್ಳುವಂತೆ ಸಭೆಗಳು ಎಂದೂ ಪ್ರೋತ್ಸಾಹಿಸಬಾರದು ಮತ್ತು ಅವರ ಮೇಲೆ ಪ್ರಭಾವ ಬೀರದಂತೆ ವರ್ತಿಸುವುದನ್ನು ಅಭ್ಯಾಸಿಸಬೇಕು. ಆದರೂ ಇತ್ತೀಚಿನ ದಿನಗಳಲ್ಲಿ ಜನರು ತಮ್ಮ ಸ್ವಂತ ಸಭೆಗಳನ್ನು ಬಿಟ್ಟು ಬೇರೆ ಸಭೆಗಳನ್ನು ಸೇರಿಕೊಳ್ಳುವುದೂ ಮತ್ತು ಅದಕ್ಕಾಗಿ ಸಕಾರಣಗಳನ್ನು ನೀಡುವುದಾಗಿ ಕಂಡುಬರುತ್ತದೆ. ಸಭೆಗಳಿಂದ ಸಭೆಗಳಿಗೆ ಹೋಗುವವರು ಈ ವಿಷಯವನ್ನು ಕುರಿತು ತಮ್ಮ ತಮ್ಮ ಸ್ವಂತ ಸಭೆಗಳ ಪಾಲಕರೊಂದಿಗೆ ಮೊದಲೇ ಚರ್ಚಿಸುವಂತೆ ಪ್ರೋತ್ಸಾಹಿಸುವುದು ಒಳ್ಳೆಯದು. ಈ ಭಾಗದಲ್ಲಿ ಒತ್ತಿ ಹೇಳುವ ಅಂಶವೇನೆಂದರೆ ವಿಶ್ವಾಸಿಗಳು ''ಸಭೆಯಿಂದ ಸಭೆಗೆ ಹಾರುವುದನ್ನ'' ಸೇವಕರಾಗಿ ನಾವು ಎಂದಿಗೂ ಉತ್ತೇಜಿಸಬಾರದು. ಅವರಿರುವ ಸಭೆಗಳಲ್ಲಿಯೇ ಅವರು ಆತ್ಮಿಕ ಅಭಿವೃದ್ಧಿಯ ಮೌಲ್ಯಕ್ಕೆ ಬದ್ಧರಾಗಿ ಅವರ ಸ್ವಂತ ಸಭೆಗೆ ಅವರು ನಿಷ್ಠರಾಗಿರುವಂತೆ ವಿಶ್ವಾಸಿಗಳಿಗೆ ತಿಳುವಳಿಕೆ ಕೊಡಬೇಕಾಗಿರುತ್ತದೆ. ದೇವರ ಸೇವಕರಾಗಿ ನಾವು ಈ ಕ್ರಮವನ್ನು ಜಾರಿಗೆ ತರದೇ ಹೋದರೆ ಉದ್ದೇಶಿತವಾದ ದೇವರ ರಾಜ್ಯಕ್ಕೆ, ಆತ್ಮಿಕ ಮಂದಿರಕ್ಕೆ ಜೀವವುಳ್ಳ

ಕಲ್ಲುಗಳನ್ನು ಸಿದ್ಧಪಡಿಸುವುದಕ್ಕೆ ಬದಲಾಗಿ, ಸಭೆಯಿಂದ ಸಭೆಗೆ ಉರುಳಿ ಹೋಗುವ ಕಲ್ಲುಗಳಂತಿರುವ ಜನರನ್ನು ನಾವು ಸಿದ್ಧಪಡಿಸಿದಂತಾಗುತ್ತದೆ.

**ನಿಯಮದಿಂದ ಅಭ್ಯಾಸದ ಕಡೆಗೆ**: ವಿಶ್ವಾಸಿಗಳಿಗಿರುವ ಲೆಕ್ಕ ಒಪ್ಪಿಸಬೇಕಾದ ಜವಾಬ್ದಾರಿಯನ್ನು ಹಿಡಿತದಲ್ಲಿಡಲು ಹೆದರಬೇಡಿ. ದೈವಿಕ ಕ್ರಮವನ್ನು ಅನುಸರಿಸಲು ಕಲಿಸಿಕೊಡಿ.

## ಇತರರ ದುಡಿಮೆಯ ಲಾಭದಲ್ಲಿ ಭಾಗಿಗಳಾಗುವುದು

ಯೋಹಾನ 4:35-38

**ಇನ್ನು ನಾಲ್ಕು ತಿಂಗಳಿಗೆ ಸುಗ್ಗಿ ಬರುವುದೆಂದು ನೀವು ಹೇಳುವುದುಂಟಷ್ಟೆ. ನಿಮ್ಮ ಕಣ್ಣೆತ್ತಿ ಹೊಲಗಳನ್ನು ನೋಡಿರಿ, ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ. ಕೊಯ್ಯುವವನಿಗೆ ಈಗಲೆ ಕೂಲಿ ದೊರೆಯುತ್ತದೆ, ಅವನು ನಿತ್ಯಜೀವಕ್ಕೆ ಫಲವನ್ನು ಕೂಡಿಸಿಡುತ್ತಾನೆ, ಹೀಗೆ ಬಿತ್ತುವವನಿಗೂ ಕೊಯ್ಯುವವನಿಗೂ ಕೂಡ ಸಂತೋಷವಾಗುವುದು. ಬಿತ್ತುವವನೊಬ್ಬ, ಕೊಯ್ಯುವವನೊಬ್ಬ ಎಂಬ ಗಾದೆಯಂತೆ ಆಯಿತು. ನೀವು ಕಷ್ಟಪಡದಂಥ ಬೆಳೆಯನ್ನು ಕೊಯ್ಯುವುದಕ್ಕೆ ನಾನು ನಿಮ್ಮನ್ನು ಕಳುಹಿಸಿದೆನು, ಬೇರೊಬ್ಬರು ಕಷ್ಟಪಟ್ಟಿದ್ದಾರೆ, ನೀವು ನಡುವೆ ಅವರ ಕಷ್ಟದಲ್ಲಿ ಸೇರಿದ್ದೀರಿ ಅಂದನು.**

1 ಕೊರಿಂಥದವರಿಗೆ 3:4-9

**ಒಬ್ಬನು-ನಾನು ಪೌಲನವನು ಎಂದು ಮತ್ತೊಬ್ಬನು-ನಾನು ಅಪೊಲ್ಲೋಸನವನು ಎಂದು ಹೇಳುತ್ತಿರುವಾಗ ನೀವು ಕೇವಲ ನರಪ್ರಾಣಿಗಳಾಗಿದ್ದೀರಲ್ಲವೇ. ಹಾಗಾದರೆ ಅಪೊಲ್ಲೋಸನು ಯಾರು? ಪೌಲನು ಯಾರು? ಅವರು ಸೇವಕರು; ಅವರ ಮುಖಾಂತರ ನೀವು ಕ್ರಿಸ್ತನನ್ನು ನಂಬುವವರಾದಿರಿ; ಕರ್ತನು ಒಬ್ಬೊಬ್ಬನಿಗೆ ದಯಪಾಲಿಸಿದ ಪ್ರಕಾರ ಅವರು ಸೇವೆ ಮಾಡುವವರಾಗಿದ್ದಾರೆ. ನಾನು ಸಸಿಯನ್ನು ನೆಟ್ಟೆನು, ಅಪೊಲ್ಲೋಸನು ನೀರು ಹೊಯಿದನು. ಆದರೆ ಬೆಳೆಸುತ್ತಾ ಬಂದವನು ದೇವರು. ಹೀಗಿರಲಾಗಿ ನೆಡುವವನಾಗಲಿ ನೀರು ಹೊಯ್ಯುವವನಾಗಲಿ ವಿಶೇಷವಾದವನಲ್ಲ, ಬೆಳೆಸುವ ದೇವರೇ ವಿಶೇಷವಾದವನು, ನೆಡುವವನೂ ನೀರು ಹೊಯ್ಯುವವನೂ ಒಂದೇ ಆಗಿದ್ದಾರೆ. ಆದರೂ ಪ್ರತಿಯೊಬ್ಬನಿಗೆ ಅವನವನ ಕಷ್ಟಕ್ಕೆ ತಕ್ಕ ಹಾಗೆ ಕೂಲಿಯು ದೊರೆಯುವುದು. ನಾವು ದೇವರ ಜೊತೆ ಕೆಲಸದವರು; ನೀವು ದೇವರ ಹೊಲವೂ ದೇವರ ಕಟ್ಟಡವೂ ಆಗಿದ್ದೀರಿ.**

ದೇವರು ಬಿತ್ತುವುದಕ್ಕೂ, ನೀರೆರೆಯುವುದಕ್ಕೂ ಹಾಗೆಯೇ ಸುಗ್ಗಿಯ ಫಲಗಳನ್ನು ಕೊಯ್ಯುವುದಕ್ಕೂ ಯಾರನ್ನೋ ಆರಿಸಿ ನೇಮಿಸುತ್ತಲೇ ಇರುತ್ತಾನೆ. ಇದು ದೇವರ ರಾಜ್ಯದ ತತ್ವವಾಗಿದೆ ದೇವರು ನಮ್ಮನ್ನು ಸೇವೆಗೆ ಕಳುಹಿಸುವಾಗ ಬಹುಪಾಲು ಪ್ರಕರಣಗಳಲ್ಲಿ, ಇತರೆ ಸೇವಕರು ಮಾಡಿದ ಶ್ರಮಪೂರಿತವಾದ ಸಭೆಯ ಲಾಭವನ್ನು ನಾವು ಪಡೆಯುವವರಾಗಿದ್ದೇವೆ.

ಆದ್ದರಿಂದ ಇತರರ ದುಡಿಮೆಯ ಫಲದಲ್ಲಿ ಹಾಗೆಯೇ ಸುಗ್ಗಿಯ ಫಲಗಳನ್ನು ಕೊಯ್ಯುವದಕ್ಕೂ ಯಾರನ್ನೋ ಆಶಿಸಿ ನೇಮಿಸುತ್ತಲೇ ಇರುತ್ತಾನೆ. ಇದು ದೇವರ ರಾಜ್ಯದ ದೇವರು ನಮ್ಮನ್ನು ಸೇವೆಗೆ ಕಳುಹಿಸುವಾಗ ಬಹುಪಾಲು ಪ್ರಕರಣಗಳಲ್ಲಿ, ಇತರೆ ಸೇವಕರು ಮಾಡಿದ ಶ್ರಮಪೂರಿತವಾದ ಸಭೆಯ ಲಾಭವನ್ನು ನಾವು ಪಡೆಯುವವರಾಗಿದ್ದೇವೆ.

ಆದ್ದರಿಂದ ಇತರರ ದುಡಿಮೆಯ ಫಲದಲ್ಲಿ ನಾವು ಪಾಲುತೆಗೆದುಕೊಳ್ಳುವ ಸಂದರ್ಭವಾಗಲಿ ಇಲ್ಲವೇ ನಮ್ಮ ಶ್ರಮಪೂರಿತ ಕಾರ್ಯಗಳ ಲಾಭವನ್ನು ಇತರರು ಅನುಭವಿಸುವ ಸಂದರ್ಭವಾಗಲಿ, ಒದಗಿ ಬಂದಾಗ ನಾವು ಸರಿಯಾದ ತಿಳುವಳಿಕೆಯುಳ್ಳವರಾಗಿ ವರ್ತಿಸಬೇಕು ಮತ್ತು ಈ ವಿಷಯದಲ್ಲಿ ದೇವರ ನಿಯಮವನ್ನು ಅರ್ಥಮಾಡಿಕೊಂಡು ನಡೆಯಬೇಕು. ಇಲ್ಲವಾದರೆ ಭಿನ್ನಭೇದಗಳು ಮತ್ತು ಜಗಳಗಳಿಗೆ ಕಾರಣವಾಗಿ ಕೊರಿಂಥ ಸಭೆಯಲ್ಲಿ ಏನಾಯಿತೋ ಹಾಗೆಯೇ ಆಗುತ್ತದೆ.

ಕೊರಿಂಥ ಸಭೆಯಲ್ಲಿ ಏನಾಯಿತೆಂಬುದನ್ನು ಪರೀಕ್ಷಿಸುವುದು ಆಸಕ್ತಿಯಿಂದ ಕೂಡಿದೆ. ಈ ಘಟನೆಯನ್ನು ಕುರಿತು ನಾವು ಅಪೊಸ್ತಲರ ಕೃತ್ಯಗಳು 17,18 ಅಧ್ಯಾಯಗಳಲ್ಲಿ ಓದುತ್ತೇವೆ. ಪೌಲನು ಮತ್ತು ದಂಪತಿಗಳಾದ ಅಕ್ವಿಲನು ಮತ್ತು ಪ್ರಿಸ್ಕಿಲಳೂ 2 ವರ್ಷಗಳ ಕಾಲ ಕಷ್ಟಪಟ್ಟು ಕೊರಿಂಥ ಸಭೆಯನ್ನು ಸ್ಥಾಪಿಸಿದರು. ಆನಂತರ ಎಫೆಸಕ್ಕೆ ಪ್ರಯಾಣ ಬೆಳೆಸಿದರು. ಪೌಲನು ಅವರನ್ನು ಅಲ್ಲಿಯೇ ಬಿಟ್ಟು ಮುಂದಕ್ಕೆ ಪ್ರಯಾಣ ಹೊರಟನು. ಅಕ್ವಿಲ ಮತ್ತು ಪ್ರಿಸ್ಕಿಲ ಇಬ್ಬರೂ ಕರ್ತನ ಹಾದಿಯಲ್ಲಿ ಶಿಕ್ಷಿತನಾಗಿದ್ದ ಅಪೊಲ್ಲೋಸ್ ಎಂಬ ಮನುಷ್ಯನ್ನು ಭೇಟಿಯಾದರು. ''ಅವನು ಸಭಾಮಂದಿರದಲ್ಲಿ ಧೈರ್ಯದಿಂದ ಮಾತಾಡುವುದಕ್ಕೆ ಪ್ರಾರಂಭಿಸಿದನು. ಅವನ ಮಾತುಗಳನ್ನು ಪ್ರಿಸ್ಕಿಲಳೂ ಅಕ್ವಿಲನೂ ಕೇಳಿ ಅವನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ದೇವರ ಮಾರ್ಗವನ್ನು ಅವನಿಗೆ ಇನ್ನೂ ಸೂಕ್ಷ್ಮವಾಗಿ ವಿವರಿಸಿದರು. ಆಮೇಲೆ ಅಖಾಯಕ್ಕೆ ಹೋಗಬೇಕೆಂದು ಅವನಿಗೆ ಮನಸ್ಸಾದಾಗ ಸಹೋದರರು ಅವನನ್ನು ಪ್ರೋತ್ಸಾಹಕ್ಕೆ ಅಲ್ಲಿದ್ದ ಶಿಷ್ಯರಿಗೆ ಇವನನ್ನು ಸೇರಿಸಿಕೊಳ್ಳಬೇಕೆಂದು ಪತ್ರಿಕೆಯನ್ನು ಬರೆದುಕೊಟ್ಟರು.'' ಅಪೊಸ್ತಲರ ಕೃತ್ಯಗಳು 18:16,27. ಅಕ್ವಿಲನೂ ಮತ್ತು ಪ್ರಿಸ್ಕಿಲಳ ಶಿಫಾರಸ್ಸಿನ ಮೇರೆಗೆ ಅಪೊಲ್ಲೋಸನು ಕೊರಿಂಥ ಸಭೆಗೆ ಕಳುಹಿಸಿಲ್ಪಟ್ಟನು. ಇದರ ಪರಿಣಾಮವೇನೆಂದರೆ ಅಪೊಲ್ಲೋಸನು ಪೌಲ, ಅಕ್ವಿಲ ಮತ್ತು ಪ್ರಿಸ್ಕಿಲ್ಲಳ ಶ್ರಮದಲ್ಲಿ ತಾನು ಸೇರಿಕೊಂಡು ಪಾಲು ತೆಗೆದುಕೊಂಡಂತಾಯಿತು.

ಕೆಲವು ಕಾಲದ ನಂತರ ಕೊರಿಂಥ ಸಭೆಯಲ್ಲಿ ಜನರು ಗುಂಪುಗಳಾಗಿ ಬೇರ್ಪಟ್ಟು ನಾನು ಪೌಲನಿಗೆ ಸೇರಿದವನು, ನಾನು ಅಪೊಲ್ಲೋಸನಿಗೆ ಸೇರಿದವನು ಎಂದು ಹೇಳುವುದಕ್ಕೆ ಪ್ರಾರಂಭಿಸಿದರು. ಪೌಲನು ಅವರ ಅಧಾರ್ಮಿಕ ವರ್ತನೆಯ ಕುರಿತು ಆಕ್ಷೇಪಿಸಿ ವಿಶ್ವಾಸಿಗಳನ್ನು ಕುರಿತು ನೀವು ''ದೇವರ ಹೊಲ''ವು ಮತ್ತು ''ದೇವರ ಕಟ್ಟಡ''ವು ಎಂಬುದಾಗಿ ಸಂಬೋಧಿಸಿದನು. ಪೌಲನು ಮತ್ತು ಅವನ ಸಂಗಡಿಗರು ''ದೇವರ ಹೊಲ''ದಲ್ಲಿ ಮತ್ತು ''ದೇವರ ಕಟ್ಟಡ''ದಲ್ಲಿ ದೇವರ ಜೊತೆ ಕೆಲಸದವರಾಗಿ ದೇವರಿಂದಲೇ ಉಪಯೋಗಿಸಲ್ಪಟ್ಟರು.

ಆದ್ದರಿಂದ ವಿಶ್ವಾಸಿಗಳೆಲ್ಲರೂ ''ದೇವರ ಹೊಲ''ವೂ ''ದೇವರ ಕಟ್ಟಡ''ವೂ ಆಗಿದ್ದಾರೆ. ಈ ಕಾರಣದಿಂದ ದೇವರ ಹೊಲ ಮತ್ತು ದೇವರ ಕಟ್ಟಡದಲ್ಲಿ ಕೆಲಸ ಮಾಡುವ ಮೂಲಕ ಬೇರೆಯವರ ದುಡಿಮೆಯಲ್ಲಿ ನಾವು ದೇವರ ಸೇವಕರಾಗಿ ಸೇರುವಾಗ ಅದಕ್ಕೆ ಅನುಗುಣವಾದ ವರ್ತನೆಯನ್ನು ಕಲಿತುಕೊಳ್ಳುವುದು ಮುಖ್ಯವಾದದ್ದು.

ಹಾಗೆ ಇತರರ ದುಡಿಮೆಯಲ್ಲಿ ಸೇರಿಕೊಳ್ಳುವಾಗ ಕೆಲವು ಸಂಗತಿಗಳನ್ನು ನಮ್ಮ ಜ್ಞಾಪಕದಲ್ಲಿ ಇಟ್ಟುಕೊಳ್ಳುವುದು ಅವಶ್ಯಕ.

- ಇತರರ ದುಡಿಮೆಯಲ್ಲಿ ಪಾಲು ತೆಗೆದುಕೊಂಡು ದೇವರ ಸೇವೆಯ ಆ ಹೊಲದಲ್ಲಿ ಮತ್ತು ಕಟ್ಟಡದಲ್ಲಿ ನಮ್ಮ ಸೇವೆ ಪ್ರಾರಂಭಿಸುವಾಗ ಅದೊಂದು ಆಶೀರ್ವಾದಕರವಾದದ್ದು ಎಂದು ಭಾವಿಸಬೇಕು ಮತ್ತು ಸೇವೆ ಸಲ್ಲಿಸಿದವರ ಅಥವಾ ಈಗ ಸೇವೆ ಸಲ್ಲಿಸುತ್ತಿರುವವರ ಸಮ್ಮತಿಯನ್ನೂ ಪಡೆದುಕೊಳ್ಳಬೇಕು. ಉದಾಹರಣೆ: ಬೇರೊಬ್ಬ ಸಭಾಪಾಲಕರು ಸೇವೆ ಸಲ್ಲಿಸುತ್ತಿರುವ ಸಭೆಯೊಳಗೆ ನೀವು ಏಕಾ ಏಕಿ ಪ್ರವೇಶಿಸಿ ಅಲ್ಲಿನ ಸೇವೆಯನ್ನು ನಿಮ್ಮ ಕೈಗೆತ್ತಿಕೊಳ್ಳಲಾಗದು. ಇದು ಕ್ರಮವಲ್ಲದ ನಡವಳಿಕೆಯಾಗುತ್ತದೆ.
- ಈಗಾಗಲೇ ಅಲ್ಲಿ ಯಾವ ರೀತಿಯ ಕಾರ್ಯಗಳು ಜರುಗಿರುತ್ತವೆ ಎಂಬುದರ ಬಗ್ಗೆ ಮೊದಲು ತಿಳಿದುಕೊಳ್ಳಿರಿ. ಆ ನಂತರ ನೀವು ಸೇವೆಯನ್ನು ಮುಂದುವರಿಸಿ ಅಲ್ಲಿ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ಅಲ್ಲಿ ಬಿತ್ತಿರುವ ಒಳ್ಳೇ ಬೀಜವನ್ನು ಕಿತ್ತು ಹಾಕುವ ಇಲ್ಲವೇ ಕ್ರಮವಾಗಿ ಕಟ್ಟಲ್ಪಟ್ಟಿರುವುದನ್ನು ಕೆಡವಿ ಹಾಕುವ ಕೆಲಸಕ್ಕೆ ಕೈ ಹಾಕದೆ ಇರುವುದು ಒಳ್ಳೆಯದು.
- ನಿಮ್ಮ ಇತಿಮಿತಿಗಳಲ್ಲಿ ನೀವಿರಿ. ನಿಮಗಿರುವ ಅಧಿಕಾರವನ್ನು ಮೀರಿ ವರ್ತಿಸುವುದಾಗಲಿ ಅಥವಾ ನಿಮಗೆ ನೇಮಿಸಿದ ಕೆಲಸದ ಗಡಿಗಳನ್ನು

ಅತಿಕ್ರಮಿಸುವುದಾಗಲೇ ಮಾಡಬೇಡಿ. ಉದಾಹರಣೆ: ನೇರವಾಗಿ ಸ್ಥಳೀಯ ಸಭೆಗಳಿಗೆ ಹೋಗಿ ಈ ರೀತಿಯಲ್ಲಿಯೇ ಸೇವೆ ಸಲ್ಲಿಸಬೇಕು. ಇಂಥದ್ದನ್ನೇ ಪ್ರಸಂಗಿಸಬೇಕು ಎಂಬುದನ್ನು ನಿರ್ದೇಶಿಸಬೇಡಿ. ಇದಕ್ಕಾಗಿ ನೀವು ಕರೆಯಲ್ಪಟ್ಟವರಲ್ಲ.

- ಯಾರಿಗೆ ಗೌರವ ಸಲ್ಲಬೇಕೋ ಅವರಿಗೆ ಗೌರವ ಕೊಡಿ. ಒಂದು ವೇಳೆ ದೇವರು ನಿಮ್ಮನ್ನು ಆ ಸಭೆಯ ಸೇವೆಯಲ್ಲಿನ ಸುಗ್ಗಿಯನ್ನು ಕೊಯ್ಯಲು ನೇಮಿಸುವುದಾದರೆ ಆ ಸೇವೆಯನ್ನು ಬಿತ್ತಿದವರು ಮತ್ತು ನೀರೆರೆದು ಪೋಷಿಸಿದವರನ್ನೂ ನೀವು ಗೌರವಿಸಿ ಮತ್ತು ಇದೆಲ್ಲದರ ಮೇಲೆ ಅಭಿವೃದ್ಧಿಯು ದೇವರಿಂದಲೇ ಬರುತ್ತದೆ ಎಂಬುದನ್ನು ನೆನಪಿನಲ್ಲಿಡಿ.

ಹಾಗೆಯೇ ನಮ್ಮ ದುಡಿಮೆಯಲ್ಲಿ ಇತರರು ಬಂದು ಭಾಗಿಗಳಾಗಲು ನಾವು ಅವಕಾಶ ಕಲ್ಪಿಸಿಕೊಡುವುದರ ಅಗತ್ಯವನ್ನೂ ಸಹ ತಿಳಿಯಬೇಕಾಗಿದೆ.

- ಇದುವರೆವಿಗೂ ಆಗಿರುವ ಒಟ್ಟಾರೆ ಪ್ರಗತಿಯನ್ನು ಸಂರಕ್ಷಿಸಿ ಕಾಪಾಡಬೇಕಾದ್ದರಿಂದ ಯಾರು ಈ ಸೇವೆಯಲ್ಲಿ ಹೊಸದಾಗಿ ಭಾಗಿಗಳಾಗಬೇಕೆಂಬುವವರ ಬಗ್ಗೆ ಜಾಗರೂಕರಾಗಿರಿ. ಯಾಕೆಂದರೆ ಈಗಾಗಲೇ ಉಂಟಾಗಿರುವ ಪ್ರಗತಿಯ ಕಾರ್ಯ ಯಾವುದೇ ಕಾರಣಕ್ಕೆ ನಾಶವಾಗುವುದು ನಮಗೆ ಬೇಕಾಗಿಲ್ಲ.
- ಈ ರೀತಿ ಬರುವವರು ಈ ಸೇವಾಕಾರ್ಯವನ್ನು ಸಮರ್ಪಕವಾಗಿ ಮುಂದುವರಿಸಿ ನಿರ್ವಹಿಸಬಲ್ಲರೇ ಎಂಬುದನ್ನು ನಾವು ಮುಂಜಾಗ್ರತೆಯಿಂದ ಖಚಿತ ಪಡಿಸಿಕೊಳ್ಳಬೇಕಾಗುತ್ತದೆ. ಕೆಲವು ಸಭೆಗಳಲ್ಲಿ ಪಾಲಕರು ಅರ್ಹತೆಯುಳ್ಳವರನ್ನು ಮತ್ತು ಸಮರ್ಪಕವಾಗಿ ಸೇವೆ ಸಲ್ಲಿಸುವವರನ್ನು ಬಿಟ್ಟು ಬಿಟ್ಟು-ತಳ್ಳಿಹಾಕಿ-ವ್ಯಕ್ತಿಯ ಸ್ಥಾನಮಾನಗಳಿಗೇ ಇತ್ಯಾದಿಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಅಂಥವರನ್ನು ಸಭೆಯಲ್ಲಿ ಜೊತೆ ಕೆಲಸದವರಿಗಾಗಿ ನೇಮಿಸುವುದುಂಟು.
- ಕಾಲಾವಕಾಶ ಬಹಳ ಮುಖ್ಯ. ಸಭೆಯಲ್ಲಿ ಸೇವೆಯು ಬಿತ್ತುವ ಕಾಲವಾಗಿದ್ದ ಪಕ್ಷದಲ್ಲಿ ಕೊಯ್ಯುವವರನ್ನು ಕರೆತರಬೇಡಿ! ಹಾಗೆಯೇ ಸೇವೆಯು ಫಲಬಿಡುವ ಕಾಲದಲ್ಲಿ, ಬಿತ್ತುವವರನ್ನು ನೇಮಿಸಬೇಡಿ! ದೇವರ ಹೊಲದಲ್ಲಿ ಸೇವೆಯ ಕಾಲ ಯಾವುದು ಎಂಬುದನ್ನು ತಿಳಿದುಕೊಳ್ಳಿ.
- ನಿಮ್ಮ ಜೊತೆ ಕೆಲಸದವರಾಗಿ ನಿಮ್ಮ ಸೇವೆಯಲ್ಲಿ ಪಾಲು ತೆಗೆದುಕೊಳ್ಳಲು ಬರುವವರೇ ಆಗಲಿ ಅವರನ್ನು ಪೂರ್ಣ ಹೃದಯದಿಂದ ಸ್ವಾಗತಿಸಿ, ಅವರಿಗೆ

ಅಡ್ಡಿಯಾಗಿಬೇಡಿರಿ. ಆದಷ್ಟೂ ಅವರಿಂದ ದೂರವಿದ್ದು ದೇವರು ಯಾವ ಉದ್ದೇಶಕ್ಕಾಗಿ ಅವರನ್ನು ಕಳುಹಿಸಿದ್ದಾನೋ ಆ ರೀತಿ ಅವರು ಕಾರ್ಯನಿರ್ವಹಿಸಲು ಅವರಿಗೆ ಅವಕಾಶ ಕಲ್ಪಿಸಿಕೊಡಿ.

**ನಿಯಮದಿಂದ ಅಭ್ಯಾಸದ ಕಡೆಗೆ**: ದೇವರು ಬಿತ್ತುವುದಕ್ಕೂ, ನೀರೆರೆದು ಪೋಷಿಸುವುದಕ್ಕೂ ಮತ್ತು ಸುಗ್ಗಿ ಕೊಯ್ಯುವುದಕ್ಕೂ ಒಬ್ಬೊಬ್ಬರನ್ನು ನೇಮಿಸುವವನಾಗಿದ್ದಾನೆ ಎಂಬುದನ್ನು ಅರ್ಥಮಾಡಿಕೊಳ್ಳಿರಿ! ದೇವರ ಕಾರ್ಯಗಳಿಗೆ ಅಡ್ಡಿಮಾಡದಂತೆ ಇಲ್ಲವೇ ನಾಶಪಡಿಸದಂತೆ 'ದೇವರ ಹೊಲ' ಮತ್ತು 'ದೇವರ ಕಟ್ಟಡ'ವನ್ನು ಸಂರಕ್ಷಿಸುವ ಒಳ್ಳೇ ಮನೆವಾರ್ತೆಯವರಾಗಿರಿ.

## *ಅತಿಥಿ ಸಂದೇಶಕರಾಗಿ ಸೇವೆ ಸಲ್ಲಿಸುವುದು*

ಮತ್ತೊಂದು ಅತಿ ಪ್ರಾಮುಖ್ಯವಾದ ಅಂಶವೆಂದರೆ, ಇತರೆ ಸಭೆಗಳಲ್ಲಿ ಸೇವೆ ಸಲ್ಲಿಸಲು ಇಲ್ಲವೇ ಅತಿಥಿ ಸಂದೇಶಕರಾಗಿ ಕರೆಯಲ್ಪಟ್ಟಾಗ 'ಆ ದೇವರ ಮನೆಯಲ್ಲಿ' (1 ತಿಮೊಥೆಯನಿಗೆ 3:15) ಹೇಗೆ ವರ್ತಿಸುತ್ತೇವೋ ಮತ್ತು ಅಲ್ಲಿನ ಇತಿಮಿತಿಗಳನ್ನು ಹೇಗೆ ಅರ್ಥಮಾಡಿಕೊಳ್ಳುತ್ತೇವೇ ಎಂಬುದು. ಒಂದು ಸ್ಥಳೀಯ ಸಭೆಗೆ ಅತಿಥಿ ಸಂದೇಶಕರಾಗಿ ಯಾರನ್ನಾದರೂ ಕರೆದಾಗ ಅವರು ಆ ಸಭೆಯ ಇಡೀ ಆರಾಧನೆಯನ್ನೇ ತಮ್ಮ ಕೈಗೆತ್ತಿಕೊಂಡು ಅಲ್ಲಿನ ಸ್ಥಳೀಯ ಪಾಲಕರನ್ನು ಸ್ಥಾನಪಲ್ಲಟ ಮಾಡುವುದು ಮತ್ತು ಆ ಸಭೆಗೆ ತನ್ನ ಎಲ್ಲಾ ನಿರ್ದೇಶನವನ್ನು ಮತ್ತು ದರ್ಶನವನ್ನೂ ನೀಡುವಂತೆ ವರ್ತಿಸುವುದೂ ಸರ್ವೇ ಸಾಮಾನ್ಯವಾದುದು. ಇದು ಒಟ್ಟಾರೆ ಸಂದರ್ಭೋಚಿತವಲ್ಲದ್ದು ಮತ್ತು ದೈವಿಕ ಕ್ರಮಕ್ಕೆ ಹೊರತಾದ ನಡವಳಿಕೆಯಾಗಿರುತ್ತದೆ.

ಯಾವಾಗ ಕರ್ತನಾದ ಯೇಸುಕ್ರಿಸ್ತನು ಸ್ಥಳೀಯ ಸಭೆಗಳಿಗೆ ತನ್ನ ಸೂಚನೆಗಳನ್ನು, ದರ್ಶನಗಳನ್ನು ಮತ್ತು ಸಂಘಟನೆಗಳನ್ನು ನೀಡುತ್ತಾನೋ ಅವೆಲ್ಲವುಗಳೂ ನಮ್ಮ ಮುಂದೆ ಇಡಲ್ಪಟ್ಟಿರುವ ದೈವಿಕ ಕ್ರಮಕ್ಕೆ ಒಳಪಟ್ಟಿರುತ್ತದೆ. ಈ ದಿಶೆಯಲ್ಲಿ ಆ ಸಭೆಯ ಪಾಲಕರೊಂದಿಗೂ ಆತ್ಮಿಕ ಅಧಿಕಾರ ಹೊಂದಿದ ಜನರ ಮೂಲಕವಾಗಿಯೇ ಇಲ್ಲವೇ ಸಭೆಯ ಜವಾಬ್ದಾರಿ ಹೊತ್ತ ಅಪೊಸ್ತಲಿಕ ತಳಹದಿಯ ಮೇಲೆ ಸಭೆಯ ಮೇಲ್ವಿಚಾರಣೆ ಹೊಂದಿರುವವರ ಮೂಲಕವೋ ಕರ್ತನು ತಾನೇ ಮಾತನಾಡುವವನಾಗಿದ್ದಾನೆ. ಸಭೆಯ ಈ ಆತ್ಮಿಕ ಮೇಲ್ವಿಚಾರಕರು ಸಾಧಾರಣವಾಗಿ ಈ ವಿಷಯದಲ್ಲಿ ಪಾಲಕರಿಂದ ಆಹ್ವಾನ ಹೊಂದಿದದವರೇ ಆಗಿದ್ದಾರೆ ಅಥವಾ ಕೆಲವು

ಸಂದರ್ಭಗಳಲ್ಲಿ ಸಭಾಪಾಲಕರೇ ಸಮಾಲೋಚಿಸಲು ಅವರ ಬಳಿಗೆ ಹೋಗುವವರಾಗಿರುತ್ತಾರೆ.

ಅತಿಥಿಯಾಗಿ ಬಂದ ದೇವರ ಸೇವಕರು ದೈವಿಕ ಕ್ರಮವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಆ ಸಭೆಯಲ್ಲಿನ ಇತಿಮಿತಿಯನ್ನು ಮೀರದಂತೆ ವರ್ತಿಸುವುದೂ ಅತಿಮುಖ್ಯವಾದದ್ದು. ಇದರೊಂದಿಗೆ ಸ್ಥಳೀಯ ಸಭೆಯು ಮುಖ್ಯಸ್ಥನಾಗಿದ್ದು ಕ್ರಿಸ್ತನ ಆಳ್ವಿಕೆಗೆ ಒಳಗಾಗಿರುವ ಸ್ಥಳೀಯ ಸಭಾಪಾಲಕನಿಗೆ ಅಧೀನವಾಗಿ ವರ್ತಿಸಬೇಕು. ತಾನು ಅತಿಥಿಯಾಗಿ ಹೋದ ಸಭೆಯ ಮೇಲೆ ಆತ್ಮಿಕವಾಗಿ ತನಗೆ ಯಾವ ಅಧಿಕಾರವೂ ಇಲ್ಲದಿರುವುದರಿಂದ ಸೂಚನೆಗಳನ್ನು ಕೊಡುವುದರಲ್ಲಿ ದರ್ಶನ ನೀಡುವುದರಲ್ಲಿ ಅಥವಾ ಸಂಘಟಿಸುವುದರಲ್ಲಿ ತಾನೇ ಮುಂದಾಗಬಾರದು. ಈ ದಿಶೆಯಲ್ಲಿ ಒಂದು ವೇಳೆ ಏನಾದರೂ ಆತನ ಗಮನಕ್ಕೆ ಬಂದರೆ ಅವುಗಳನ್ನು ಮೊದಲು ಸ್ಥಳೀಯ ಪಾಲಕರೊಂದಿಗೆ ಚರ್ಚಿಸುವುದು ಒಳ್ಳೆಯದು. ಹಾಗೊಂದು ವೇಳೆ ಸ್ಥಳೀಯ ಪಾಲಕರು ಈ ಬಗ್ಗೆ ಏನಾದರೊಂದು ಸೂಚನೆ ಕೊಟ್ಟು ಪ್ರೋತ್ಸಾಹಿಸಿದರೆ ಆ ಸಂದರ್ಭದಲ್ಲಿ ಮಾತ್ರ ಈ ಅತಿಥಿ ಸೇವಕರು ಆ ವಿಷಯವನ್ನು ಕುರಿತು ಸಭೆಯವರೊಂದಿಗೆ ಮಾತನಾಡಬಹುದು. ಆದರೆ ಇದಕ್ಕೂ ಸಹ ಸ್ಥಳೀಯ ಪಾಲಕರ ಒಪ್ಪಿಗೆಯನ್ನು ಪಡೆಯತಕ್ಕದ್ದು.

ಮೇಲೆ ತಿಳಿಸಿದ ಸಂಗತಿಗಳಿಗೆ ಸೂಕ್ತವಾದ ಅಧ್ಯಾಯವನ್ನು ಮಾರ್ಗದರ್ಶನವನ್ನಾಗಿ ಕೊಡಲು ಸಾಧ್ಯವಿಲ್ಲವೆಂಬುದು ನಮಗೆ ತಿಳಿದದೆ. ಹೇಗಾದರೂ ಸರಿ ಈ ಎಲ್ಲಾ ಮಾರ್ಗದರ್ಶನಗಳೂ ದೈವಿಕ ಕ್ರಮದ ಸೌಹಾರ್ದವೂ ಮತ್ತು ಸಾರವೂ ಆಗಿದೆ ಎಂಬುದು ನಮಗೆ ಮನದಟ್ಟಾಗಿದೆ. ಇದು ದೇವರ ಮನೆಯಲ್ಲಿನ ಒಳ್ಳೆಯ ವರ್ತನೆಗೆ ನಮ್ಮನ್ನು ನಡಿಸುತ್ತದೆ.

ಅತಿಥಿ ಸೇವಕರಾಗಿ ನಾವು ಸೇವೆ ಮಾಡುವ ಸ್ಥಳೀಯ ಸಭೆ ತನ್ನದೇ ಆದ ಆತ್ಮಿಕ ಪ್ರಯಾಣದಲ್ಲಿ ಮುನ್ನಡೆಯುತ್ತದೆ ಎನ್ನುವುದರ ಅರಿವು ನಮಗಿರಬೇಕಾಗುತ್ತದೆ. ಆ ಸಭೆಯು ಪ್ರಸ್ತುತ ವಿದ್ಯಮಾನಗಳ ಬಗ್ಗೆ ನಾವು ಸೂಕ್ಷ್ಮಗ್ರಾಹಿಗಳಾಗಿರುವುದು ಅವಶ್ಯಕ. ಸಂದರ್ಭೋಚಿತವಾಗಿ ದೇವರಾತ್ಮನು ಹೇಳುವುದನ್ನೇ ಆ ಸಭೆಗೆ ನಾವು ಭೋದಿಸಬೇಕು.

ಸ್ಥಳೀಯ ಸಭಾಪಾಲಕರು ಆ ಬೆಳವಣಿಗೆಗೆ ಕೈಗೊಂಡಿರುವ ಕಾರ್ಯಗಳನ್ನು ನಾವು ಕುಂಠಿತಗೊಳಿಸದಂತೆ ಎಚ್ಚರವಹಿಸಬೇಕು. ಉದಾಹರಣೆ: ಸ್ಥಳೀಯ

ಸಭಾಪಾಲಕರು ದೇವರ ರಾಜ್ಯವನ್ನು ಕುರಿತು ಪ್ರಸಂಗಿಸುವಾಗ ದಶಮಾಂಶ ಕೊಡುವಿಕೆ ಮತ್ತು ಸಭೆಗೆ ನೀಡುವ ಹಣಕಾಸಿನ ಸಹಾಯ ಕುರಿತು ಹಲವಾರು ವಾರಗಳ ಕಾಲ ಬೋಧಿಸಿ ಸಭೆಯವರಲ್ಲಿ 'ಕೊಡುವಿಕೆ'ಯು ಬಗ್ಗೆ ಸಾಕಷ್ಟು ಒಳ್ಳೆಯದನ್ನು ಕಲಿಸಿರಬಹುದು. ಆಗ ಇದ್ದಕ್ಕಿದ್ದಂತೆ ಬಂದ ಅತಿಥಿ ಸೇವಕರು ತಮ್ಮ ಸಂದೇಶದಲ್ಲಿ 'ದೇವರಿಗೆ ನೀವು ಬೇಕೇ ಹೊರತು ನಿಮ್ಮ ಹಣವಲ್ಲ' ಎಂದು ಬೋಧಿಸಿದರೆ ಒಂದು ಅರ್ಥದಲ್ಲಿ ಈ ಸಂದೇಶ ಸರಿ ಇರಬಹುದು-ಆದರೆ ಇದರಿಂದ ಕೊಡುವಿಕೆಯ ವಿಷಯದಲ್ಲಿ ಸಭೆಯ ಮೇಲಾಗುವ ಕೆಟ್ಟ ಪರಿಣಾಮವೇನು? ಊಹಿಸಿಕೊಳ್ಳಿ. ಹೇಗಾದರೂ ಇರಲಿ ದೇವರಿಗೆ ನಾವು ನಮ್ಮ ಗೌರವದ ಜೊತೆಗೆ ಹಣವನ್ನು ಸಹ ಸಲ್ಲಿಸಬೇಕೆಂಬುದು ಆತನೇ ನಮಗೆ ಬೋಧಿಸಿ ಅಪ್ಪಣೆ ಮಾಡಿದ ಸಂಗತಿಯಾಗಿದೆ. ಯಾಕೆಂದರೆ ನಮ್ಮ ಹಣವೂ ಸಹ ನಮ್ಮನ್ನು ಪ್ರತಿನಿಧಿಸುತ್ತದೆ. ಅತಿಥಿ ಸೇವಕರು ಈ ರೀತಿ ಮಾಡುವುದರಿಂದ ಆ ಸಭೆಯ ಪಾಲಕರು ಶ್ರಮಪಟ್ಟು ಅನೇಕ ತಿಂಗಳುಗಳಿಂದ ಕೈಗೊಂಡಿದ್ದ ರಚನಾತ್ಮಕ ಕಾರ್ಯಗಳು ಮತ್ತು ಯೋಜನೆಗಳು ಇವರ ಒಂದು ಸಂದೇಶದೊಂದಿಗೆ ನಿಷ್ಕ್ರಿಯವಾಗುವ ಸಾಧ್ಯತೆ ಹೆಚ್ಚು.

ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಒಂದು ಸ್ಥಳದಲ್ಲಿ ನಡೆದ ಒಂದು ಕೂಟದಲ್ಲಿ ಭಾಗವಹಿಸಲು ನನಗೆ ಆಹ್ವಾನ ಬಂದದ್ದು ನೆನಪಿಗೆ ಬರುತ್ತದೆ. ಆ ಕೂಟದ ಉದ್ದೇಶ ''ಆತ್ಮಗಳನ್ನು ಗೆದ್ದುಕೊಳ್ಳುವ ವಿಷಯ''ಕ್ಕೆ ಸಂಬಂಧಿಸಿದ್ದಾಗಿತ್ತು. ಆ ಎರಡು ದಿನಗಳ ಕೂಟದ ಕೊನೆಯಲ್ಲಿ ಕಳೆದು ಹೋದ ಆತ್ಮಗಳಿಗಾಗಿ 15 ವರ್ಷದ ಬಾಲಕನಾದ ನನ್ನಲ್ಲಿ ತೀಕ್ಷ್ಣವಾದ ಭಾರವುಳ್ಳ ಒಂದು ಬಗೆಯ ಬಾವುಕತೆ ತುಂಬಿತ್ತು. ಆಗ ತಾನೇ ಯೆರೆಮೀಯನ ಪ್ರವಾದನೆ ಮತ್ತು ಪ್ರಲಾಪಗಳು-ಪುಸ್ತಕಗಳನ್ನು ಅಧ್ಯಯನ ಮಾಡಿದ್ದ ನಾಶವಾಗುವ ಆತ್ಮಗಳಿಗೋಸ್ಕರ ಪ್ರಯಾಸದಿಂದ ಯೆರೆಮೀಯ 9:1 ನನ್ನ ಅಚ್ಚುಮೆಚ್ಚಿನ ವಚನವಾಗಿತ್ತು. ಆ ಕೂಟದ ಕೊನೆಯಲ್ಲಿ ಕೆಲವು ನಿಮಿಷಗಳ ಕಾಲ ಮಾತನಾಡಲು ವ್ಯವಸ್ಥಾಪಕರಿಂದ ಅಪ್ಪಣೆ ಪಡೆದುಕೊಂಡೆ.

ನನ್ನ ಪ್ರಾರ್ಥನೆಯಲ್ಲಿ ನಾನು ಆತ್ಮಗಳು ನಾಶವಾಗುವುದನ್ನು ತಡೆಹಿಡಿಯುವ ತೀವ್ರತೆ ಮತ್ತು ಅವಶ್ಯಕತೆಯನ್ನು ನನ್ನ ಮನದ ತುಡಿತದ ಭಾರದೊಂದಿಗೆ ಪ್ರಾರ್ಥನೆಯಲ್ಲಿ ವ್ಯಕ್ತಪಡಿಸಿದೆ. ಇದು ಎಂತಹ ಪ್ರಮಾದವಾಗಿತ್ತು! ಮೊತ್ತ ಮೊದಲಿಗೆ ನಾನು ಹೇಳಿದ್ದಿದ್ದೆಲ್ಲವೂ ಕೂಟದ ಮುಖ್ಯ ಪ್ರಸ್ತಾವಕ್ಕೆ ಸಂಪೂರ್ಣವಾಗಿ ಹೊರತಾಗಿತ್ತು. ಕಳೆದು ಹೋದ ಆತ್ಮಗಳನ್ನು ಸಂಪರ್ಕಿಸಲು ಕಾರ್ಯೋನ್ಮುಖರಾಗುವಂತೆ ಎಲ್ಲರನ್ನು

ಉತ್ತೇಜಿಸುತ್ತಿದ್ದೆ. ಆ ಸಂದರ್ಭದಲ್ಲಿ ಪ್ರಸಂಗಿಸಿದ ವಿಷಯ ದೇವರ ವಾಕ್ಯಕ್ಕೆ ಅನುಗುಣವಾಗಿ ಮೌಲ್ಯದಿಂದ ಕೂಡಿದ್ದರೂ ಸಹ ನನ್ನ ಕಾರ್ಯ ಸಂಪೂರ್ಣವಾಗಿ ಕ್ರಮವಿಲ್ಲದ್ದು ಮತ್ತು ಅನಾವಶ್ಯಕವೂ ಆಗಿತ್ತು. ಆ ಕೂಟದ ವ್ಯವಸ್ಥಾಪಕರಿಂದ ನಾನು ಸಕಾರಣವಾಗಿ ಬಹಳಷ್ಟು ಗದರಿಸಲ್ಪಟ್ಟೆನು ಮತ್ತು ಆ ರೀತಿ ಕಷ್ಟದ ಹಾದಿಯಲ್ಲಿ ವಿಷಯಗಳನ್ನು ಕಲಿತುಕೊಂಡೆನು.

**ನಿಯಮದಿಂದ ಅಭ್ಯಾಸಕ್ಕೆ**: ಸೇವೆಗೆ ನಾವು ಕರೆಯಲ್ಪಟ್ಟಾಗ ಕ್ರಮಬದ್ಧವಾದ ಆತ್ಮಿಕ ಅಧಿಕೃತ ಸೂತ್ರಗಳನ್ನು ಅನುಸರಿಸಬೇಕು. ದೇವರು ನೇಮಕ ಮಾಡಿದ ಮೇರೆಗಳನ್ನು ಮೀರಬಾರದು ಅಥವಾ ಸ್ಥಾಪಿಸಲ್ಪಟ್ಟ ಅಧಿಕಾರವನ್ನು ಎಂದಿಗೂ ಅತಿಕ್ರಮಿಸಬಾರದು.

## ಪಟ್ಟಣ ವ್ಯಾಪ್ತಿಯ ಸಭೆಗಳಲ್ಲಿನ ಸೇವೆಯಲ್ಲಿರಬೇಕಾದ ಕ್ರಮಬದ್ಧವಾದ ನಡವಳಿಕೆ

ಪಟ್ಟಣದ ವ್ಯಾಪ್ತಿಯ ಬೇರೆ ಬೇರೆ ಸಭೆಗಳಲ್ಲಿ ಸಮ್ಮೇಳನ, ಕೂಟಗಳು ಮುಂತಾದ ವಿಶೇಷ ಸಂದರ್ಭಗಳಲ್ಲಿ ಸೇವೆ ಮಾಡಲು ಆಗಿಂದಾಗ್ಗೆ ಸೇವಕರಿಗೆ ಕರೆ ಬರುವುದು ಸಹಜ. ಕೆಲವು ವೇಳೆ ಇದು ಪ್ರಚಾರಕ್ಕೆ ನಡೆಸುವುದಾಗಿದ್ದು ಸಭಾ ಸೇವೆಯಲ್ಲಿ ನಿರ್ದಿಷ್ಟ ಉದ್ದೇಶಗಳಿಗೂ ಮತ್ತು ಪ್ರಾಯೋಜಿತ ಕಾರ್ಯಗಳಿಗೂ ಪರೋಕ್ಷವಾಗಿ ಮಾರಾಟಕ್ಕೂ ಮತ್ತು ಮಾರಾಟದ ವ್ಯವಸ್ಥೆಗೂ ಪ್ರಯತ್ನಿಸುವುದಾಗಿರುತ್ತದೆ. ಸಭಾ ಸೇವಕರು ಅತಿ ಸೂಕ್ಷ್ಮವಾದ ತರ್ಕದಿಂದ ಜನರನ್ನು ಸಭೆಯಲ್ಲಿ ಮತ್ತು ಸೇವೆಯಲ್ಲಿ ಪಾಲ್ಗೊಳ್ಳಲು ಬಲತ್ಕರಿಸುವುದುಂಟು. ಇದು ಆರೋಗ್ಯಕರವಲ್ಲದ ಸಂಗತಿಯಾಗಿದ್ದು ಸಭೆಗಳಲ್ಲಿ ಸೇವೆ ಮಾಡುವಾಗ ಕ್ರಮಬದ್ಧವಾದ ವರ್ತನೆಯಾಗಿರುತ್ತದೆ. ಸೇವೆಗೆ ಆಹ್ವಾನಗಳು ಬಂದಾಗ ವಿಶ್ವಾಸಿಗಳು ತಮ್ಮ ಜೀವನದಲ್ಲಿ ತಿದ್ದಿಕೊಳ್ಳಲು ಮತ್ತು ಅವರ ಸ್ವಂತ ಸಭೆಗಳಿಂದ ಈಗಾಗಲೇ ಸ್ವೀಕೃತಗೊಂಡ ವಾಕ್ಯೋಪದೇಶದಲ್ಲಿ ಪ್ರೋತ್ಸಾಹಗೊಳ್ಳಲು ಮತ್ತು ಆ ಮೂಲಕ ತಮ್ಮ ಸ್ವಂತ ಸಭೆಗಳಿಗೆ ಉಪಯುಕ್ತ ಆಸ್ತಿಗಳಾಗಿ ಪರಿಣಮಿಸುವಂತೆ ಸೇವೆ ಸಲ್ಲಿಸುವುದು ಯುಕ್ತವಾದದ್ದು.

ವಿಶ್ವಾಸಿಗಳು ತಮ್ಮ ಸ್ವಂತ ಸಭೆಗಳಿಗೇ ನಂಬಿಗಸ್ತರಾಗಿರುವಂತೆ ಪಟ್ಟಣ ವ್ಯಾಪ್ತಿಯ ಸಭಾಸೇವಕರುಗಳು ಪ್ರೋತ್ಸಾಹಿಸಬೇಕು. ಇದರೊಂದಿಗೆ ತಮ್ಮ ಆತ್ಮಿಯ ಪೋಷಣೆ ಮತ್ತು ಅಭಿವೃದ್ಧಿಗೆ ನೆರವಾಗುವ ತಮ್ಮ ಸ್ಥಳೀಯ ಸಭೆಗಳಿಗೆ ದಶಮಾಂಶ ಮತ್ತು ಕಾಣಿಕೆಗಳನ್ನು ಕೊಡುವಂತೆ ಪ್ರೋತ್ಸಾಹಿಸಬೇಕು. ಒಂದು ವೇಳೆ ವಿಶ್ವಾಸಿಗಳು

ಪಟ್ಟಣದ ಇತರೆ ಸಭೆಗಳಿಗೆ ಅಥವಾ ಜಾಗತಿಕ ಮಟ್ಟದ ಸೇವೆಗೆ ಸಹಾಯಮಾಡಲು ಇಚ್ಛಿಸಿದಲ್ಲಿ ಮೊದಲು ತಮ್ಮ ಸ್ಥಳೀಯ ಸಭೆಗಳಿಗೆ ದಶಮಾಂಶ ಕೊಟ್ಟು ನಂತರ ಇತರೇ ಸೇವೆಗೆ ಹಣ ನೀಡಬೇಕು.

ಒಂದು ವೇಳೆ ಸ್ಥಳೀಯ ಸಭೆಗಳು ರಕ್ಷಿಸಲ್ಪಡದ ಆತ್ಮಗಳನ್ನು ಕೂಡಿಸಿ ಸಂರಕ್ಷಿಸುವ ಯೋಜನೆಯಲ್ಲಿ ನಿರತವಾದ ಸಂದರ್ಭದಲ್ಲಿ ಅದನ್ನು ಬಹಿರಂಗವಾಗಿ ಘೋಷಿಸಬೇಕು.

ಹಾಗೊಂದು ವೇಳೆ ದೊಡ್ಡ ಪ್ರಮಾಣದಲ್ಲಿ ಕೂಟಗಳನ್ನು ಸಮ್ಮೇಳನ ಇತ್ಯಾದಿಗಳನ್ನು ನಿಜವಾಗಿಯೂ ಪಟ್ಟಣದ ಸಭೆಗಳ ಸರ್ವತೋಮುಖ ಅಭಿವೃದ್ಧಿಗೆ ಮಾಡುವುದಾದರೆ ಆಗ ಇತರೆ ಸಭೆಗಳವರ ಭಾಗವಹಿಸುವಿಕೆ ಮತ್ತು ಸಹಕಾರ ನೀಡುವಿಕೆ ಇವುಗಳನ್ನು ಸಭೆಗಳ ಮಧ್ಯದಲ್ಲಿ ಕಾಣುವಂತಾಗುತ್ತದೆ.

**ನಿಯಮದಿಂದ ಅಭ್ಯಾಸದ ಕಡೆಗೆ**: ನೀವು ಮಾಡುವ ಸೇವೆ ಪಟ್ಟಣವ್ಯಾಪ್ತಿಯ ಸಭೆಗಳು ತಮ್ಮನ್ನು ತಿದ್ದಿಕೊಳ್ಳಲು ಮತ್ತು ಬಲಗೊಳ್ಳಲು ಹಾಗೂ ಆ ಮೂಲಕ ಪಟ್ಟಣದಲ್ಲಿ ದೇವರ ರಾಜ್ಯ ವಿಸ್ತಾರಗೊಳ್ಳಲು ನೆರವಾಗುವಂತಿರಬೇಕು.

## *ನೀವು ಏನನ್ನು ಉಪದೇಶಿಸುತ್ತೀರೋ ಅದರ ಬಗ್ಗೆ ಎಚ್ಚರ ವಹಿಸಿ*

1 ತಿಮೊಥೆಯನಿಗೆ 4:16

**ನಿನ್ನ ವಿಷಯದಲ್ಲಿಯೂ ನಿನ್ನ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು. ನೀನು ಈ ಕಾರ್ಯಗಳಲ್ಲಿ ನಿರತನಾಗಿರು; ಹೀಗಿರುವುದರಿಂದ ನಿನ್ನನ್ನೂ ನಿನ್ನ ಉಪದೇಶ ಕೇಳುವವರನ್ನೂ ರಕ್ಷಿಸುವಿ.**

2 ತಿಮೊಥೆಯನಿಗೆ 4:1-4

**ದೇವರ ಮುಂದೆ ಮತ್ತು ಜೀವಿಸುವವರಿಗೂ ಸತ್ತವರಿಗೂ ನ್ಯಾಯ ತೀರಿಸುವುದಕ್ಕೆ ಬರುವ ಕ್ರಿಸ್ತ ಯೇಸುವಿನ ಮುಂದೆ ಆತನ ಪ್ರತ್ಯಕ್ಷತೆಯ ಮೇಲೆಯೂ ಆತನ ರಾಜ್ಯದ ಮೇಲೆಯೂ ಆಣೆಯಿಟ್ಟು ನಾನು ನಿನಗೆ ಖಂಡಿತವಾಗಿ ಹೇಳುವುದೇನೆಂದರೆ ದೇವರ ವಾಕ್ಯಕನುಸಾರ, ಅನುಕೂಲವಾದ ಕಾಲದಲ್ಲಿಯೂ, ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು ಯಾಕೆಂದರೆ ಜನರು ಸ್ವಸ್ಥಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ; ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲವಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು. ಅವರು ಸತ್ಯ ಬೋಧನೆಗೆ ಕಿವಿಗೊಡದೆ ಕಲ್ಪನಾ ಕಥೆಗಳನ್ನು ಕೇಳುವುದಕ್ಕೆ ಹೋಗುವರು.**

ಯಾಕೋಬನು 3:1
**ನನ್ನ ಸಹೋದರರೇ, ಬೋಧಕರಾದ ನಮಗೆ ಕಠಿಣವಾದ ತೀರ್ಪು ಆಗುವುದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗಬೇಡಿರಿ.**

ದೇವರ ಸೇವಕರಾಗಿ ನಾವು ಏನನ್ನು ಉಪದೇಶಿಸುತ್ತೇವೋ ಮತ್ತು ಪ್ರಸಂಗಿಸುತ್ತೇವೋ ಅದರ ಬಗ್ಗೆ ಎಚ್ಚರದಿಂದಿರಬೇಕು. ಯಾಕಾದರೆ ನಾವು ಬಹು ಜನರ ಬದುಕಿನ ಮೇಲೆ ಪ್ರಭಾವ ಮತ್ತು ಪರಿಣಾಮಗಳನ್ನು ಬೀರುತ್ತೇವೆ. ಜನರಿಗೆ ದೇವರ ವಾಕ್ಯೋಪದೇಶವನ್ನು ಮಾಡುವಾಗ ನಾವು ಖಂಡಿತವಾಗಿಯೂ ಬಹು ಒತ್ತಡವನ್ನು ಎದುರಿಸಬೇಕಾಗುತ್ತದೆ.

- ಜನರು ಇದುವರೆವಿಗೂ ಕೇಳಿಸಿಕೊಳ್ಳದೇ ಇದ್ದ ಹೊಸದಾದ ಪ್ರಕಟಣೆಯನ್ನು ವಾಕ್ಯದ ಒಳನೋಟಗಳನ್ನು ಒದಗಿಸುವುದು.
- ಇದು ಎಂಥದ್ದೆಂದರೆ ಪಾಂಡಿತ್ಯ ಪೂರ್ಣದಂತೆ ಪ್ರಸಂಗಿಸುವುದು. ದೇವರಿಂದ ನೇರವಾಗಿ ಜನರಿಗೋಸ್ಕರವೇ ಸಂದೇಶ ಸ್ವೀಕರಿಸುವಂತೆ ಪ್ರವಾದನಾಯುಕ್ತವಾಗಿ ಪ್ರಸಂಗಿಸುವುದು.
- ಕೇಳುವವರ ಬದುಕನ್ನು ನಮ್ಮ ಅತ್ಯುತ್ತಮವಾದ ಉಪದೇಶ, ತರಬೇತಿ, ಸಿದ್ಧತೆ ಮತ್ತು ಬೋಧನಾ ಸಾಮಾಗ್ರಿಗಳಿಂದ ಹಸನು ಮಾಡುವ ಅವಶ್ಯಕತೆ ಇರುವಾಗ ಜನರ ಒತ್ತಡ ಮತ್ತು ನಿರೀಕ್ಷೆಗಳು ನಮ್ಮನ್ನು ದೈವಿಕ ಕ್ರಮದಿಂದ ಹೊರಗಿಡದಂತೆ ನಾವು ಕಾರ್ಯನಿರ್ವಹಿಸಬೇಕಾಗುತ್ತದೆ.

ದೇವರ ವಾಕ್ಯವನ್ನು ಉಪದೇಶಿಸುವಾಗ ಆತನೇ ಅದನ್ನು ಒದಗಿಸಿದ್ದಾನೆ ಎಂಬ ತುಂಬು ವಿಶ್ವಾಸದಿಂದ ಉಪದೇಶಿಸಬೇಕು. ಆತನ ವಾಕ್ಯವು ಜನರ ಜೀವನದ ಮೇಲೆ ತನ್ನ ಗಾಢವಾದ ಪರಿಣಾಮವನ್ನು ಬೀರುತ್ತದೆ. ನಾವು ಯಾವಾಗಲೂ ಜನರನ್ನು ರಂಜಿಸುವ ಅಥವಾ ಆಳವಾದ ಪ್ರಕಟಣೆಗಳನ್ನು ಮತ್ತು ಪ್ರವಾದನೆಗಳನ್ನು ನೀಡುವ ಅಗತ್ಯವಿಲ್ಲ. ಸರಳವಾದ ರೀತಿಯಲ್ಲಿ ಉಪದೇಶಿಸಿ ಮತ್ತು ಪ್ರಸಂಗಿಸಿದಾಗ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳದ ದೇವರ ವಾಕ್ಯದ ಸರಳವಾದ ಪ್ರಾಯೋಗಿಕ ಮಾರ್ಗಗಳಿಂದಲೇ ನಿಜವಾಗಿಯೂ ದೇವಜನರು ಒಟ್ಟುಗೂಡಿಸಿ ಕಟ್ಟಲ್ಪಡುತ್ತಾರೆ.

ದೇವರ ವಾಕ್ಯಗಳೆನಿಸಿರುವ ಬೋಧನೆ ಮತ್ತು ಪ್ರಸಂಗಗಳ ಅನುಭವಗಳು ಮತ್ತು ಅವುಗಳಿಗೆ ಸಂಬಂಧಿಸಿದ ವಿಷಯಾತೀತ ಪ್ರಕಟಣೆಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು. ಜೀವನದಲ್ಲಿ ನಮ್ಮಲ್ಲಿ ಒಬ್ಬೊಬ್ಬರಿಗೂ ಒಂದೊಂದು ರೀತಿಯ ಅನುಭವಗಳಿವೆ. ಅನುಭವಗಳಿವೆಯಾದರೂ ಅವೆಲ್ಲವೂ ದೇವರಿಂದುಂಟಾದ ಇಲ್ಲವೇ ಆತನ ಜನರಿಗೆ

ಉದ್ದೇಶಪೂರ್ವಕವಾಗಿಯೇ ಆದದ್ದು ಎಂದು ಹೇಳಲಾಗದು. ಇತರರೊಂದಿಗೆ ಜೀವನದ ಅನುಭವಗಳನ್ನು ಹಂಚಿಕೊಳ್ಳುವುದರ ಉದ್ದೇಶ ಜನರು ವಾಕ್ಯದ ಸತ್ಯಾಂಶವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅವುಗಳನ್ನು ತಮ್ಮ ಜೀವನಕ್ಕೆ ಅನ್ವಯಿಸಿಕೊಳ್ಳಬೇಕೆಂಬುದೇ ಆಗಿದೆ. ನಮ್ಮ ವೈಯಕ್ತಿಕ ಅನುಭವಗಳಿಂದ ದೈವಜ್ಞಾನವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಹಾಗೆಯೇ ಸೇವಕರುಗಳು ವಾಕ್ಯದ ಸತ್ಯಾಂಶದ ಹಿನ್ನೆಲೆಯಲ್ಲಿ ತಾವು ಪ್ರತಿಪಾದಿಸುವ ವಿಶೇಷ ಪ್ರಕಟಣೆಗಳೆಲ್ಲವೂ ಸತ್ಯವೇದದಿಂದಲೇ ಆಧಾರಗೊಳ್ಳುವುದಿಲ್ಲ ಅಥವಾ ಅವುಗಳೆಲ್ಲವೂ ದೇವರ ವಾಕ್ಯವು ಬೋಧಿಸುವ ಸರಳ ಸತ್ಯಾಂಶದ ಭಾಗವೂ ಆಗಿರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಬೋಧಿಸುವವರು ತಮ್ಮ ಬೋಧನೆಗಳಲ್ಲಿ ಮಾಡುವ ಗಮನಾರ್ಹ ಘೋಷಣೆಗಳಿಂದ ''ಪವಿತ್ರಾತ್ಮನು ನನಗೆ ಪ್ರಕಟಿಸಿದ್ದಾನೆ'' ಅಥವಾ ''ನಾನು ದೇವರಿಂದ ವಿಶೇಷ ಸಂದರ್ಶನ ಹೊಂದಿದೆನು ಮತ್ತು ಆತನು ನನಗೆ ಹೇಳಿದನು'' ಇತ್ಯಾದಿಗಳನ್ನು ದೇವರ ವಾಕ್ಯದಲ್ಲಿ ಇನ್ನೂ ಪೂರ್ತಿಯಾಗಿ ನೆಲೆಗೊಳ್ಳದ ದೇವಜನರ ಮಧ್ಯದಲ್ಲಿ ಬಳಸಿ ಪ್ರಸಂಗಿಸಬಾರದು.

**ನಿಯಮದಿಂದ ಅಭ್ಯಾಸಕ್ಕೆ**: ದೇವರ ಸತ್ಯವಾಕ್ಯವನ್ನು ಸರಿಯಾಗಿ ಪ್ರಯೋಗಿಸಿ ಪ್ರಸಂಗಿಸಿ ಮತ್ತು ಸರಿಯಾದ ತತ್ವಗಳನ್ನೇ ಬೋಧಿಸಿ.

## ಅಪ್ಪಣೆ ಕೊಡುವಾತನು ಕರ್ತನೇ ಆಗಿದ್ದಾನೆ

ಜ್ಞಾನೋಕ್ತಿಗಳು 27:2
**ನಿನ್ನನ್ನು ನೀನೇ ಹೊಗಳಿಕೊಳ್ಳಬೇಡ, ಮತ್ತೊಬ್ಬನು ಹೊಗಳಿದರೆ ಹೊಗಳಲಿ; ಆತ್ಮಸ್ತುತಿ ಬೇಡ, ಪರನು ನಿನ್ನನ್ನು ಸ್ತುತಿಸಿದರೆ ಸ್ತುತಿಸಲಿ.**

ಯೋಹಾನ 5:44
**ಒಬ್ಬನೇ ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೆ ಒಬ್ಬರಿಂದೊಬ್ಬರು ಮಾನವನ್ನು ಅಂಗೀಕರಿಸುವವರಾದ ನೀವು ಹೇಗೆ ನಂಬೀರಿ?**

1 ಕೊರಿಂಥದವರಿಗೆ 10:17, 18
**ಹೆಚ್ಚಳ ಪಡುವವನು ಕರ್ತನಲ್ಲಿಯೇ ಹೆಚ್ಚಳಪಡಲಿ. ತನ್ನನ್ನು ತಾನೇ ಹೊಗಳಿಕೊಳ್ಳುವವನು ಯೋಗ್ಯನಲ್ಲ; ಕರ್ತನು ಯಾರನ್ನು ಹೊಗಳುತ್ತಾನೋ ಅವನೇ ಯೋಗ್ಯನು.**

ನಮ್ಮ ಸೇವೆಯಲ್ಲಿ ನಾವು ಸಾಕ್ಷಿಯನ್ನು ಇತರರೊಂದಿಗೆ ಹಂಚಿಕೊಳ್ಳುವಾಗ ಅಥವಾ ದೇವರು ನಡೆಸಿದ ಕಾರ್ಯಗಳನ್ನು ಕುರಿತು ಇತರರೊಂದಿಗೆ ಹೇಳುವಾಗ

ದೇವರಿಗೆ ಮಹಿಮೆಯನ್ನು ಸಲ್ಲಿಸುವುದಕ್ಕೆ ಬದಲಾಗಿ ಅತಿ ಸೂಕ್ಷ್ಮವಾಗಿ ನಮ್ಮನ್ನು ನಾವೇ ಬಹುಪಾಲು ಸಾಕ್ಷಿ ನಾನು, ನನ್ನ ಮತ್ತು ನನ್ನದು ಎಂಬುದರ ಬಗ್ಗೆಯೇ ಇರುತ್ತದೆ. ಇಂತಹ ವಿಷಯಗಳ ಬಗ್ಗೆ ನಾವು ಬಹಳ ಎಚ್ಚರಿಕೆಯುಳ್ಳವರಾಗಿದ್ದು ದೇವರಿಗೆ ಮಹಿಮೆ ಸಲ್ಲಿಸುವವರಾಗಿರಬೇಕು. ನಾವು ಕರ್ತನಿಗೆ ಅಪ್ಪಣೆ ವಿಧಿಸುವುದರ ಬದಲಾಗಿ ಕರ್ತನೇ ನಮಗೆ ಅಪ್ಪಣೆ ಕೊಡುವಂತೆ ಇರಬೇಕು.

**ನಿಯಮದಿಂದ ಅಭ್ಯಾಸದ ಕಡೆಗೆ**: ಮೇಲಣ ಲೋಕದ ದೇವರಿಂದ ಬರುವ ಮಾನ್ಯತೆಯನ್ನು ಬಯಸಿರಿ. ನಿಮ್ಮನ್ನು ನೀವು ಹೆಚ್ಚಿಸಿಕೊಳ್ಳಬೇಡಿ.

## ನಮ್ಮ ಸೇವೆಯ ರುಜುವಾತುಗಳು

ಫಿಲಿಪ್ಪಿಯವರಿಗೆ 4:1

**ಹೀಗಿರಲಾಗಿ ಪ್ರಿಯರೂ ಇಷ್ಟರೂ ಆದ ನನ್ನ ಸಹೋದರರೇ, ನನಗೆ ಸಂತೋಷವೂ, ಜಯಮಾಲೆಯೂ ಆಗಿರುವವರೇ, ನಾನು ಹೇಳಿದಂತೆ ಕರ್ತನಲ್ಲಿ ದೃಢವಾಗಿ ನಿಲ್ಲಿರಿ, ಪ್ರಿಯರೇ,**

1 ಥೆಸಲೋನಿಕದವರಿಗೆ 2:19, 20

**ನಮ್ಮ ಕರ್ತನಾದ ಯೇಸು ಪ್ರತ್ಯಕ್ಷನಾಗುವಾಗ ಆತನ ಮುಂದೆ ನಮ್ಮ ಭರವಸೆಯೂ, ನಮ್ಮ ಸಂತೋಷವೂ ನಾವು ಹೊಗಳಿಕೊಳ್ಳುವ ಜಯಮಾಲೆಯೂ ಯಾರು? ನೀವೇ ಅಲ್ಲವೇ. ನಿಜವಾಗಿ ನೀವೇ ನಮ್ಮ ಗೌರವವೂ ಸಂತೋಷವೂ ಆಗಿದ್ದೀರಿ.**

ನಮ್ಮ ಸೇವೆಯ ಹಾಗೂ ಸೇವೆಗೆ ಸಂಬಂಧಿಸಿದ ಕರೆಯನ್ನು ರುಜುವಾತು ಪಡಿಸಲು ಪ್ರಾಮುಖ್ಯವಲ್ಲದ ಅನೇಕ ಸಂಗತಿಗಳ ಮೇಲೆ ನಾವು ಅವಲಂಬಿತರಾಗುತ್ತೇವೆ. ಸೇವೆಗೆ ನಾವು ಬಹುಮಟ್ಟಿಗೆ ಅರ್ಹರು ಅಥವಾ ಕರೆಯಲ್ಪಟ್ಟ ಸೇವೆಗೆ ನಿಜವಾಗಿಯೂ ನಾವು ಅರ್ಹತೆಯುಳ್ಳವರು ಮತ್ತು ಸಮಂಜಸರು ಎಂಬುದನ್ನು ನಿರೂಪಿಸಲು ನಮ್ಮ ಸೇವೆಯ ಅನೇಕ ಸಂಪರ್ಕಗಳು, ಬರೆದ ಪುಸ್ತಕಗಳು, ನಿರ್ಮಿಸಿದ ಧ್ವನಿ ಸುರುಳಿಗಳು ಅಥವಾ ನಾವು ಪ್ರಸಂಗಿಸಿದ ದೊಡ್ಡ ದೊಡ್ಡ ವೇದಿಕೆಗಳು, ನಾವು ಉದ್ದೇಶಿಸಿ ಮಾತನಾಡಿದ ಜನಸಮೂಹ-ಈ ಮುಂತಾದ ಹಲವಾರು ಅಂಶಗಳನ್ನು ಬಳಸಿಕೊಳ್ಳಲು ಯತ್ನಿಸುತ್ತೇವೆ.

ಹೇಗಾದರೂ, ನಮ್ಮ ಸೇವೆಯು ನಿಜವಾದ ರುಜುವಾತು ಎಂದರೆ ರೂಪಾಂತರಗೊಂಡ ಜೀವನ/ಬದಲಾದ ಬದುಕು. ಅಂದರೆ ದೇವರ ರಾಜ್ಯದಲ್ಲಿ ಫಲಕೊಡಲು ನೇಮಿಸಲ್ಪಟ್ಟ ಮತ್ತು ದೇವರಿಂದಲೇ ಸ್ಪರ್ಶಗೊಂಡ ಜೀವಮಾನ. ಒಂದು

ವೇಳೆ ಈ ರೀತಿಯಲ್ಲಿ ಜೀವನ ಬದಲಾಗದಿದ್ದರೆ, ಸಮೃದ್ಧಿ ಹೊಂದದಿದ್ದರೆ ಮತ್ತು ದೇವರ ರಾಜ್ಯದ ಅನುಭವದಲ್ಲಿ ನೆಲೆಗೊಳ್ಳದೆ ಉಳಿದ ಎಲ್ಲಾ ಸಂಗತಿಗಳು ಎಂದಿಗೂ ಪ್ರಾಮುಖ್ಯವಾಗುವುದಿಲ್ಲ.

**ನಿಯಮದಿಂದ ಅಭ್ಯಾಸದ ಕಡೆಗೆ**: ಸೇವೆಯಲ್ಲಿ ಜನರನ್ನು ಕಟ್ಟುವುದರ ಕಡೆಗೆ ಗಮನ ಹರಿಸಿ. ಜನರ ಬದುಕಿನಲ್ಲಿ ಏನು ಒಳ್ಳೆಯ ಸಾಧನೆ ಆಗಿದೆಯೋ ಅದೇ ನಿಜವಾದ ಪ್ರಾಮುಖ್ಯವಾದ ಸಂಗತಿಯಾಗುತ್ತದೆ.

## ಅಪರಾಧಕ್ಕೆ ಆಸ್ಪದ ಕೊಡದಿರುವುದು

1 ಕೊರಿಂಥದವರಿಗೆ 10:32.33

**ಯೆಹೂದ್ಯರಿಗಾಗಲಿ ಗ್ರೀಕರಿಗಾಗಲಿ ದೇವರ ಸಭೆಗಾಗಲಿ ವಿಘ್ನವಾಗಬೇಡಿರಿ. ನಾನಂತೂ ಸ್ವಪ್ರಯೋಜನಕ್ಕಾಗಿ ಚಿಂತಿಸದೆ ಮನುಷ್ಯರೆಲ್ಲರೂ ರಕ್ಷಣೆಹೊಂದಬೇಕೆಂದು ಅವರ ಪ್ರಯೋಜನಕ್ಕಾಗಿ ಚಿಂತಿಸಿ ಎಲ್ಲರನ್ನೂ ಎಲ್ಲಾ ವಿಷಯಗಳಲ್ಲಿ ಮೆಚ್ಚಿಸುವವನಾಗಿದ್ದೇನೆ.**

2 ಕೊರಿಂಥದವರಿಗೆ 6:3,4

**ನಿಂದೆಗೆ ಅವಕಾಶಕೊಡದೆ ಎಲ್ಲಾ ಸಂಗತಿಗಳಲ್ಲಿ ದೇವರ ಸೇವಕರೆಂದು ನಮ್ಮನ್ನು ಸಮ್ಮತರಾಗ ಮಾಡಿಕೊಳ್ಳುತ್ತೇವೆ. ನಾವು ಸಂಕಟಗಳಲ್ಲಿಯೂ, ಕೊರತೆಗಳಲ್ಲಿಯೂ ಇಕ್ಕಟ್ಟುಗಳಲ್ಲಿಯೂ, ಪೆಟ್ಟುಗಳಲ್ಲಿಯೂ...**

ನಮಗೆ ದೊರೆತಿರುವ ಕರೆ ಮತ್ತು ಜವಾಬ್ದಾರಿಯನ್ನು ಭಯ ಭಕ್ತಿಯಿಂದ ನಡುಗುವವರಾಗಿ ನಿರ್ವಹಿಸುತ್ತ, ದೇವರ ಸೇವಕರಾಗಿ ನಮ್ಮನ್ನು ಸಮ್ಮತರಾಗ ಮಾಡಿಕೊಳ್ಳಬೇಕು. ಅನೇಕರು ಈ ರೀತಿಯಾಗಿ ನಡೆದುಕೊಳ್ಳುವಂತೆ ಕಾಣುವುದಿಲ್ಲ. ಬಹುಶಃ ಎಲ್ಲಾ ಸಂಗತಿಗಳನ್ನು ನಾವು ಹಗುರವಾಗಿ ತೆಗೆದುಕೊಳ್ಳುತ್ತೇವೆ. ಸೇವೆಯಲ್ಲಿ ನಿಂದೆಗೆ ಅವಕಾಶವಿಲ್ಲದಂತೆ ಸಾಕಷ್ಟು ಎಚ್ಚರವಹಿಸದೆ ಸೇವೆ ಮಾಡುತ್ತೇವೆ.

ಸಭೆಯ ಒಳಗೂ ಮತ್ತು ಹೊರಗೂ ಜನರು ಕ್ರಿಸ್ತನ ಸೇವಕರಂತೆ ಕಾಣುತ್ತಾರೆ. ನಾವು ನಿಜವಾಗಿಯೂ ಕ್ರಿಸ್ತನ ಪ್ರತಿನಿಧಿಗಳಾಗಿದ್ದೇವೆ. ನಮ್ಮ ಜೀವನದ ವಿಧಾನ ಹೇಗಿರಬೇಕೆಂದರೆ ಅಪೊಸ್ತಲನಾದ ಪೌಲನಂತೆ ನಾವೂ ಸಹ ಧೈರ್ಯದಿಂದ ಹೇಳುವವರಾಗಿರಬೇಕು. "ನಾನು ಕ್ರಿಸ್ತನನ್ನು ಅನುಸರಿಸುವಂತೆ ನೀವೂ ನನ್ನನ್ನು ಅನುಸರಿಸುವವರಾಗಿರಿ." (1 ಕೊರಿಂಥದವರಿಗೆ 11:1)

- ದೇವರ ಸೇವಕರಾದ ನಾವುಗಳೇ ಒಂದು ವೇಳೆ ದೇವರ ಪ್ರೀತಿಯಲ್ಲಿ ನೆಲೆಗೊಳ್ಳದೆ ಸಹ ಸೇವಕರೊಂದಿಗೆ ಪ್ರೀತಿಯಿಂದ ನಡೆದುಕೊಳ್ಳದೆ ಹೋದರೆ, ದೇವ ಜನರಿಗೆ ನೀವು ಪ್ರೀತಿಯಲ್ಲಿ ನೆಲೆಗೊಂಡು ಪ್ರೀತಿಯಲ್ಲಿ ನಡೆಯಿರಿ ಎಂಬುದಾಗಿ ಬೋಧಿಸುವುದು ಹೇಗೆ?
- ದೇವರ ಸೇವಕರಾದ ನಾವುಗಳೇ ಒಂದು ವೇಳೆ ದೇವರ ಮುಂದೆ ನಮ್ರತೆಯಿಂದ ನಡಕೊಳ್ಳದೇ ಇದ್ದರೆ ಇನ್ನು ದೇವಜನರಿಗೆ ದೀನತ್ವವನ್ನು ಕುರಿತು ನಾವು ಬೋಧಿಸುವುದು ಹೇಗೆ?
- ದೇವರ ಸೇವಕರೆನಿಸಿಕೊಂಡಿರುವ ನಾವುಗಳೇ ಒಂದು ವೇಳೆ ಶುದ್ಧತ್ವ ಒಡನಾಟ ಮತ್ತು ಪ್ರಾಮಾಣಿಕತೆಗಳಲ್ಲಿ ನೆಲೆಗೊಂಡಿರದಿದ್ದರೆ ಇವುಗಳನ್ನು ಕುರಿತು ದೇವಜನರಿಗೆ ಬೋಧಿಸಲು ಸಾಧ್ಯವೇ?
- ದೇವರ ಸೇವಕರುಗಳಾಗಿ ನಾವು ಹಣವನ್ನು ಕ್ರಮವಾಗಿ ಅಥವಾ ಬುದ್ಧಿವಂತಿಕೆಯಿಂದ ಉಪಯೋಗಿಸದಿದ್ದರೆ, ನಾವು ಹೇಗೆ ದೇವರ ಜನರು ಇದನ್ನು ಮಾಡಲೂ ಉಪದೇಶಿಸಬಹುದು?
- ದೇವರ ಸೇವಕರಾದ ನಾವುಗಳೇ ಒಂದು ವೇಳೆ ನಮ್ಮ ಜೀವನದ ಸಂಗಾತಿ ಮತ್ತು ಮಕ್ಕಳನ್ನು ಪ್ರೀತಿಸದೆ ದೈವಭಕ್ತಿಯುಳ್ಳ ಕುಟುಂಬವನ್ನು ಕಟ್ಟದೇ ಹೋದರೆ ದೇವಜನರಿಗೆ ಇದನ್ನು ಬೋಧಿಸಲು ಸಾಧ್ಯವೇ?

**ನಿಯಮದಿಂದ ಅಭ್ಯಾಸಕ್ಕೆ:** ಸೇವಕರಾಗಿ ನಿಮಗೆ ದೊರೆತಿರುವ ಕರೆಯನ್ನು ಗೌರವದಿಂದ ಭದ್ರವಾಗಿ ಹಿಡಿದಿಟ್ಟುಕೊಳ್ಳಿರಿ. ಕ್ರಿಸ್ತನ ಹೆಸರಿಗೆ ಯಾವುದೇ ರೀತಿಯ ಅಪಮಾನ ಉಂಟಾಗದಂತೆ ನೀವು ವರ್ತಿಸಿರಿ.

## ಎಲ್ಲಾ ಸಭೆಗಳ ಮಧ್ಯದಲ್ಲಿ ಸ್ತುತಿಸುವುದು

ಜ್ಞಾನೋಕ್ತಿಗಳು 22:1

**ಬಹುಧನಕ್ಕಿಂತಲೂ ಒಳ್ಳೆಯ ಹೆಸರು ಉತ್ತಮ; ಬೆಳ್ಳಿ ಬಂಗಾರಕ್ಕಿಂತಲೂ ಸತ್ಕೀರ್ತಿಯು ಅಮೂಲ್ಯ.**

2 ಕೊರಿಂಥದವರಿಗೆ 8:18

**ಅವನ ಜೊತೆಯಲ್ಲಿ ಮತ್ತೊಬ್ಬ ಸಹೋದರನನ್ನು ಕಳುಹಿಸಿದ್ದೇವೆ. ಈ ಸಹೋದರನು ಸುವಾರ್ತಾಸೇವೆಯಲ್ಲಿ ಎಲ್ಲಾ ಸಭೆಗಳೊಳಗೆ ಕೀರ್ತಿಪಡಕೊಂಡವನಾಗಿದ್ದಾನೆ.**

2 ಕೊರಿಂಥದವರಿಗೆ 8:23

**ತೀತನನ್ನು ಕುರಿತು ಕೇಳುತ್ತೀರೋ, ಅವನು ನನ್ನ ಪಾಲುಗಾರನೂ ನಿಮ್ಮ ಪ್ರಯೋಜನಕ್ಕಾಗಿ ನನಗೆ ಸಹಕಾರಿಯೂ ಆಗಿದ್ದಾನೆ; ಆ ಸಹೋದರರನ್ನು ಕುರಿತು ಕೇಳುತ್ತೀರೋ. ಅವರು ಸಭೆಗಳಿಂದ ಕಳುಹಿಸಲ್ಪಟ್ಟವರೂ ಕ್ರಿಸ್ತನ ಮಹಿಮೆಯನ್ನು ಪ್ರಕಾಶಪಡಿಸುವವರೂ ಆಗಿದ್ದಾರೆ.**

ಫಿಲಿಪ್ಪಿಯವರಿಗೆ 29:30

**ಕ್ರಿಸ್ತನ ಕೆಲಸದ ನಿಮಿತ್ತ ಸಾಯುವ ಹಾಗಿದ್ದನೆಂದು ನೀವು ತಿಳಿದು ಅವನನ್ನು ಪೂರ್ಣ ಸಂತೋಷದಿಂದ ಕರ್ತನ ಹೆಸರಿನಲ್ಲಿ ಸೇರಿಸಿಕೊಳ್ಳಿರಿ. ಅಂಥವರನ್ನು ಮಾನ್ಯ ಮಾಡಿರಿ.**

ಪಾಲಕರಾಗಿ, ಸೇವಕರಾಗಿ ಮತ್ತು ಯಾವುದೇ ಬಗೆಯ ಸೇವೆಯ ನಾಯಕರಾಗಿ ನಮಗೆ ಎಲ್ಲೆಲ್ಲಿ ಸೇವೆ ಮಾಡಲು ಅವಕಾಶಗಳು ದೊರೆಯುತ್ತವೆಯೋ ಆ ಎಲ್ಲಾ ಸಭೆಗಳ  ಮಧ್ಯದಲ್ಲಿ ನಾವು ಒಳ್ಳೆಯ ಹೆಸರನ್ನು ಸಂಪಾದಿಸಬೇಕಾಗುತ್ತದೆ. ಅವುಗಳ ಮಧ್ಯದಲ್ಲಿ ಗೌರವದಿಂದ ವರ್ತಿಸಬೇಕಾಗುತ್ತದೆ.

ಅನೇಕ ವೇಳೆ ನಾವು ಒಂದು ನಿರ್ದಿಷ್ಟ ಸಭೆಯಲ್ಲಿ ಪ್ರಸಂಗಿಸುವುದನ್ನಾಗಲೀ ಅಥವಾ ನಿರ್ದಿಷ್ಟ ಸಮ್ಮೇಳನ ಇಲ್ಲವೇ ಗಮನಾರ್ಹವಾದ ವೇದಿಕೆಯಲ್ಲಿ ಸಂದೇಶ ಹೇಳುವುದನ್ನಾಗಲೀ ಗಣನೆಗೆ ತಂದುಕೊಂಡು ಆ ಕುರಿತು ಹೆಮ್ಮೆ ಪಡುವವರಾಗುತ್ತೇವೆ ನಿಜವಾದ ಸೇವೆ ಎಂಬುದು ಯಾವ ಸಭೆಯಲ್ಲಿ ಯಾವ ಸಮ್ಮೇಳನದಲ್ಲಿ ಯಾರು ನಮ್ಮನ್ನು ಮಾತನಾಡಲು ಕರೆದರು ಎಂಬುದಲ್ಲ. ಮುಖ್ಯವಾದ ಸಂಗತಿ ಎಂದರೆ ನಮ್ಮ ಕರ್ತನಿಗೆ ಮಹಿಮೆ ಉಂಟಾಗುವ ರೀತಿಯಲ್ಲಿ ನಾವು ಸೇವೆ ಸಲ್ಲಿಸಿದೆವೇ ಇಲ್ಲವೇ ಎಂಬುದು.

ನಮ್ಮನ್ನು ಆಹ್ವಾನಿಸಿದವರು ಮತ್ತೆ ನಮ್ಮನ್ನು ಕರೆಸಿಕೊಳ್ಳಲು ಸಂತೋಷ ಪಡುವಂತೆ ಕ್ರಮವಿಲ್ಲದೆ ವರ್ತಿಸಿದ್ದೇವೋ? ಎಂಬುದು ಸಹ ಮುಖ್ಯ. ಒಂದು ವೇಳೆ ನಾವು ಯಾವುದಾದರೂ ಸಭೆಗೆ ಹೋಗಿ ಕ್ರಮವಿಲ್ಲದೆ ವರ್ತಿಸಿದರೆ ಖಂಡಿತವಾಗಿಯೂ ನಾವು ನಮ್ಮ ಸೇವೆಗೆ ಮಾತ್ರವಲ್ಲ ದೇವರ ರಾಜ್ಯಕ್ಕೂ ಅಗೌರವ ತರುವವರಾಗಿದ್ದೇವೆ.

ಒಂದು ವೇಳೆ ಅಪೊಸ್ತಲನಾದ ಪೌಲನು ಈ ದಿನಗಳಲ್ಲಿ ನಮ್ಮೊಬ್ಬೊಬ್ಬರ ಸೇವೆಯನ್ನು ಗಮನಿಸಿದರೆ ಆ ಕಾಲದಲ್ಲಿ ತೀತನ ಮತ್ತು ಅವನ ಸಂಗಡಿಗರ ಸೇವೆಯನ್ನು ಕುರಿತು ''ಯೇಸು ಕ್ರಿಸ್ತನ ಪ್ರಭಾವ'' ಎಂದು ಬರೆದ ಪ್ರಕಾರ ನಮ್ಮನ್ನು ಕುರಿತು ಆತನು ಬರೆಯಲು ಸಾಧ್ಯವೇ? ಸತ್ಯವೇದವು ಬಳಸಿರುವ ವಿಶೇಷಣ; ''ನಿಜವಾಗಿಯೂ


ಇದು ಕ್ರಿಸ್ತನಿಗೆ ಸಲ್ಲತಕ್ಕದ್ದು.''

**ನಿಯಮದಿಂದ ಅಭ್ಯಾಸದ ಕಡೆಗೆ**: ನೀವು ಸೇವೆ ಮಾಡುವ ಸಭೆಗಳಲ್ಲಿ ಇಲ್ಲವೇ ಇನ್ನಿತರ ಸಭೆಗಳ ಮಧ್ಯದಲ್ಲಿ ಮೆಚ್ಚುಗೆಗೆ ಪಾತ್ರವಾದ ರೀತಿಯಲ್ಲಿಯೇ ಸೇವೆ ಸಲ್ಲಿಸಿ, ಆ ಮೂಲಕ ನೀವು ನಿಜವಾಗಿಯೂ ಕ್ರಿಸ್ತನಿಗೆ ಸಲ್ಲ ತಕ್ಕವರಾಗಿರುವಿರಿ.

**ಸೇವೆಯ ನೈತಿಕತೆ**

- ಗುಣಮಟ್ಟ ಸ್ಥಾಪಿಸಿರಿ
- ತಿದ್ದುಪಡಿ, ಸುಧಾರಣೆ, ನಿಂದಿಸುವುದಲ್ಲ
- ಸಂರಕ್ಷಣೆ ಮಾಡಿ ಹತೋಟಿಯಲ್ಲ
- ದೇವರ ಜನರಿಗೆ ಸಲಹೆ ನೀಡಿರಿ
- ತಪ್ಪು ಪ್ರಾಬಲ್ಯ ಮತ್ತು ಉತ್ಪ್ರೇಕ್ಷೆ ಮಾಡಬಾರದು
- ಪ್ರವಾದನೆ 'ತಪ್ಪಾದ-ಪ್ರವಾದಿ' ಅಲ್ಲ
- ನಿಮ್ಮ ಸಹೋದರನ ಕುರಿತು ನೀನು ಹೇಳುವುದನ್ನು ಗಮನಿಸು
- ನೀವು ಬೋಧಿಸುವುದನ್ನು ಗಮನಿಸಿರಿ

# 3



# ವಿಶ್ವಾಸಿಗೆ ಇರಬೇಕಾದ ಕ್ರಮಬದ್ಧ ನಡತೆ

ವಿಶ್ವಾಸಿಗಳಾದ ನಾವು ದೈವಿಕ ಕ್ರಮವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವವರು ಮತ್ತುಅದರಲ್ಲಿಯೇ ನಡೆಯಬೇಕಾದವರೂ ಆಗಿದ್ದೇವೆ. ಸ್ಥಳೀಯ ಸಭೆಯಲ್ಲಿ ಮತ್ತು ನಮ್ಮ ವಲಯದ ಪಟ್ಟಣ ವ್ಯಾಪ್ತಿಯ ಸಭೆಗಳಲ್ಲಿ ನಮ್ಮನ್ನು ನಾವು ಹೇಗೆ ಗುರುತಿಸಬೇಕೆಂಬುದನ್ನು ಕಲಿತುಕೊಳ್ಳಬೇಕಾಗಿದೆ.

ಯಾವಾಗ ವಿಶ್ವಾಸಿಗಳು ಕ್ರಮಬದ್ಧವಾದ ನಡವಳಿಕೆಯಿಂದ ವರ್ತಿಸುತ್ತಾರೋ ಆಗ ಸಭೆಗಳಲ್ಲಿ ಭಿನ್ನ ಭೇದಗಳು ಮತ್ತು ಜಗಳ, ಮತ್ಸರಗಳು ಕಡಿಮೆಯಾಗಿ ಒಬ್ಬರ ಸಂಗಡಲೊಬ್ಬರು ಐಕ್ಯಮತ್ಯದಿಂದ ಇರಲು ಸಾಧ್ಯವಾಗುತ್ತದೆ. ಇದು ಪಟ್ಟಣದ ವ್ಯಾಪ್ತಿಯ ಸಭೆಗಳನ್ನು ಬಲಪಡಿಸುವುದಲ್ಲದೆ ಆ ಪ್ರದೇಶದಲ್ಲಿ ಬಲವಾದ ಪರಿಣಾಮವನ್ನು ಬೀರಲು ಸಹಾಯವಾಗುತ್ತದೆ.

## ಕುರುಬರು ಮತ್ತು ಪೋಷಕರು

ಅಪೊಸ್ತಲರ ಕೃತ್ಯಗಳು 20:28

**ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ.**

ಇಬ್ರಿಯರಿಗೆ 13:17

**ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ. ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ; ಅವರು ವ್ಯಸನದಿಂದಿರುವುದು ನಿಮಗೆ ಪ್ರಯೋಜನಕರವಾದುದ್ದಲ್ಲ.**

ಕುರುಬನಿಗೂ ಮತ್ತು ಕುರಿಗಳಿಗೂ ನಡುವೆ ಇರುವ ಆತ್ಮಿಕ ಸಂಪರ್ಕದ ಕುರಿತಾಗಿ ಈಗಾಗಲೇ ಮೊದಲನೇ ಅಧ್ಯಾಯದಲ್ಲಿ ಹೇಳಿರುವಂತೆ ಪವಿತ್ರಾತ್ಮನು ತಾನೇ ಕುರುಬನನ್ನು ಕುರಿಗಳ ಮಧ್ಯದಲ್ಲಿ ಹಿಂಡನ್ನು ಕಾಯುವುದಕ್ಕಾಗಿ ನೇಮಿಸಿದ್ದಾನೆ. ಸಭೆಯ ಪಾಲಕನು ''ಸಭೆಯ ಹಿಂಡಿಗೆ ಮಹಾಪಾಲಕನಾದ ಕ್ರಿಸ್ತನ'' ಪ್ರತಿನಿಧಿಯಾಗಿದ್ದಾನೆ. ಆದ್ದರಿಂದ ವಿಶ್ವಾಸಿಗಳು ತಮ್ಮ ಹಿರೀ ಕುರುಬನಿಗೆ ಲೆಕ್ಕ ಕೊಡಬೇಕಾದವರಾಗಿದ್ದಾರೆ.

ಯೋಹಾನ 10:1-3

**ನಿಮಗೆ ನಿಜನಿಜವಾಗಿ ಹೇಳುತ್ತೇನೆ ಕುರೀಹಟ್ಟಿಯೊಳಗೆ ಬಾಗಿಲಿಂದ ಬಾರದೆ ಮತ್ತೆಲ್ಲಿಂದಾದರೂ ಹತ್ತಿ ಬರುವವನು ಕಳ್ಳನೂ ಸುಲುಕೊಳ್ಳುವವನೂ ಆಗಿದ್ದಾನೆ. ಬಾಗಿಲಿಂದ ಒಳಗೆ ಬರುವವನು ಆ ಕುರಿಗಳ ಕುರುಬನು, ಬಾಗಿಲು ಕಾಯುವವನು ಅವನಿಗೆ ಬಾಗಿಲನ್ನು ತೆರೆಯುತ್ತಾನೆ, ಕುರಿಗಳು ಅವನ ಸ್ವರಕ್ಕೆ ಕಿವಿಗೊಡುತ್ತವೆ. ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು ಹೊರಗೆ ಬಿಡುತ್ತಾನೆ. ಸ್ವಂತ**

**ಕುರಿಗಳನ್ನೆಲ್ಲಾ ಹೊರಗೆ ಬಿಟ್ಟ ಮೇಲೆ ತಾನು ಅವುಗಳ ಮುಂದೆ ಹೋಗುತ್ತಾನೆ; ಕುರಿಗಳು ಅವನ ಸ್ವರವನ್ನ ತಿಳುಕೊಂಡು ಅವನ ಹಿಂದೆ ಹೋಗುತ್ತವೆ. ಅವು ಅನ್ಯರ ಸ್ವರವನ್ನು ತಿಳಿಯುವುದಿಲ್ಲ; ಅನ್ಯನ ಹಿಂದೆ ಹೋಗದೆ ಅವನ ಬಳಿಯಿಂದ ಓಡಿಹೋಗುತ್ತವೆ.**

ಯೇಸು ಮೇಲೆ ತಿಳಿಸಿದ ವಚನಗಳನ್ನು ಉಪಯೋಗಿಸಿ ತನ್ನ ಜನರೊಂದಿಗೆ ತನಗೆ ಇರುವ ಸಂಬಂಧವನ್ನು ಚಿತ್ರಿಸಿದ್ದಾನೆ. ಕುರುಬನಿಗೂ ಮತ್ತು ಕುರಿಗಳಿಗೂ ನಡುವೆ ಇರುವ ಸಂಬಂಧದಲ್ಲಿ ನಾವು ಕಲಿಯುವ ಒಂದು ಸರಳವಾದ ಪಾಠವೆಂದರೆ ಕುರುಬನು ಮಾರ್ಗದರ್ಶನ ಮಾಡುತ್ತಾ ಕುರಿ ಮಂದೆಯ ಮುಂದುಗಡೆ ಹೋಗುತ್ತಾನೆ ಮತ್ತು ಕುರಿಗಳು ಕುರುಬನನ್ನು ಹಿಂಬಾಲಿಸುತ್ತವೆ.

ವಿಶ್ವಾಸಿಗಳಾದ ನಾವು ನಮ್ಮ ಸ್ಥಳೀಯ ಕುರುಬನಿಗೆ ಸಭೆಯನ್ನು ಆತ್ಮಿಕ ಪ್ರಯಾಣದಲ್ಲಿ ಮುನ್ನಡೆಸುವ ಮತ್ತು ದೇವರು ನೇಮಕ ಮಾಡಿರುವ ಗುರಿಯನ್ನು ತಲುಪುವಂತೆ ಸಭೆಯನ್ನು ಕೊಂಡೊಯ್ಯುವ ಜವಾಬ್ದಾರಿಯಿರುತ್ತದೆ. ನೀವು ಸ್ಥಳೀಯ ಸಭೆಯ ಭಾಗವಾಗಿರುವಂತೆ ಆತ್ಮಿಕ ಪ್ರಯಾಣದಲ್ಲಿಯೂ ಭಾಗಿಗಳಾಗಿದ್ದೀರಿ. ಸಭೆಯವರಾಗಿ ಸಭೆಯಲ್ಲಿನ ದರ್ಶನಕ್ಕೆ ಮತ್ತು ಕರೆಗೆ ಸ್ಪಂದಿಸುವ ಹೊಣೆಗಾರಿಕೆಗೆ ನೀವು ಬದ್ಧರಾಗಿರುವುದು ಅವಶ್ಯಕ. ದರ್ಶನ ಮತ್ತು ಕರೆ ಇದರ ಸಾರ್ಥಕತೆಗೆ ಸಹಾಯವಾಗುವಂತೆ ನಿಮ್ಮನ್ನೇ ನೀವು ಅರ್ಪಿಸಿಕೊಳ್ಳುವುದೂ ಅವಶ್ಯಕ.

ನಾವು ಯಾವಾಗ ಸ್ಥಳೀಯ ಸಭೆಗಳಲ್ಲಿ ಭಾಗಿಗಳಾಗುತ್ತೇವೋ ಆಗ ಅತಿ ಮುಖ್ಯವಾದ ಪಾತ್ರ ಮತ್ತು ಕಾರ್ಯಭಾರವನ್ನು ವಹಿಸಿ ಕೊಂಡವರಾಗಿ 'ವಿಶ್ವಾಸಿಗಳ ದೇಹ' ಎನಿಸಿಕೊಳ್ಳುವಂತಹ ಸಾರ್ವತ್ರಿಕ ಸಭೆಗೂ ನಾವು ಅದರ ಭಾಗವಾಗಿ ಪರಿಣಮಿಸುತ್ತೇವೆ. ಸಭೆಯ ಸಂಖ್ಯೆ ಹೆಚ್ಚಿಸುವುದರಲ್ಲಿ ಪ್ರತಿಯೊಬ್ಬ ವಿಶ್ವಾಸಿಗೂ ಜವಾಬ್ದಾರಿಯಿದೆ. ಸ್ಥಳೀಯ ಸಭೆಯ ಜೀವಿತಕ್ಕೆ ನೀವು ಕೊಡುವವರು ಮತ್ತು ಸಭೆಯ ಜೀವಿತದಿಂದ ಪಡೆಯುವವರೂ ಆಗಿದ್ದೀರಿ. ವಿಶ್ವಾಸಿಯಾದ ನೀವು ಸಭೆಯೆಂಬ ದೇಹಕ್ಕೆ ಅಂಗವೂ ಹೌದು ಮತ್ತು ಸಭೆಯೊಂದಿಗೆ ಭಾಗವಹಿಸುವವರೂ ಕೂಡ. ವಿಶ್ವಾಸಿಯಾದ ನೀವು ಸಭೆಯೆಂಬ ದೇಹಕ್ಕೆ ಸದಸ್ಯರೂ ಮತ್ತು ಆ ಸಭೆಯ ಸಭಾಜೀವನದಲ್ಲಿ ಭಾಗವಹಿಸುವವರೂ ಆಗಿದ್ದೀರಿ. ಸಭೆಯಿಂದ ಬರೀ ಪಡೆದುಕೊಳ್ಳುವ ಗ್ರಾಹಕರಂತೆ ಇರಬೇಡಿ. ಅದಕ್ಕೆ ಬದಲಾಗಿ ಸೇವೆ ಸಲ್ಲಿಸಿ ಮತ್ತು ನಿಮ್ಮ ಸ್ಥಳೀಯ ಸಭೆಯನ್ನು ಬಲಪಡಿಸಿ.

**ನಿಯಮದಿಂದ ಅಭ್ಯಾಸ ಕಡೆಗೆ**: ಸ್ಥಳೀಯ ಸಭೆಯ ಭಾಗವಾಗಿರುವ ನೀವು ನಿಮ್ಮ ಪಾಲಕರಿಗೆ, ಇತರೆ ಸದಸ್ಯರಿಗೆ ಮತ್ತು ಆ ಸಭೆಯ ಸಂಪೂರ್ಣ ದರ್ಶನ ಮತ್ತು ಕರೆಗೆ ಬದ್ಧರಾಗಿರಿ. ಸಭೆಗೆ ಬರೇ ಬಂದು ಹೋಗುವವರಂತೆ ಇರಬೇಡಿ ನಿಮ್ಮ ಸ್ಥಳೀಯ ಸಭೆಗೆ ಪೂರ್ಣ ಪ್ರಮಾಣದಲ್ಲಿ ಬದ್ಧರಾಗಿರಿ.

## ಕುರುಬನ ದೊಣ್ಣೆಯೂ ಮತ್ತು ಕೋಲೂ

ಬಹುಪಾಲು ವಿಶ್ವಾಸಿಗಳಿಗೆ ತಮ್ಮ ಸ್ಥಳೀಯ ಸಭಾಪಾಲಕನು ತಮ್ಮನ್ನು ಹಸಿರುಗಾವಲುಗಳಲ್ಲಿ ತಂಗಿಸಿ, ವಿಶ್ರಾಂತಿಕರವಾದ ನೀರಿನ ಬಳಿಗೆ ಕರೆದೊಯ್ಯಬೇಕೆಂಬ ಅಪೇಕ್ಷೆ. ಆದರೆ ಹೆಚ್ಚಿನ ಜನರು ಪಾಲಕನ ಬಳಿಯಲ್ಲಿ ಕುರುಬನ ದೊಣ್ಣೆಯೂ ಮತ್ತುಕೋಲೂ ಇರುತ್ತದೆಂಬುದನ್ನು ಅರ್ಥ ಮಾಡಿಕೊಂಡಿಲ್ಲ. ಈ ದೊಣ್ಣೆಯೂ ಮತ್ತು ಕೋಲೂ ಕುರಿಗಳಿಗೆ ಮಾರ್ಗದರ್ಶನ ಮಾಡುವುದರಲ್ಲಿ ಮತ್ತು ಸಂರಕ್ಷಣೆ ಮಾಡುವುದರಲ್ಲಿಯೂ ನೆರವಾಗುತ್ತವೆ.

ಕುರಿಗಳು ಮಂದೆಯನ್ನು ಬಿಟ್ಟು ಚದುರಿ ಹೋಗದಂತೆ ಮತ್ತು ಹಿಂಡಿನಲ್ಲಿಯೇ ಕ್ರಮಬದ್ಧವಾಗಿ ಉಳಿಯಲು ಸಹಾಯವಾಗುವಂತೆ ಕುರುಬನು ತನ್ನ ದೊಣ್ಣೆಯನ್ನೂ ಮತ್ತು ತನ್ನ ಕೋಲನ್ನೂ ಉಪಯೋಗಿಸುತ್ತಾನೆ. ಈ ರೀತಿ ಮಾಡುವಾಗ ಕುರಿ ಮಂದೆಯೊಳಗೆ ಕ್ರಮವಾಗಿ ಸೇರಿಕೊಳ್ಳುವಂತೆ ಅದಕ್ಕೆ ಮೃದುವಾಗಿ ಪೆಟ್ಟು ಕೊಡಲೂಬಹುದು. ಇದು ಸ್ವಲ್ಪ ಮಟ್ಟಿಗೆ ನೋವುಂಟು ಮಾಡಿದರು. ಒಂದು ಒಳ್ಳೇ ಉದ್ದೇಶದಿಂದ ಕೂಡಿದ್ದು ಕುರಿಯ ಪ್ರಯೋಜನಕ್ಕಾಗಿ ಇರುತ್ತದೆ.

ವಿಶ್ವಾಸಿಗಳಾದ ನಾವು ನಮ್ಮ ಪಾಲಕರಿಂದ ತಿದ್ದುಪಡಿ, ಗದರಿಸುವಿಕೆ ಮತ್ತು ಮಾರ್ಗದರ್ಶನವನ್ನು ಪಡೆಯುವ ವಿಷಯದಲ್ಲಿ ಕಲಿತುಕೊಳ್ಳಬೇಕಾಗಿದೆ.

ಒಂದು ವೇಳೆ ಪಾಲಕರಿಂದ ತಿದ್ದುಪಡಿಸಿಕೊಳ್ಳಬೇಕಾದ ಪ್ರಸಂಗ ಬಂದರೆ ಆ ಒಂದೇ ಉದ್ದೇಶದಿಂದ ನಿಮ್ಮ ಮನಸ್ಸನ್ನು ಕೆಡಿಸಿಕೊಳ್ಳುವುದಾಗಲೀ ಮತ್ತು ಬೇರೆ ಸ್ಥಳೀಯ ಸಭೆಗೆ ಸೇರಿಕೊಳ್ಳುವ ಪ್ರಯತ್ನವಾಗಲೀ ಮಾಡಬೇಡಿ. ಕ್ರಮಬದ್ಧವಾದ ಮಾರ್ಗಕ್ಕೆ ಹಿಂತಿರುಗಿ ಬಂದು ಸೂಕ್ತವಾದ ಮಾರ್ಗದಲ್ಲಿ ಮುಂದೆ ಸಾಗಿರಿ.

ಘರ್ಜಿಸುವ ಸಿಂಹಗಳು, ಬೇಟೆಯಾಡುವ ರಣ ತೋಳಗಳು, ಹಿಂಸಿಸುವ ಕರಡಿಗಳು ಇವುಗಳಿಗೆ ಹಬ್ಬದ ಔತಣವಾಗುವ ಕುರಿಗಳ ಜೀವ ಸಂರಕ್ಷಣೆಯನ್ನು

ಕುರುಬನು ತನ್ನ ದೊಣ್ಣೆ ಮತ್ತು ಕೋಲಿನಿಂದ ನಿರ್ವಹಿಸುತ್ತಾನೆ.ಕೇವಲ ಕೆಲವೇ ಮಂದಿ ವಿಶ್ವಾಸಿಗಳು ಕುರಿಗಳ ಸಂರಕ್ಷಣೆಯಲ್ಲಿ ಪಾಲಕನು ನಿರ್ವಹಿಸಬೇಕಾದ ಅನೇಕ ಹೋರಾಟಗಳನ್ನು ಪ್ರಶಂಸಿಸುತ್ತಾರೆ. ಇಷ್ಟೇ ಅಲ್ಲದೆ ಪಾಲಕನು ತನ್ನ ಕುರಿಗಳು ಜಗಳ ಮತ್ತು ಭೇದಗಳಿಗೆ ಒಳಗಾಗದಂತೆ ಸಹ ಅವರನ್ನು ಕಾಪಾಡುವುದಕ್ಕೆ ಹೋರಾಡುತ್ತಾನೆ. ಹಾಗೆಯೇ ಕುರಿಗಳು ತಪ್ಪು ಮತ್ತು ವಂಚನೆಗಳ ದುರಾತ್ಮನಿಗೆ ಒಳಗಾಗದಂತೆ ಪಾಲಕನು ಕಾಪಾಡಲು ಶ್ರಮಿಸುತ್ತಾನೆ. ಹಾಗೆಯೇ ವಿಶ್ವಾಸಿಗಳನ್ನು ಕದ್ದುಕೊಳ್ಳುವ, ಕೊಲ್ಲುವ ಮತ್ತು ಅವರಿಗಿರುವ ದೇವರಾಶೀರ್ವಾದಗಳನ್ನು ನಾಶಮಾಡುವ ದೆವ್ವಗಳಿಂದ ಸಂರಕ್ಷಿಸಲು ಪಾಲಕನು ಹೋರಾಟ ನಡೆಸುತ್ತಾನೆ. ಸಭೆಗಾಗಿ ಕುರಿಗಳ ಸಂಪೂರ್ಣ ಆತ್ಮಿಕ ಮೇಲ್ವಿಚಾರಣೆಯನ್ನು ಪಾಲಕನೇ ನಿರ್ವಹಿಸುತ್ತಾನೆ.

ನಿಮಗೋಸ್ಕರ ನಿಮ್ಮ ಸಭಾಪಾಲಕರು ಏನೆಲ್ಲಾ ಮಾಡುತ್ತಿದ್ದಾರೆ ಎಂಬುದನ್ನು ಗಮನಿಸಿ ಅವರನ್ನು ಅಭಿನಂದಿಸಲು ಕಲಿತುಕೊಳ್ಳಿ. ಸಭಾಪಾಲಕರ ಹೋರಾಟದಲ್ಲಿ ಕಲೆಯಾದ ಅವರ ಕೈಗಳನ್ನಾಗಲೀ ಅಥವಾ ನಿಮ್ಮನ್ನು ದುಷ್ಟ ಹೋರಾಟದ ಪೈಶಾಚಿಕ ಶಕ್ತಿಗಳಿಂದ ಕಾಪಾಡಲು ಒಂಟಿಯಾಗಿ ಕಳೆದ ಸಮಯವನ್ನಾಗಲೀ ನೀವು ಬಹುಶಃ ಗಮನಿಸದೇ ಇರಬಹುದು. ಸಭಾಪಾಲಕರು ನಿಮಗೋಸ್ಕರ ಇಂಥ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಅವರನ್ನು ಅಭಿನಂದಿಸಿ ನಿಮ್ಮ ಪಾಲಕರಿಗೆ ನಿಷ್ಠೆಯಿಂದ ನಡೆದುಕೊಳ್ಳಿ.

**ನಿಯಮದಿಂದ ಅಭ್ಯಾಸದ ಕಡೆಗೆ:** ದೇವರು ನಿಮ್ಮ ಜೀವಿತದಲ್ಲಿ ನಿಮ್ಮ ಸಭಾಪಾಲಕರ ಮೂಲಕವಾಗಲೀ ಅಥವಾ ಆತ್ಮೀಯ ವಿಷಯಗಳಲ್ಲಿ ನಿಮ್ಮ ಮೇಲ್ವಿಚಾರಕರಾಗಿರುವವರ ಮೂಲಕವಾಗಲೀ ಬರಬಹುದಾದ ಯಾವುದೇ ತಿದ್ದುಪಡಿಗಳನ್ನು ಬಿಚ್ಚು ಮನಸ್ಸಿನಿಂದ ಸ್ವಾಗತಿಸಿ ಸ್ವೀಕರಿಸುವ ಮನೋ ಪ್ರವೃತ್ತಿ ಉಳ್ಳವರಾಗಿರಿ.

## ಕುರುಬನನ್ನು ನಡೆಸುವ ಕುರಿ

ಕುರುಬನೇ ಕುರಿಯನ್ನು ನಡೆಸಬೇಕೆನ್ನುವುದು ದೇವರ ದೈವಿಕ ಕ್ರಮ. ಆದರೆ ಪ್ರತಿಯೊಂದು ಸಾರಿ ಕುರಿ ತಾನೇ ಕುರುಬನನ್ನು ನಡೆಸಲು ಮುಂದಾಗುವುದು ದೈವಿಕ ಕ್ರಮಕ್ಕೆ ವ್ಯತಿರಿಕ್ತವಾಗಿದ್ದು ಅದು ಅಭಿವೃದ್ಧಿ ಮತ್ತು ಬೆಳವಣಿಗೆಗೆ ಅಡ್ಡಿಯಾಗುತ್ತದೆ. ಇದರಿಂದಾಗಿ ಗಲಿಬಿಲಿ ಮತ್ತು ಜಗಳಗಳು ಹೆಚ್ಚಾಗುತ್ತವೆ.

ಅನೇಕ ವಿಶ್ವಾಸಿಗಳು ಎಲ್ಲವನ್ನೂ ಅತಿಕ್ರಮಿಸಿಕೊಂಡು ಸಕಲವನ್ನು ಹತೋಟಿಯಲ್ಲಿಟ್ಟುಕೊಳ್ಳುವ ಸ್ವಭಾವದವರಾಗಿರುತ್ತಾರೆ. ವಿಶ್ವಾಸಿಗಳಿಗೆ ತಾವು ಕೊಡುವ ದೊಡ್ಡ ಪ್ರಮಾಣದ ದೇಣಿಗೆ ಇಲ್ಲವೇ ಕಾಣಿಕೆ ಸಭೆಯ ಹಣಕಾಸಿನ ಸುಭದ್ರತೆಗೆ ನೆರವಾಗುವುದರಿಂದ ಆ ಮೂಲಕ ಸಭಾಪಾಲಕರನ್ನು ಅನೇಕ ವಿಷಯಗಳಲ್ಲಿ ತಮ್ಮಂತೆ ನಡೆಯಲು ಉಪಯೋಗಿಸಬಹುದೆಂದು ಭಾವಿಸುತ್ತಾರೆ. ಇನ್ನೂ ಕೆಲವು ವಿಶ್ವಾಸಿಗಳು ತಮ್ಮ ಸಾಮಾಜಿಕ ಅಂತಸ್ತು, ತಮಗಿರುವ ಪ್ರಭಾವ, ಅನೇಕ ಬಗೆಯ ಸಂಪರ್ಕಗಳು ಇತ್ಯಾದಿಗಳನ್ನು ಬಳಸಿಕೊಂಡು ಆ ಮೂಲಕ ಸಭಾಪಾಲಕರು ಯಾವುದನ್ನು ಮಾಡಬೇಕು ಅಥವಾ ಮಾಡಬಾರದು ಎನ್ನುವುದನ್ನು ತಾವೇ ನಿರ್ಧರಿಸಿ ತಮ್ಮ ಪಾಲಕರಿಗೆ ನಿರ್ದೇಶನ ನೀಡುತ್ತಾರೆ ಮತ್ತು ಕೆಲವು ವಿಶ್ವಾಸಿಗಳು ಸಭಾಪಾಲಕರನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಲು ಅತಿಯಾಗಿ ಹೊಗಳುವ ತಂತ್ರವನ್ನು ಬಳಸುತ್ತಾರೆ.

ಈ ರೀತಿ ಕುರುಬನ ಮತ್ತು ಕುರಿಯ ಪಾತ್ರಗಳು ಸಭಾಜೀವನದಲ್ಲಿ ಅದಲು ಬದಲಾಗುವುದರಿಂದ ಅನೇಕ ಬಗೆಯ ತೀವ್ರ ಪರಿಣಾಮಗಳು ಅಹಿತಕರವಾದ ಸಂದರ್ಭಗಳು ಉಂಟಾಗುತ್ತವೆ ಎಂಬುದನ್ನು ವಿಶ್ವಾಸಿಗಳು ಖಂಡಿತವಾಗಿ ತಿಳಿದುಕೊಳ್ಳಬೇಕು.

ವಿಶ್ವಾಸಿಗಳಾದ ನಿಮಗಿರುವ ಯಾವುದೇ ರೀತಿಯಲ್ಲಿನ ಅನುಕೂಲಗಳಾದ ಹಣ, ವಯಸ್ಸು, ಪ್ರಭಾವ, ಅಧಿಕಾರ, ಅನುಭವ ಇತ್ಯಾದಿಗಳೆಲ್ಲವನ್ನೂ ದೇವರು ನೇಮಿಸಿರುವ ಕ್ರಮಬದ್ಧವಾದ ರೀತಿಯಲ್ಲೇ ಸಭಾಜೀವನದಲ್ಲಿ ಉಪಯೋಗಿಸಬೇಕು ನಿಜ, ನಿಮ್ಮ ವೈಯಕ್ತಿಕ ಉದ್ದೇಶಗಳು, ಆಲೋಚನೆಗಳು, ಸಲಹೆ ಇತ್ಯಾದಿಗಳನ್ನು ನಿಮ್ಮ ಪಾಲಕರಿಗೆ ನೀವು ಕೊಡಲು ಸ್ವತಂತ್ರರೇ ತಪ್ಪೇನಿಲ್ಲ; ಹಾಗೆ ಮಾಡುವುದು ಮುಖ್ಯವಾದದ್ದೇ. ಆದರೆ ವಿಶ್ವಾಸಿಗಳು ಪಾಲಕರನ್ನು ಹತೋಟಿಯಲ್ಲಿಟ್ಟುಕೊಳ್ಳುವವರು ಮತ್ತು ಅವರಿಗೆ ಎಲ್ಲೆ ಮೀರಿ ಮಾರ್ಗದರ್ಶನ ಮಾಡುವವರಾಗಿರಬಾರದು.

**ನಿಯಮದಿಂದ ಅಭ್ಯಾಸಕ್ಕೆ**: ದೈವಿಕ ಕ್ರಮವನ್ನು ಉಲ್ಲಂಘಿಸಿ ಸಭಾಪಾಲಕರನ್ನು ಮುನ್ನಡೆಸಲು ಪ್ರಯತ್ನಿಸಬೇಡಿ. ನಿಮ್ಮ ಉದ್ದೇಶಗಳು ಮತ್ತು ಆಲೋಚನೆಗಳನ್ನು ಹಂಚಿಕೊಳ್ಳಿ. ಆದರೆ ಎಂದಿಗೂ ನೀವು ಅಂದುಕೊಂಡದ್ದನ್ನೇ ಮಾಡುವಂತೆ ಸಭಾಪಾಲಕರನ್ನು ಒತ್ತಾಯಿಸಬೇಡಿ ಮತ್ತು ಅವರನ್ನು ನಿಮ್ಮ ಕೈಗೊಂಬೆಗಳನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸದಿರಿ.

## "ಸಭಾಪಾಲಕರೇ, ನಿಮ್ಮನ್ನು ನಾನು ಒಪ್ಪುವುದಿಲ್ಲ"

ವಿಶ್ವಾಸಿಗಳಾದ ನಮಗೆ ನಮ್ಮ ಆತ್ಮಿಕ ಅಭಿವೃದ್ಧಿಯ ವಿಷಯದಲ್ಲಿ ವಿವಿಧ ಮೂಲಗಳಿಂದ ಕಲಿಯುವ ಮತ್ತು ಬೆಳೆಯುವ ಅನೇಕ ಸಂದರ್ಭಗಳು ನಮಗಿವೆ. ಕ್ರೈಸ್ತ ಸಾಹಿತ್ಯ/ಕ್ರೈಸ್ತ ಶಿಕ್ಷಣ/ಬೋಧನೆಗಳನ್ನೊಳಗೊಂಡ ಧ್ವನಿ ಸುರುಳಿಗಳ ಕ್ರಿಸ್ತೀಯ ಕಾರ್ಯಕ್ರಮಗಳನ್ನು ಬಿತ್ತರಿಸುವ ದೂರದರ್ಶನದ ಕಾರ್ಯಕ್ರಮ ಇತ್ಯಾದಿ ಮಾಧ್ಯಮಗಳು ಆತ್ಮಿಕ ಜ್ಞಾನವನ್ನು ಹಂಚುವುದರಲ್ಲಿ ನಮಗೆ ಸಹಾಯಕವಾಗಿವೆ. ಈ ಎಲ್ಲಾ ಸಂಪರ್ಕ ಮಾಧ್ಯಮಗಳು ನಗರದಲ್ಲಿರುವ ವಿಶ್ವಾಸಿಗಳಿಗೆ ಸುಲಭದಲ್ಲಿ ಲಭ್ಯವಾಗುತ್ತವೆ.

ವಿಶ್ವಾಸಿಗಳು ಆತ್ಮಿಕ ಅಭಿವೃದ್ಧಿಯಲ್ಲಿ ಬೆಳೆದ ಹಾಗೆಲ್ಲಾ ಕೆಲವೊಂದು ಆತ್ಮಿಯ ವಿಷಯಗಳ ಬಗ್ಗೆ ಸಹಜವಾಗಿಯೇ ಪಾಲಕರ ಜೊತೆ ಅಭಿಪ್ರಾಯ ಭೇದ ಉಳ್ಳವರಾಗಿರುತ್ತಾರೆ. ಈ ರೀತಿಯ ಅಭಿಪ್ರಾಯ ಭೇದಗಳು ಕ್ರಿಸ್ತೀಯ ನಂಬಿಕೆಯ ತಿರುಳಿಲ್ಲದೇ ಹುಟ್ಟಿಕೊಂಡಿರುವುದರಿಂದ ವಿಶ್ವಾಸಿಯು ಸ್ಥಳೀಯ ಸಭೆಗಳ ಸಭಾಪಾಲಕರೊಂದಿಗೆ ಸಹಕರಿಸುವ ಮತ್ತು ಕಾರ್ಯ ನಿರ್ವಹಿಸುವ ಅವಕಾಶಗಳು ಇನ್ನೂ ಜೀವಂತವಾಗಿರಲು ಸಾಧ್ಯವಾಗಿರುತ್ತದೆ.

ಆತ್ಮಿಕ ವಿಷಯಗಳಲ್ಲಿ ಹುಟ್ಟಿಕೊಳ್ಳಬಹುದಾದ ಸಂದೇಹಗಳು ಹೋಗುವಂತೆ ಮಾಡುವ ಬಲವಾದ ಕಾರಣಗಳಾಗಿ ಕಂಡುಬರುವುದಿಲ್ಲ. ಪ್ರೌಢ ವಿಶ್ವಾಸಿಗಳಾದ ನಾವುಗಳು ಪರಸ್ಪರರ ಅಭಿಪ್ರಾಯ ಭೇದಗಳನ್ನು ಗೌರವಿಸುವುದು ಅವಶ್ಯಕ. ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡುವ ಮತ್ತು ಆ ಮೂಲಕ ಕ್ರಿಸ್ತನನ್ನು ಮಹಿಮೆ ಪಡಿಸುವ ಮಹತ್ವದ ಕಾರ್ಯಕ್ಕೆ ಬದಲಾಗಿ ಕ್ಷುಲಕವಾದ ಸಂಗತಿಗಳನ್ನೇ ಪ್ರಧಾನವಾಗಿಟ್ಟುಕೊಂಡು ಅದನ್ನೇ ಕೇಂದ್ರೀಕರಿಸುತ್ತಾ ಅದಕ್ಕಾಗಿ ಹೆಚ್ಚು ಸಮಯ ವ್ಯರ್ಥ ಮಾಡುವುದನ್ನು ನಿಲ್ಲಿಸಬೇಕು.

ತಮ್ಮ ಆತ್ಮಿಯ ಜ್ಞಾನದಿಂದ ಮತ್ತು ಅದಕ್ಕೆ ಸಂಬಂಧಿಸಿದ ವಿಷಯದ ಮೇಲಿನ ಅರ್ಥೈಸುವಿಕೆಯಿಂದ ಸಭೆಗೆ ಪ್ರಸಂಗಿಸುವ ಮತ್ತು ಬೋಧಿಸುವ ಪೂರ್ಣ ಪ್ರಮಾಣದ ಸಭಾಪಾಲಕರಿಗೆ ಅಧಿಕಾರ ಇರುತ್ತದೆ. ಒಂದು ವೇಳೆ ಯಾರಾದರೂ ಒಬ್ಬ ವಿಶ್ವಾಸಿ ನಿರ್ದಿಷ್ಟವಾದ ವಿಷಯವನ್ನು ಅರ್ಥಮಾಡಿಕೊಳ್ಳುವದರಲ್ಲಿ ಸ್ವಲ್ಪ ಏರುಪೇರಾದರೆ ಆತನು ತನ್ನ ಸುತ್ತಲಿನ ಜನರಿಗೆ ತನ್ನ ಸ್ವಂತ ಉದ್ದೇಶಗಳನ್ನೇ ಪ್ರಚಾರ ಮಾಡುತ್ತಾ

ಒಂದು ಪಾಲಕರನ್ನೇ ಹೀಯಾಳಿಸುವ ಸಂಭವ ಕೂಡಾ ಉಂಟಾಗುತ್ತದೆ. ಇದರಿಂದ ಆ ವಿಶ್ವಾಸಿ ಕ್ರಮರಹಿತನಾಗಿ ವರ್ತಿಸುವವನೂ, ವಿರೋಧ ಬಿತ್ತುವವನೂ ಮತ್ತು ದೈವಿಕ ಕ್ರಮಕ್ಕೆ ಒಳಪಡದೆ ವರ್ತಿಸುವವನೂ ಆಗುವ ಸಾಧ್ಯತೆ ಹೆಚ್ಚು.

**ನಿಯಮದಿಂದ ಅಭ್ಯಾಸದ ಕಡೆಗೆ**: ಅವರನ್ನು ಒಂದು ವೇಳೆ ನೀವೂ ಸಹ ಪ್ರೀತಿ ಮಾಡಿ ನಿಮ್ಮ ಪಾಲಕರೊಂದಿಗೆ ಕೆಲವು ವಿಷಯಗಳಲ್ಲಿ ಅಭಿಪ್ರಾಯ ಭೇದವುಳ್ಳವರಾಗಿದ್ದರೂ ಅವರನ್ನು ನಿಮ್ಮ ಮೇಲೆ ಆತ್ಮಿಕ ಅಧಿಕಾರವುಳ್ಳವರು ಎಂದೇ ಪರಿಗಣಿಸಿ ಅವರಿಗೆ ಅಧೀನರಾಗಿರಿ. ಭೇದಗಳನ್ನು ಬಿತ್ತಲು ಹೋಗಬೇಡಿ.

## ದೇವರು ನನಗೆ ಹೇಳಿದ್ದು

ಇತ್ತೀಚಿನ ದಿನಗಳಲ್ಲಿ ವಿಶ್ವಾಸಿಗಳು ತಾವು ಮಾತನಾಡುವ ಪ್ರತಿಯೊಂದೊಂದು ವಿಷಯಕ್ಕೂ ಪೀಠಿಕೆಯಾಗಿ ''ದೇವರು ನನಗೆ ತಿಳಿಸಿದ್ದು'' ಎಂಬುದಾಗಿ ಸೇರಿಸಿ ಹೇಳುವುದು ಅವರಲ್ಲಿ ಒಂದು ಬಗೆಯ ಫಾಷ್ಯನ್ ಆಗಿ ಪರಿಣಮಿಸಿದೆ. ಇದು ಹೇಗನ್ನಿಸುತ್ತದೆ ಅಂದರೆ ವಿಶ್ವಾಸಿಗಳು ಯಾವತ್ತೂ ತಮ್ಮದೇ ಆದ ಯಾವುದೇ ಆಲೋಚನೆಯನ್ನೂ ಸ್ವಂತ ಅಭಿಪ್ರಾಯವನ್ನು ಇಟ್ಟುಕೊಳ್ಳದೆ ಮತ್ತು ನಿರಂತರವಾಗಿ ಇವರು ದೇವರ ವಾಣಿಯನ್ನು ಕೇಳುವವರು ಎಂಬ ಅಭಿಪ್ರಾಯ ಮೂಡಿಸುತ್ತದೆ. ವಾಸ್ತವ ಸಂಗತಿ ಏನೆಂದರೆ ಇದು ಖಂಡಿತವಾಗಿಯೂ ನಿಜವಲ್ಲ.

ದೇವರು ನಮಗೆ ಸ್ವಂತ ಬುದ್ಧಿಯನ್ನು ಅನುಗ್ರಹಿಸಿದ್ದಾನೆ. ಅದನ್ನು ಉಪಯೋಗಿಸುವುದರಲ್ಲಿ ಅದರಲ್ಲಿಯೂ ವಿಶೇಷವಾಗಿ ನಮ್ಮ ಬುದ್ಧಿ ದೇವರ ವಾಕ್ಯದ ಮೂಲಕ ನವೀಕರಣ ಹೊಂದಿದ್ದಾಗ ಅದನ್ನು ಬಳಸುವುದರಲ್ಲಿ ಏನೇನೂ ತಪ್ಪಲ್ಲ. ಹಾಗೆಯೇ ಅದನ್ನು ನಾವು ನಮ್ಮ ಜೀವನದಲ್ಲಿ ಪವಿತ್ರಾತ್ಮನ ಸಾಕ್ಷಿಗೂ ಮತ್ತು ನಮ್ಮ ಆತ್ಮ ಸಾಕ್ಷಿಯ ಧ್ವನಿಗೂ ಹಾಗೂ ನಮ್ಮ ಮಾನವ ಸಹಜವಾದ ಬಯಕೆಗಳಿಗೂ ಉದ್ದೇಶಗಳಿಗೂ ನಡುವೆ ಇರುವ ವ್ಯತ್ಯಾಸಗಳನ್ನು ಕುರಿತು ಬೇರ್ಪಡಿಸುವುದನ್ನು ಕಲಿಯುವುದೂ ಅಗತ್ಯವಾಗಿದೆ. ಒಂದು ವೇಳೆ ನಾವು ಇದನ್ನು ಕಲಿಯದೆ ಹೋದಲ್ಲಿ ದೇವರಾತ್ಮನು ನಮ್ಮೊಂದಿಗೆ ಮಾತಾಡುತ್ತಿದ್ದಾನೆ ಎಂಬುದನ್ನಾಗಲೀ ನಮ್ಮ ಸ್ವಂತ ಬುದ್ಧಿಗೆ ತೋಚಿದಂತೆ ಅಥವಾ ಮಾಡುತ್ತಿದ್ದೇವೆಂದುದನ್ನಾಗಲೀ ನಮ್ಮ ಭಾವೋದ್ವೇಗದಿಂದ ನಾವು ಕಾರ್ಯ ನಿರತರಾಗಿದ್ದೇವೆಂಬುದಾಗಲೋ ಗುರುತಿಸಲು ಹೇಗೆ ಸಾಧ್ಯ? ಪದೇ ಪದೇ ವಿಶ್ವಾಸಿಗಳು ತಮ್ಮ ಹೇಳಿಕೆಗಳಲ್ಲಿ ''ದೇವರು ನನಗೆ

ಹೇಳಿದ್ದು......" ಎಂಬುದಾಗಿ ಬಳಸುವುದರ ಉದ್ದೇಶ ಏನೆಂದರೆ ಕೇಳುಗರಿಗೆ "ಪ್ರಶ್ನೆ ಮಾಡಬೇಡ" ನಾನು ಹೇಳುವುದನ್ನು ಸುಮ್ಮನೆ ಕೇಳು ಅಷ್ಟೆ ಎಂದು ಪರೋಕ್ಷವಾಗಿ ಸೂಚಿಸುವಂತದ್ದಾಗಿದೆ. ಇಂಥಹ ವಿಶ್ವಾಸಿಗಳಿಗೆ ಬೇರೆಯವರು ತಮಗೆ ಪ್ರಶ್ನೆ ಮಾಡಬಹುದು ಅಥವಾ ವಿವರಣೆಗಳನ್ನು ಕೇಳಬಹುದು ಎಂಬ ಭಯ ಇವರಲ್ಲಿ ಅಡಗಿರುತ್ತದೆ. ಆದ್ದರಿಂದ "ದೇವರು ನನಗೆ ಹೇಳಿದ್ದು" ಎಂದು ಇವರು ಹೇಳಿಕೆಯನ್ನು ನೀಡುವುದರೊಂದಿಗೆ ಕೇಳುಗರು ಯಾರೊಬ್ಬರು ತಮ್ಮನ್ನು ಪ್ರಶ್ನೆ ಮಾಡಲಾರರು ಎಂದೇ ಭಾವಿಸುತ್ತಾರೆ. ವಸ್ತುಸ್ಥಿತಿ ಹೇಗಾದರೂ ಇರಲಿ ಜನರು ಪ್ರಶ್ನೆ ಮಾಡುವುದಕ್ಕೂ ಮೌಲ್ಯಮಾಪನ ಮಾಡುವುದಕ್ಕೂ ಮತ್ತು ತೀರ್ಪು ಮಾಡುವುದಕ್ಕೂ ಅವರಿಗೆ ಸ್ವಾತಂತ್ರ್ಯವಿರಲೇಬೇಕು.

ಇನ್ನೂ ಕೆಲವರು ತಮ್ಮ ಸಭೆಯ ಪಾಲಕರನ್ನು ಒಂದು ಬಗೆಯ ಹತೋಟಿಗೆ ಒಳಪಡಿಸಲು ಇಲ್ಲವೇ ಅವರನ್ನು ನಿರ್ದೇಶಿಸಲು ದೇವರು ನನಗೆ ಹೇಳಿದ್ದು ಎಂಬ ವಾಕ್ಯಗಳನ್ನು ತಮ್ಮ ಮಾತುಗಳಲ್ಲಿ ಪ್ರಯೋಗಿಸುತ್ತಾರೆ. ಇವರು ತಮಗೆ ವಿಶೇಷ ದರ್ಶನಗಳಾದವು, ಕನಸುಗಳು ಬಿದ್ದವು ಅಥವಾ ದೇವರು ತಾನೇ ಅನೇಕ ವೈಯಕ್ತಿಕ ಪ್ರಕಟಣೆಗಳನ್ನು ಕೊಟ್ಟನು ಎಂದು ಹೇಳುತ್ತಾ ಸಭಾಪಾಲಕರು ಇವರ ಎಲ್ಲಾ ಅನಿಸಿಕೆಗಳನ್ನು 'ದೇವರದೇ' ಎಂದು ಭಾವಿಸಿಕೊಳ್ಳುವಂತೆ ಪ್ರಯತ್ನಿಸುತ್ತಾರೆ. ದೇವರು ತನ್ನ ಸಭೆಯ ಸದಸ್ಯರೊಂದಿಗೆ ಮಾತಾಡುವವನೂ ಮತ್ತು ತನ್ನ ಸಭೆಗೆ ವಾಕ್ಯವನ್ನು ಕೊಡುವಾತನೂ ಆಗಿದ್ದಾನೆ. ಹೀಗಿರುವಾಗ ಎಲ್ಲಾ ಸಂಗತಿಗಳನ್ನೂ ಸ್ಥಳೀಯ ಪಾಲಕರಿಗೆ ಒಪ್ಪಿಸಿದಲ್ಲಿ, ಅವರು ಅದನ್ನು ಕುರುಬನಿಗೆ ತಕ್ಕ ಹಾಗೆ ಪರಾಮರ್ಶಿಸುವುದು. ಈ ದಿಶೆಯಲ್ಲಿ ಒಂದು ವೇಳೆ ಸಭಾಪಾಲಕರು ಮತ್ತು ಸಭಾ ಹಿರಿಯರು ಇಂಥಹ ಮಾತುಗಳನ್ನು ಕೇವಲ ಕನಸುಗಳು ಇಲ್ಲವೇ ಅಶೋತ್ತರಗಳು ಎಂದು ಪರಿಗಣಿಸುವುದಾದರೆ ಅದನ್ನು ಕುರಿತು ಅವರೇ ಒಂದು ಯೋಗ್ಯವಾದ ತೀರ್ಮಾನ ತೆಗೆದುಕೊಳ್ಳಬಹುದಾಗಿರುತ್ತದೆ.

ವಿಶ್ವಾಸಿಗಳಾದ ನಾವು "ದೇವರು ನನಗೆ ಹೇಳಿದ್ದು" ಎಂಬ ವಾಕ್ಯವನ್ನು ನಮ್ಮ ಮಾತಿನಲ್ಲಿ ಪ್ರಯೋಗಿಸುವಾಗ ಎಚ್ಚರಿಕೆಯಿಂದಿರಬೇಕು. ಹಾಗೊಂದು ವೇಳೆ ಉಪಯೋಗಿಸಲೇಬೇಕಾದ ಸಂದರ್ಭ ಬಂದಲ್ಲಿ ಅದು ಸಂಶಯಾತೀತವಾಗಿರಬೇಕು ಮತ್ತು ಪವಿತ್ರಾತ್ಮನು ತಾನೇ ಮಾತನಾಡಿರಬೇಕು ಹಾಗಿಲ್ಲವಾದಲ್ಲಿ ಈ ರೀತಿ ಹೇಳಬಹುದು "ನನ್ನ ಮನಸ್ಸು ಹೇಳುವುದೇನೆಂದರೆ..." ಅಥವಾ "ನಾನು ದೃಢವಾಗಿ,

ಮನಸಾರೆ ಹೇಳುವುದೇನೆಂದರೆ'' ಅಥವಾ ''ನಾನು ಯೋಚಿಸುವುದೇನೆಂದರೆ'' ಅಥವಾ ''ನನ್ನಲ್ಲಿನ ಸಲಹೆ-ಯೋಜನೆ ಏನೆಂದರೆ''. ಇತ್ಯಾದಿ ''ನಾನು ಹೀಗೆ ಯೋಚಿಸಿದ್ದೆ'' ಅಥವಾ ''ನನಗೊಂದು ಉಪಾಯ ಹೊಳೆದಿದೆ'' ಎಂಬುದಾಗಿ ಹೇಳುವುದರಲ್ಲಿ ಏನೂ ತಪ್ಪಿಲ್ಲ. ಅಂತಿಮವಾಗಿ ದೃಢವಾಗುವುದೇನೆಂದರೆ ನವೀಕರಣಗೊಂಡಿರುವ ನಮ್ಮ ಬುದ್ಧಿ, ಜ್ಞಾನಗಳನ್ನು ಉಪಯೋಗಿಸಬೇಕೆಂಬುದೇ ದೇವರ ಇಚ್ಛೆಯಾಗಿದೆ.

**ನಿಯಮದಿಂದ ಅಭ್ಯಾಸದ ಕಡೆಗೆ:** ''ದೇವರು ನನಗೆ ಹೇಳಿದ್ದು'' ಈ ವಾಕ್ಯವನ್ನು ಸಂದರ್ಭೋಚಿತವಾಗಿ ಪರಿಗಣಿಸತಕ್ಕದ್ದು. ದಯವಿಟ್ಟು ನೀವು ಹೇಳುವ ಮತ್ತು ಮಾಡುವ ಪ್ರತಿಯೊಂದು ಸಣ್ಣ ವಿಷಯಕ್ಕೂ ನಾನು ದೇವರಿಂದ ಪ್ರಕಟಣೆ ಹೊಂದಿದ್ದೇನೆ ಎಂದು ಹೇಳಿಕೊಂಡು ನೀವೇ ಉನ್ನತೋನ್ನತ ಮಟ್ಟದ ಆತ್ಮಿಕ ವಿಶೇಷ ವ್ಯಕ್ತಿಗಳೆಂಬಂತೆ ವರ್ತಿಸಬೇಡಿ.

## ನಿಜವಾಗಿ ಸಲ್ಲಬೇಕಾದ ನಿಮ್ಮ ದಶಮಾಂಶವನ್ನು ಕೊಡುವುದು

1 ಕೊರಿಂಥದವರಿಗೆ 9:11

**ನಾವು ನಿಮಗೋಸ್ಕರ ಆತ್ಮಸಂಬಂಧವಾದ ಬೀಜವನ್ನು ಬಿತ್ತಿದ ಮೇಲೆ ನಿಮ್ಮಿಂದ ಶರೀರ ಸಂಬಂಧವಾದ ಪೈರನ್ನು ಕೊಯ್ಯುವುದು ದೊಡ್ಡದೋ?**

ಗಲಾತ್ಯದವರಿಗೆ 6:6

**ದೇವರ ವಾಕ್ಯದಲ್ಲಿ ಉಪದೇಶ ಹೊಂದುವವನು ಉಪದೇಶ ಮಾಡುವವನಿಗೆ ತನಗಿರುವ ಎಲ್ಲಾ ಒಳ್ಳೆಯವುಗಳಲ್ಲಿ ಪಾಲು ಕೊಡಲಿ.**

ಆತ್ಮಿಕ ವಿಷಯಗಳಲ್ಲಿ ಜನರನ್ನು ಬಲಪಡಿಸುವವರು ಆ ಜನರಿಂದಲೇ ತಮ್ಮ ದೈನಂದಿನ ಅವಶ್ಯಕತೆಗಳನ್ನು ವಸ್ತುಗಳ ಹಾಗೂ ದ್ರವ್ಯದ ರೂಪದಲ್ಲಿ ಹಿಂದಕ್ಕೆ ಪಡೆಯಬಹುದಾದ ದೇವರ ರಾಜ್ಯದ ನಿಯಮಕ್ಕೆ ಬದ್ಧರಾಗಿರುತ್ತಾರೆ. ದೇವರ ಆತ್ಮಿಕ ಮಂದಿರ ಎನಿಸಿಕೊಂಡಿರುವ ಸ್ಥಳೀಯ ಸಭೆಗೂ ಇದೇ ನಿಯಮಾವಳಿ ಅನ್ವಯಿಸುತ್ತದೆ. ದಶಮಾಂಶವು ಕರ್ತನ ಮಂದಿರಕ್ಕೆ ಸೇರಿದ್ದು (ಮಲಾಕಿಯ 3:10) ಮತ್ತು ಅದು ನೀವು ಅವಿಭಾಜ್ಯ ಅಂಗವಾಗಿರುವ ಸ್ಥಳೀಯ ಸಭೆಗಳಿಗೆ ಸೇರತಕ್ಕದ್ದು. ಕೆಲವು ವಿಶ್ವಾಸಿಗಳು ಸ್ಥಳೀಯ ಸಭೆಗಳಿಗೆ ಸೇರಿದವರಾಗಿದ್ದು ಅಲ್ಲಿಂದಲೇ ಆತ್ಮಿಕ ಪೋಷಣೆಯನ್ನು ಸ್ವೀಕರಿಸುತ್ತಾ ತಮ್ಮ ದಶಮಾಂಶ ಕಾಣಿಕೆಯನ್ನು ಬೇರೆ ಸ್ಥಳಗಳಿಗೆ ಇಲ್ಲವೇ ಸಭೆಗಳಿಗೆ ಇಲ್ಲವೇ ಯಾವುದೇ ರೀತಿಯ ಆತ್ಮಿಕ ಪೋಷಣೆಯನ್ನು ಅವರಿಂದ

ಹೊಂದದ ಸೇವಾ ನಿಯೋಗಗಳಿಗೆ ಕಳುಹಿಸುವುದನ್ನು ಕಾಣಬಹುದು. ಇದು ಸರಿಯಾದ ಕ್ರಮವಲ್ಲ. ನಿಮ್ಮ ದಶಮಾಂಶವನ್ನು ನೀವು ಎಲ್ಲಿ ಆತ್ಮಿಕ ಆಹಾರವನ್ನು ಪೋಷಣೆಯನ್ನು ಹೊಂದುತ್ತೀರೋ ಆ ಸ್ಥಳೀಯ ಸಭೆಗೇ ಸಹಾಯ ಮಾಡಲು ಸ್ವತಂತ್ರರು ನಿಜ. ಆದರೆ ಎಲ್ಲಿ ನೀವು ಆತ್ಮಿಯ ಅಭಿವೃದ್ಧಿ ಹೊಂದುತ್ತಾ ಇದ್ದೀರೋ ಮತ್ತು ನಿಮಗೆ ಆತ್ಮಿಕ ಪೋಷಣೆ ಉಂಟಾಗುತ್ತಿದೆಯೋ ಆ ಸ್ಥಳೀಯ ಸಭೆಗೆ ನೀವು ಭಾಗವಾಗಿದ್ದೀರಿ ಮತ್ತು ಆ ಸಭೆ ನಿಮಗೆ ಕರ್ತನ ಮಂದಿರವಾಗಿದೆ ಎಂಬುದನ್ನು ಮರೆಯದಿರಿ.

**ನಿಯಮದಿಂದ ಅಭ್ಯಾಸದ ಕಡೆಗೆ**: ನಿಮ್ಮ ದಶಮಾಂಶವನ್ನು ನಿಜವಾಗಿ ಯಾರಿಗೆ ಸಲ್ಲಿಸಬೇಕಾಗಿದೆಯೋ ಅವರಿಗೆ ಕೊಡಿರಿ.

## ಪ್ರವೇಶಿಸುವುದು ಮತ್ತು ಬಿಟ್ಟು ಬಿಡುವುದು ಹೇಗೆ ಎಂಬುದಾಗಿ ಕಲಿಯುವುದು.

ತಾವು ಸದಸ್ಯರಾಗಿರುವ ಒಂದು ಸಭೆಯನ್ನು ಬಿಟ್ಟು ಬೇರೆ ಸ್ಥಳೀಯ ಸಭೆಗೆ ಸೇರಿಕೊಳ್ಳುವ ವಿಷಯದಲ್ಲಿ ವಿಶ್ವಾಸಿಗಳಾದ ನಾವು ಗೌರವಯುತವಾಗಿ ಮತ್ತು ಕ್ರಮಬದ್ಧವಾಗಿ ನಡೆದುಕೊಳ್ಳುವುದು ಮತ್ತು ಆ ವಿಷಯದಲ್ಲಿ ಕಲೆಯುವುದು, ಕಲಿತುಕೊಳ್ಳುವುದು ಅವಶ್ಯಕವಾಗಿದೆ. ವಿಶ್ವಾಸಿಯಾದ ನೀವು ಯಾವುದೇ ಸ್ಥಳೀಯ ಸಭೆಯನ್ನು ಆರಿಸಿಕೊಳ್ಳುವುದಕ್ಕೆ ಅನೇಕ ಕಾರಣಗಳಿರುವುದಕ್ಕೆ ಸಾಧ್ಯ. ಒಂದು ವೇಳೆ ನೀವು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾವಣೆ ಹೊಂದಿರಬಹುದು ಇಲ್ಲವೇ ನಿಮಗೆ ಅಗತ್ಯವಾದ ಆತ್ಮಿಕ ಪೋಷಣೆ ನೀವಿರುವ ಸಭೆಯಲ್ಲಿ ನಿಮಗೆ ದೊರಕದೆ ಇರಬಹುದು. ಒಂದು ವೇಳೆ ನಿಮಗೆ ಬಂದಿರುವ ಕರೆ ಮತ್ತು ನಿಮಗಿರುವ ವರದಾನಗಳು ನೀವಿರುವ ಸಭೆಯಲ್ಲಿನ ದೇವರ ಕರೆ ಮತ್ತು ವರದಾನಗಳಿಗೆ ಹೊಂದಿಕೆಯಾಗದೆ ಇರಬಹುದು.

ಒಂದು ಸಭೆಯಿಂದ ಇನ್ನೊಂದು ಸಭೆಗೆ ನೀವು ಬದಲಾಯಿಸಲ್ಪಡುವಾಗ ನೀವು ಬಿಡಬೇಕೆಂದಿರುವ ಸಭೆಗೆ ಈ ವರ್ಗಾವಣೆ ಸಂಗತಿಯನ್ನು ತಿಳಿಸಬೇಕು. ''ಎದ್ದು ಹೋಗು ಮತ್ತು ಮಾಯವಾಗು'' ಎಂಬಂತೆ ವರ್ತಿಸುವುದು ಕ್ರಮಬದ್ಧವಾದುದಲ್ಲ. ಕಾರಣ ಆ ಸಭೆಯ ಬದುಕಿಗೆ ಸಂಬಂಧಪಟ್ಟವರಾಗಿರುತ್ತಾರೆ. ನೀವೂ ಸಹ ಆ ಸ್ಥಳೀಯ ಸಭೆಯಲ್ಲಿ ಕೊಡುವ ಮತ್ತು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದು ಆ ಸಭೆಯು ಹುದುವಾದ ಭಾಗವೇ ಆಗಿರುತ್ತದೆ. ಯಾವಾಗ ನೀವು ಸಭೆಯನ್ನು

ಕೃತಜ್ಞತೆಯಿಂದ ಮತ್ತು ಪ್ರಶಂಸೆಯಿಂದ ವಂದಿಸಿ ಬೇರೆ ಸಭೆಗೆ ಹೋದರೂ ಸಹ ನೀವು ಕ್ರಿಸ್ತನ ದೇಹವೆಂಬ ಸಭೆಯ ಅಂಗವಾಗಿಯೇ ಇರುತ್ತೀರಿ. ಆದ್ದರಿಂದ ನೀವು ಹೊರಟು ಬರುವ ಸಭೆಯ ಸದಸ್ಯರೊಂದಿಗೆ ಒಳ್ಳೆಯ ಸ್ನೇಹ ಸಂಬಂಧವನ್ನು ಇಟ್ಟುಕೊಂಡು ಒಳ್ಳೆ ಸಾಕ್ಷಿಯೊಂದಿಗೆ ಹೊರಟು ಬನ್ನಿ.

ನೀವು ಹೊಸ ಸ್ಥಳೀಯ ಸಭೆಯ ಸದಸ್ಯರಾಗಲು ತೀರ್ಮಾನಿಸುವಾಗ ಹೆಚ್ಚು ದೀನತೆಯಿಂದಲೂ ಮತ್ತು ಪೂರ್ವಕವಾದ ಪ್ರತಿಷ್ಠಾಪನೆಯಿಂದಲೂ ಸದಸ್ಯರಾಗಿರಿ. ನಿಮ್ಮ ಆತ್ಮಿಕ ಅನುಭವಗಳು ಎಷ್ಟೆಲ್ಲಾ ಇದ್ದರೂ ಈ ನೂತನ ಸಭೆಯ ಕುಟುಂಬದಲ್ಲಿ ನೀವು ಕಲಿಯುವುದು ಬಹಳವಾಗಿರುತ್ತದೆ. ನೂತನ ಸ್ಥಳೀಯ ಸಭೆಯ ದರ್ಶನಕ್ಕೆ, ನಿರ್ದೇಶನಕ್ಕೆ ಮತ್ತು ಕರೆಯುವಿಕೆಗೆ ಅನುಗುಣವಾಗಿ ನಿಮ್ಮನ್ನು ಕ್ರಮಪಡಿಸಿಕೊಂಡು ಹೊಂದಿಸಿಕೊಳ್ಳಿ. ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸ್ಥಳೀಯ ಸಭೆಗೆ ಸೇವೆ ಸಲ್ಲಿಸಿರಿ. ಅಧಿಕಾರಕ್ಕಾಗಿ ಮತ್ತು ಪ್ರಾಶಸ್ತ್ಯಕ್ಕಾಗಿ ಎದುರು ನೋಡಬೇಡಿ. ನಿಮ್ಮ ನೂತನ ಸಭಾಪಾಲಕರು ನಿಮ್ಮನ್ನು ಗಮನಿಸಿ ನಿಮ್ಮ ನಿಜವಾದ ಸಾಮರ್ಥ್ಯವನ್ನು ಗುರುತಿಸಿ, ನೀವು ಯಾವ ರೀತಿಯ ಸೇವಾ ವಿಭಾಗಕ್ಕೆ ಹೊಂದಿಕೆಯಾಗುತ್ತೀರಿ ಎಂಬುದನ್ನು ಗಮನಿಸಿ ನಿಮ್ಮನ್ನು ನೇಮಿಸುವ ಅಗತ್ಯತೆಯಲ್ಲಿರುತ್ತಾರೆ.

ಅನೇಕ ವೇಳೆ ವಿಶ್ವಾಸಿಗಳು ತಮ್ಮ ಸ್ಥಳೀಯ ಸಭೆಗಳನ್ನು ಬಿಡುವುದಕ್ಕೆ ಹೇಳಿಕೊಳ್ಳುವ ಕಾರಣಗಳು ಸಾಕಷ್ಟು ಸಮಂಜಸವಾಗಿರುವುದಿಲ್ಲ. ಉದಾಹರಣೆಗೆ ವಿನಾ ಕಾರಣ ಒಂದು ವೇಳೆ ಮತ್ತೊಬ್ಬ ವಿಶ್ವಾಸಿಯೊಂದಿಗಿನ ಭಿನ್ನಾಪ್ರಾಯ, ಪಾಲಕರ ಅಥವಾ ಸಭಾಹಿರಿಯರ ಜೊತೆಗಿನ ಭಿನ್ನಾಭಿಪ್ರಾಯ ಮತ್ತು ಭೇದಗಳು ಇತ್ಯಾದಿ ಇರಬಹುದು. ಇಂಥಹ ಸನ್ನಿವೇಶದಲ್ಲಿ ಕೂಡ, ಆ ಸಭೆಗಳನ್ನು ಬಿಡುವುದಕ್ಕೆ ಮೊದಲು ಸೌಹಾರ್ದಯುತವಾದ ಮಾತುಕತೆಗಳ ಮೂಲಕ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಬಹುದಾಗಿರುತ್ತದೆ. ಇಲ್ಲವಾದರೆ ಕ್ಷಮಾರಹಿತವಾದ ಪರಸ್ಪರ ಒಡನಾಟದ ಸಮಸ್ಯೆಗಳ ಹೊರೆಯನ್ನು ನಾವು ಎಲ್ಲಿಗೆ ಹೋಗುತ್ತೇವೋ ಅಲ್ಲಿಗೆ ಅದನ್ನು ಮೂಟೆಕಟ್ಟಿಕೊಂಡು ಹೋಗುವವರಾಗುತ್ತೇವೆ. ಇದೇ ರೀತಿ ಪದೇ ಪದೇ ನಾವು ಎಲ್ಲಿಗೆ ಹೋಗುತ್ತೇವೋ ಅಲ್ಲೆಲ್ಲಾ ಪುನರಾವರ್ತನೆಯಾಗುತ್ತದೆ.

**ನಿಯಮದಿಂದ ಅಭ್ಯಾಸದ ಕಡೆಗೆ**: ಒಂದು ವೇಳೆ ನೀವು ಒಂದು ಸಭೆಯಿಂದ ಬೇರೊಂದು ಸಭೆಗೆ ವರ್ಗಾವಣೆ ಆಗಬೇಕಾದರೆ ನಿರ್ಗಮಿಸುವ ಮತ್ತು ಪ್ರವೇಶಿಸುವ ವಿಷಯದಲ್ಲಿ ಕರ್ತನಿಗೆ ಮೆಚ್ಚುಗೆಯಾಗುವಂತೆ ನಡೆದುಕೊಳ್ಳಿರಿ.

## ಸುಲಭವಾಗಿ ಮೋಸ ಹೋಗಬೇಡಿ

ಅಪೊಸ್ತಲರ ಕೃತ್ಯಗಳು 20:30

**ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು.**

ಎಫೆಸದವರಿಗೆ 4:13-14

**ನಾವೆಲ್ಲರೂ ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವ ಜನರನ್ನು ಯೋಗ್ಯ ಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವುದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ, ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು.**

2 ಪೇತ್ರ 2:1-3

**ಆದರೆ ಇಸ್ರಾಯೇಲ್ ಜನರಲ್ಲಿ ಸುಳ್ಳು ಪ್ರವಾದಿಗಳೂ ಎದ್ದರಲ್ಲ. ಅದೇ ಪ್ರಕಾರ ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು ಅವರು ನಾಶಕರವಾದ ಮತಭೇದಗಳನ್ನು ಕಳ್ಳತನದಿಂದ ಹುಟ್ಟಿಸುವವರೂ ತಮ್ಮನ್ನು ಕೊಂಡುಕೊಂಡ ಒಡೆಯನನ್ನು ಕೂಡ ತಾವು ಅರಿಯೆವು ಎಂದು ಹೇಳುವವರೂ ಆಗಿದ್ದು ಫಕ್ಕನೆ ತಮ್ಮ ಮೇಲೆ ನಾಶವನ್ನು ಬರಮಾಡಿಕೊಳ್ಳುವವರು. ಅವರ ನಿರ್ಲಜ್ಜ ಕೃತ್ಯಗಳನ್ನು ಅನೇಕರು ಅನುಸರಿಸುವರು ಅವರ ನಿಮಿತ್ತ ಸತ್ಯಮಾರ್ಗಕ್ಕೆ ದೂಷಣೆ ಉಂಟಾಗುವುದು. ಅವರು ದ್ರವ್ಯಾಶೆಯುಳ್ಳವರಾಗಿ ಕಲ್ಪನೆಯ ಮಾತುಗಳನ್ನು ಹೇಳುತ್ತಾ ನಿಮ್ಮಿಂದ ಲಾಭವನ್ನು ಸಂಪಾದಿಸಬೇಕೆಂದಿರುವರು.**

ನಂಬಿಕೆ ಹಾಗೂ ವಿಶ್ವಾಸದಿಂದ ನಮ್ಮನ್ನು ದೂರ ತಳ್ಳುವ ಹೊಸ ಅಲೆಗಳು ಸಿದ್ಧಾಂತಗಳು ಅಥವಾ ನಾನಾ ಬಗೆಯ ಹೊಸ ಬೋಧನೆಗಳು ಮುಂತಾದವುಗಳ ಬಗ್ಗೆ ವಿಶ್ವಾಸಿಗಳಾದ ನಾವು ಎಚ್ಚರಿಕೆಯಿಂದಿರುವುದರ ಕುರಿತು ಕಲಿಯುವುದು ಅಗತ್ಯ. ಯಾವುದಾದರೂ ಹೊಸ ಬೋಧನೆ ಇಲ್ಲವೇ ತಪ್ಪುಗಳು ನಮ್ಮನ್ನು ಉಪದೇಶಿಸುವಾಗ ಅದರ ಮೌಲ್ಯವನ್ನು ಕುರಿತು ಸಭಾಪಾಲಕರೊಂದಿಗೆ ಇಲ್ಲವೇ ಆತ್ಮಿಕ ಹಿರಿಯರೊಂದಿಗೆ ಪರಾಮರ್ಶಿಸಬೇಕು. ಈ ರೀತಿ ಮಾಡುವಾಗ ಆ ಉಪದೇಶಕರಿಗಿರುವ ಸಂಖ್ಯಾ ಬಲವನ್ನಾಗಲೀ ಇಲ್ಲವೇ ಆ ರೀತಿ ಬೋಧಿಸುವವರಿಗಿರುವ ಬಲಾಬಲಗಳನ್ನಾಗಲೀ ಗಣನೆಗೆ ತಂದುಕೊಂಡು ಅದರ ಆಧಾರದ ಮೇಲೆ ತೀರ್ಪು ಮಾಡಬೇಡಿರಿ. ಯಾವಾಗಲೂ ಲಿಖಿತವಾಗಿ ಕೊಡಲ್ಪಟ್ಟಿರುವ ದೇವರ ವಾಕ್ಯದ ಬೆಳಕಿನಲ್ಲಿಯೇ ತೀರ್ಪು ಮಾಡಿರಿ.

- ಕರ್ತನಾದ ಯೇಸುಕ್ರಿಸ್ತನನ್ನು ಕುರಿತ ಸತ್ಯವೇದಾಧ್ಯಯನ ತಿಳುವಳಿಕೆ ಅಂದರೆ- ಆತನು ಯಾರು? ಆತನು ಸಾಧಿಸಿದ್ದಾದರೂ ಏನು? ಇಂತಹ ವಿಷಯಗಳನ್ನು ನಿರಾಕರಿಸುವ ಯಾವುದೇ ಭೋದನೆಯನ್ನು ನೀವು ಖಡಾಖಂಡಿತವಾಗಿ ತಳ್ಳಿಹಾಕಿ.
- ಯಾವುದೇ ಬೋಧನೆಯು ಕ್ರಿಸ್ತನು ನಿಮ್ಮ ಜೀವಿತದ ಒಡೆಯನು ಎಂಬುದನ್ನು ಬದಲಿಸಲು ಪ್ರಯತ್ನಿಸಿದರೆ ಅಂತಹ ಬೋಧನೆಯನ್ನು ಸ್ಪಷ್ಟವಾಗಿ ನಿರಾಕರಿಸಿ.
- ಯಾವುದೇ ಬೋಧನೆಯು ಕರ್ತನಾದ ಯೇಸುಕ್ರಿಸ್ತನ ಆಜ್ಞೆಗಳಿಗೆ ವ್ಯತಿರಿಕ್ತವಾಗಿದ್ದೇ ಮತ್ತು ಸತ್ಯವೇದದ ಸಾಮಾನ್ಯ ಸೂಚನೆಗಳಿಗೆ ಹೊಂದಿಕೆಯಾಗದೇ ಹೋದರೆ ಅಂಥ ಬೋಧನೆಗಳನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸಿ.

ಮತ್ತೊಂದೆಡೆಯಲ್ಲಿ ಸ್ಥಳೀಯ ಸಭೆಯ ಮೂಲಕ ನಿಮ್ಮಲ್ಲಿರುವ ವಿಶ್ವಾಸ ಮತ್ತು ನಂಬಿಕೆಯನ್ನು ಬುಡಮೇಲು ಮಾಡುವಂತಹ ಅನೇಕ ಸಂಶಯಗಳನ್ನು ಮತ್ತು ಅವಿಶ್ವಾಸವನ್ನು ಬಿತ್ತುವ ಪ್ರಯತ್ನವನ್ನು ಕೆಲವರು ಮಾಡುತ್ತಾರೆ. ಅಂತಹ ಸಂದರ್ಭಗಳಲ್ಲಿಯೂ ನೀವು ನಿಮ್ಮ ಪಾಲಕರೊಂದಿಗೆ ಮತ್ತು ಆತ್ಮಿಕ ಹಿರಿಯರೊಂದಿಗೆ ಚರ್ಚಿಸುವುದು ಒಳಿತು. ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಎಚ್ಚರಿಸುತ್ತಾನೆ. ''ಎಲೈ ತಿಮೊಥೆಯನೇ, ಜ್ಞಾನೋಪದೇಶವೆಂದು ಸುಳ್ಳಾಗಿ ಹೇಳಿಕೊಳ್ಳುವ ಬೋಧನೆಗೆ ಸಂಬಂಧಪಟ್ಟ ಪ್ರಾಪಂಚಿಕವಾದ ಆ ಹರಟೆಮಾತುಗಳಿಗೂ ವಿವಾದಗಳಿಗೂ ನೀನು ದೂರವಾಗಿದ್ದು ನಿನ್ನ ವಶಕ್ಕೆ ಕೊಟ್ಟಿರುವುದನ್ನೇ ಕಾಪಾಡು. ಕೆಲವರು ಆ ಸುಳ್ಳಾದ ಜ್ಞಾನವನ್ನು ಅವಲಂಬಿಸಿ ಕ್ರಿಸ್ತನಂಬಿಕೆಯಿಂದ ಭ್ರಷ್ಟರಾದರು ದೇವರ ಕೃಪೆ ನಿಮ್ಮೊಂದಿಗಿರಲಿ.'' (1 ತಿಮೊಥೆಯನಿಗೆ 6:20-21)

ಇನ್ನೂ ಕೆಲವರು ಆತ್ಮಿಕವಾಗಿ ಉನ್ನತ ಸ್ಥಿತಿಯಲ್ಲಿರುವಂತೆ ನಟಿಸುವರು ಅಥವಾ ಪಾಂಡಿತ್ಯಪೂರಿತ ಪ್ರಶ್ನೆಗಳನ್ನು ಹಾಕುವವರಾಗಿದ್ದು ಮತ್ತು ದೇವರ ವಾಕ್ಯ ಸರಳವಾಗಿ ಬೋಧಿಸುವುದನ್ನು ನಿರಾಕರಿಸುವವರೂ ಆಗಿದ್ದಾರೆ. ಇನ್ನೂ ಕೆಲವರು ಪೂರ್ಣ ವಿಶ್ವಾಸಿಗಳಂತೆ ನಟನೆ ಮಾಡುವವರು ಮತ್ತು ಕೆಲವರು ''ನಂಬಿಕೆಯನ್ನು ರಕ್ಷಿಸುವವರೋ'' ಎಂಬಂತೆ ಕಾಣಿಸಿಕೊಂಡು ನಿಜ ಜೀವನದಲ್ಲಿ ಸಂಶಯ ಮತ್ತು ವಿಶ್ವಾಸದಲ್ಲಿ ನಡೆಯುತ್ತಾ ಆ ಮೂಲಕವಾಗಿ ದೇವರ ವಾಕ್ಯದಲ್ಲಿಯೂ ಮತ್ತು ಆತನ ಸ್ವಾಭಾವಿಕ ಅನ್ಯೋನ್ಯತೆಯಲ್ಲಿಯೂ ನಿಜವಾದ ಸಂಪರ್ಕವಿಲ್ಲದವರಾಗಿರುತ್ತಾರೆ.

ದೇವರ ವಾಕ್ಯವನ್ನು ನೀವೇ ಅಧ್ಯಯನ ಮಾಡಿ, ಪರಿಶುದ್ಧ ಗ್ರಂಥವನ್ನು ಪರಿಶೋಧಿಸಿ ಲಿಖಿತ ವಾಕ್ಯಗಳೇ ನಿಮ್ಮ ನಂಬಿಕೆಗೆ ಆಧಾರವಾಗಿರಲಿ.

ನಮ್ಮ ಜೀವನಕ್ಕೆ ಸಂಬಂಧಪಟ್ಟಂತೆ ಪ್ರವಾದಿಸಲ್ಪಟ್ಟ ಮಾತುಗಳ, ಲಿಖಿತ ರೂಪದಲ್ಲಿರುವ ಪರಿಶುದ್ಧ ಗ್ರಂಥದ ಮಾತುಗಳಿಗೆ ಪರ್ಯಾಯವಲ್ಲ ಎಂಬುದನ್ನು ವಿಶ್ವಾಸಿಗಳಾದ ನಾವು ತಿಳಿದುಕೊಳ್ಳುವುದು ಅಗತ್ಯ ಪ್ರತಿಯೊಂದು ಪ್ರವಾದನಾ ವಾಕ್ಯವು ಲಿಖಿತ ಶಾಸ್ತ್ರ ಗ್ರಂಥಗಳ ಬೆಳಕಿನಲ್ಲಿ ಪರೀಕ್ಷಿಸಲ್ಪಡಬೇಕಾಗುತ್ತದೆ. ನಮ್ಮ ಜೀವನದಲ್ಲಿ ದೇವರ ಲಿಖಿತ ವಾಕ್ಯವೇ ಅಂತಿಮವಾದ ಅಧಿಕಾರ ಹೊಂದಿದೆ.

**ನಿಯಮದಿಂದ ಅಭ್ಯಾಸದ ಕಡೆಗೆ**: ದೇವರ ವಾಕ್ಯವನ್ನು ನೀವೇ ಅಧ್ಯಯನ ಮಾಡಿ ಮತ್ತು ನಿಮಗೆ ದೊರಕಿರುವ ಪ್ರತಿಯೊಂದು ಬೋಧನೆಯನ್ನು ಲಿಖಿತ ರೂಪದ ದೇವರ ವಾಕ್ಯದೊಂದಿಗೆ ಭಕ್ತಿಪೂರ್ವಕವಾಗಿ ಪರೀಕ್ಷಿಸಿ.

## ಬೇಧಗಳನ್ನು ಬಿತ್ತಬೇಡಿ

ಸಹೋದರರ ಮಧ್ಯದಲ್ಲಿ ಜಗಳಗಳನ್ನು ಬಿತ್ತುವವನನ್ನು ದೇವರು ದ್ವೇಷಿಸುತ್ತಾನೆ ಎಂಬುದಾಗಿ ಜ್ಞಾನೋಕ್ತಿಗಳು ಹೇಳುತ್ತದೆ.

ಜ್ಞಾನೋಕ್ತಿಗಳು 6:16-19

**ಯೆಹೋವನು ಹಗೆ ಮಾಡುವ ವಸ್ತುಗಳು ಆರು ಇವೆ. ಹೌದು, ಏಳು ಆತನಿಗೆ ಅಸಹ್ಯಗಳಾಗಿ ತೋರುತ್ತವೆ. ಯಾವುವೆಂದರೆ ಹೆಮ್ಮೆಯ ಕಣ್ಣು, ಸುಳ್ಳಿನ ನಾಲಿಗೆ, ನಿರ್ದೋಷರಕ್ತವನ್ನು ಸುರಿಸುವ ಕೈ, ದುರಾಲೋಚನೆಗಳನ್ನು ಕಲ್ಪಿಸುವ ಹೃದಯ, ಕೇಡುಮಾಡಲು ತ್ವರೆಪಡುವ ಕಾಲು, ಅಸತ್ಯವಾಡುವ ಸುಳ್ಳುಸಾಕ್ಷಿ, ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು, ಈ ಏಳೇ.**

ವಿಶ್ವಾಸಿಗಳಾದ ನಾವು ನಮ್ಮ ವರ್ತನೆಯಲ್ಲಿಯೂ, ನಮ್ಮ ಮಾತು ಕ್ರಿಯೆಗಳಲ್ಲಿಯೂ ನಾವು ಬಹುಪಾಲು ಎಚ್ಚರಿಕೆಯಿಂದಿರಬೇಕು ಮತ್ತು ದೇವ ಜನರಲ್ಲಿ ಭೇದ ಬಿತ್ತುವ ಯಾವುದೇ ಸಂದರ್ಭಕ್ಕೆ ನಾವು ಅವಕಾಶ ಕೊಡಬಾರದು.

ಒಂದು ವೇಳೆ ನಮ್ಮ ಮಾತು ಅಥವಾ ನಡವಳಿಕೆಗಳ ಫಲಿತಾಂಶ ಜಗಳವೇ ಆದಲ್ಲಿ ಆಗ ನಾವು ಶಾಂತಿ ಸ್ಥಾಪಕರು ಮತ್ತು ಸಮಾಧಾನ ತರುವವರು ಹಾಗೂ ಸ್ವಸ್ಥತೆಯನ್ನುಂಟು ಮಾಡುವವರಾಗಿ ವರ್ತಿಸಬೇಕು.

**ನಿಯಮದಿಂದ ಅಭ್ಯಾಸಕ್ಕೆ**: ಕ್ರಿಸ್ತನ ಶರೀರವೆಂಬ ಸಭೆಯಲ್ಲಿ ತೊಂದರೆಯನ್ನುಂಟು ಮಾಡುವವರಾಗಿರದೆ ಶಾಂತಿ ಸ್ಥಾಪಕರಾಗಿ ವರ್ತಿಸಲು ನಿರ್ಧರಿಸಿ.

## ಪಟ್ಟಣದ ವ್ಯಾಪ್ತಿಯ ಮತ್ತು ಇತರ ಸೇವೆಗಳ ಮೂಲಕ ಸ್ವೀಕರಿಸುವಿಕೆ

ಎಫೆಸದವರಿಗೆ 4:11-12.

**ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸುವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವುದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು.**

ಪಟ್ಟಣದ ವ್ಯಾಪ್ತಿಯಲ್ಲಿ ಮತ್ತು ಅದನ್ನು ಮೀರಿ ಇರುವ ಸ್ಥಳಗಳಲ್ಲಿ ದೇವರು ತಾನೇ ಸೇವಕರನ್ನೂ ಮತ್ತು ಸೇವೆಯನ್ನೂ ಎಬ್ಬಿಸಿದ್ದಾನೆ ಎಂಬುದನ್ನು ಮನವರಿಕೆ ಮಾಡಿಕೊಳ್ಳುವುದು ಅಗತ್ಯ. ಅವುಗಳಲ್ಲಿ ಕೆಲವು ವಿಶ್ವವ್ಯಾಪ್ತಿಯ ಮಟ್ಟಕ್ಕೆ ವಿಸ್ತರಣೆಗೊಂಡಿವೆ. ಹೃದಯ ಪೂರ್ವಕವಾಗಿ ನಡೆಯುತ್ತಿರುವ ದೇವರ ಸೇವೆಯ ಮೂಲಕ ವಿಶ್ವಾಸಿಗಳಾದ ನಾವು ಅನೇಕ ವಿಷಯಗಳನ್ನು ಸ್ವೀಕರಿಸುವುದು ಅಗತ್ಯವಾಗಿದೆ. ಅವರಲ್ಲಿರುವ ಒಳ್ಳೆಯ ಸಂಗತಿಗಳನ್ನು ನೀವು ಕಲಿತುಕೊಂಡು ನಿಮ್ಮ ಸ್ಥಳೀಯ ಸಭಾ ಜೀವನಕ್ಕೆ ಕೂಡಿಸಿರಿ ಆ ಮೂಲಕ ನೀವು ಪಡೆದುಕೊಂಡದ್ದನ್ನು ನಿಮ್ಮ ಸ್ಥಳೀಯ ಸಭೆಗಳೂ ಸ್ವೀಕರಿಸಿ ಬಲಗೊಳ್ಳಲಿ. ನೀವೂ ಸಹ ಅಂತಹ ಸೇವೆಗೆ ಕಾಣಿಕೆ ಕೊಡಬಹುದು ಮತ್ತು ಅದರಲ್ಲಿ ಭಾಗಿಗಳಾಗಲೂಬಹುದು.

ಹೇಗಾದರೂ ಇರಲಿ, ಒಂದು ವೇಳೆ ಅಂತಹ ಪಟ್ಟಣ ವ್ಯಾಪ್ತಿಯನ್ನು ಸೇವಕರುಗಳಾಗಲೀ ವಿಶ್ವವ್ಯಾಪ್ತಿಯ ಸೇವಕರುಗಳಾಗಲೀ ನಿಮ್ಮನ್ನು ಹತೋಟಿಯಲ್ಲಿಟ್ಟುಕೊಂಡಲ್ಲಿ ಮತ್ತು ನಿಮ್ಮನ್ನು ಕೈವಶ ಮಾಡಿಕೊಳ್ಳುವುದಾಗಲೀ ಅಥವಾ ಅಕ್ರಮವಾಗಿ ಹಣ ಕೊಡುವುದಾಗಲಿ ಮುಂತಾದ ಪ್ರಯತ್ನಗಳನ್ನು ನೀವು ಸ್ಥಳೀಯ ಸಭೆಯನ್ನು ಬಿಡಲು ಪ್ರಚೋದಿಸಿದರೆ ಅಂಥವರ ವಿಷಯದಲ್ಲಿ ನೀವು ಎಚ್ಚರಿಕೆಯಿಂದಿರುವುದು ಒಳ್ಳೆಯದೆ.

**ನಿಯಮದಿಂದ ಅಭ್ಯಾಸದ ಕಡೆಗೆ**: ಪಟ್ಟಣ ವ್ಯಾಪ್ತಿಯ ಮತ್ತು ವಿಶ್ವವ್ಯಾಪ್ತಿಯ ಸೇವೆಗಳಿಂದ ಒಳ್ಳೆಯ ಅಂಶಗಳನ್ನು ಸ್ವೀಕರಿಸಲು ಕಲಿತುಕೊಳ್ಳಲು ಮತ್ತು ನಿಮ್ಮ ಸ್ಥಳೀಯ ಸಭೆ ಬಲಗೊಳ್ಳಲು ಅವುಗಳನ್ನು ಉಪಯೋಗಿಸಿ.

## ಆತ್ಮಿಕ ಅಧಿಕಾರವನ್ನು ಗೌರವಿಸಿ

1 ಥೆಸಲೋನಿಕದವರಿಗೆ 5:12-13

**ಸಹೋದರರೇ ಯಾರು ನಿಮ್ಮಲ್ಲಿ ಪ್ರಯಾಸಪಟ್ಟು ಕರ್ತನ ಕಾರ್ಯಗಳಲ್ಲಿ ನಿಮ್ಮ ಮೇಲೆ ಮುಖ್ಯಸ್ಥರಾಗಿದ್ದು ನಿಮಗೆ ಬುದ್ಧಿ ಹೇಳುತ್ತಾರೋ ಅವರನ್ನು ಲಕ್ಷಿಸಿ ಅವರ ಕೆಲಸದ ನಿಮಿತ್ತ ಅವರನ್ನು ಪ್ರೀತಿಯಿಂದ ಬಹಳವಾಗಿ ಸನ್ಮಾನ ಮಾಡಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇವೆ. ನಿಮ್ಮ ನಿಮ್ಮೊಳಗೆ ಸಮಾಧಾನವಾಗಿರಿ.**

1 ತಿಮೊಥೆಯನಿಗೆ 5:17-18

**ಚೆನ್ನಾಗಿ ಅಧಿಕಾರ ನಡಿಸುವ ಸಭೆಯ ಹಿರಿಯರನ್ನು, ಅವರೊಳಗೆ ವಿಶೇಷವಾಗಿ ಪ್ರಸಂಗದಲ್ಲಿಯೂ ಉಪದೇಶದಲ್ಲಿಯೂ ಕಷ್ಟಪಡುವವರನ್ನು ಇಮ್ಮಡಿಯಾದ ಮಾನಕ್ಕೆ ಯೋಗ್ಯರೆಂದು ಎಣಿಸಬೇಕು. ಕಣತುಳಿಯುವ ಎತ್ತಿನ ಬಾಯಿ ಕಟ್ಟಬಾರದೆಂತಲೂ ಆಳು ತನ್ನ ಕೂಲಿಗೆ ಯೋಗ್ಯನಾಗಿದ್ದಾನೆಂತಲೂ ಶಾಸ್ತ್ರದಲ್ಲಿ ಹೇಳಿದೆಯಲ್ಲಾ.**

ಇಬ್ರಿಯರಿಗೆ 13:7

**ನಿಮಗೆ ದೇವರ ವಾಕ್ಯವನ್ನು ತಿಳಿಸಿದ ನಿಮ್ಮ ಸಭಾನಾಯಕರನ್ನು ಜ್ಞಾಪಕ ಮಾಡಿಕೊಳ್ಳಿರಿ; ಅವರು ಯಾವ ರೀತಿಯಿಂದ ನಡೆದುಕೊಂಡು ಪ್ರಾಣಬಿಟ್ಟರು ಎಂಬುದನ್ನು ಆಲೋಚಿಸಿರಿ; ಅವರ ನಂಬಿಕೆಯನ್ನು ಅನುಸರಿಸಿರಿ.**

ದೈವಿಕ ಕ್ರಮವನ್ನು ಅನುಸರಿಸಿ ನಡೆಯುವುದು ನಮ್ಮ ಮಧ್ಯದಲ್ಲಿರುವ ಆತ್ಮಿಕ ಅಧಿಕಾರವನ್ನು ಗೌರವಿಸಿ ಸನ್ಮಾನಿಸುವುದಾಗಿದೆ.

ಆತ್ಮಿಕ ಅಧಿಕಾರವನ್ನು ಉಲ್ಲಂಘಿಸುವುದು ಗಲಿಬಿಲಿ ಮತ್ತು ಜಗಳಗಳ ಬಾಗಿಲನ್ನು ತೆರೆದು ಆ ಮೂಲಕ ಶತ್ರುವಿಗೆ ಒಳಗೆ ಬರಲು ಆಹ್ವಾನ ನೀಡಿದಂತಾಗುತ್ತದೆ.

ಸ್ಥಳೀಯ ಸಭಾ ಜೀವನದಲ್ಲಿ ಪಾಲಕರು/ಕುರುಬರು ಮಾತ್ರವಲ್ಲದೆ ಸಭಾಪಾಲಕರಿಂದ ಆತ್ಮಿಕ ಅಧಿಕಾರ ಹೊಂದಿದ ಜವಾಬ್ದಾರಿ ಹಾಗೂ ನಾಯಕತ್ವವುಳ್ಳ ಅನೇಕ ಆತ್ಮಿಕ ಅಧಿಕಾರವುಳ್ಳ ಜನರಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಸ್ಥಳೀಯ ಸಭೆಯವರು ಇಂತಹ ಆತ್ಮಿಕ ಅಧಿಕಾರವುಳ್ಳ ಹಿರಿಯರು ಮತ್ತು ನಾಯಕರ ವಿರುದ್ಧ ದಂಗೆ ಏಳುವಂತೆ ವರ್ತಿಸುವುದು ಸರ್ವೇ ಸಾಧಾರಣವಾಗಿ ಕಾಣದಿರುವ ಸಂಗತಿಯೇನಲ್ಲ. ಆದರೆ ದೇವರ ಮನೆಯಲ್ಲಿ ಇದು ಸರಿಯಾದ ವರ್ತನೆಯಲ್ಲ ಸಭಾಪಾಲಕರೊಡನೆ ಒಡನಾಟ ನಡೆಸಿದರೆ ಹಿರಿಯರು ಮತ್ತು ನಾಯಕರೊಂದಿಗೂ ಸಹ ವರ್ತಿಸುವುದು, ಅಧೀನರಾಗುವುದು ಅವಶ್ಯಕ. ಯಾಕೆಂದರೆ ಅವರು ದೇವರ ಮನೆಯಲ್ಲಿ ದೇವರ

ಕಾರ್ಯಗಳನ್ನು ಹೊತ್ತುಕೊಂಡಿರುವ ಜವಾಬ್ದಾರಿಯುತ ಸೇವೆಗೆ ನೇಮಿಸಲ್ಪಟ್ಟವರಾಗಿರುತ್ತಾರೆ.

ಇನ್ನೊಂದೆಡೆಯಲ್ಲಿ ಪಾಲಕರಿಂದ ಆತ್ಮಿಕ ಅಧಿಕಾರ ಹೊಂದಿದ ನಾಯಕರು ತಮ್ಮನ್ನು ನೇಮಕ ಮಾಡಿದ ಜವಾಬ್ದಾರಿಯುತ ಸ್ಥಾನಗಳಿಗೆ ತಕ್ಕ ಹಾಗೆ ವರ್ತಿಸುವುದು ಕೂಡ ಬಹಳ ಮುಖ್ಯವಾದುದು. ಸಭಾಪಾಲಕರಂತೆ ಈ ಹಿರಿಯರೂ, ನಾಯಕರೂ ಸಹ ಅದೇ ಬಗೆಯ ಉತ್ಸಾಹದಿಂದ ಕೂಡಿ ಸಭಾಪಾಲಕರ ಹಾಗೆಯೇ ನಡೆದುಕೊಳ್ಳುವುದು ಕೂಡಾ ಅವಶ್ಯಕ. ತಮಗೆ ಸಿಕ್ಕಿದ ಅಧಿಕಾರದಿಂದ ಇತರರನ್ನು ಹತೋಟಿಯಲ್ಲಿಟ್ಟುಕೊಳ್ಳುವದೇ ಆಗಲೀ ಅಥವಾ ಸ್ಥಳೀಯ ಸಭೆಯ ಸದಸ್ಯರನ್ನು ಕೈವಶಮಾಡಿಕೊಳ್ಳುವುದನ್ನೇ ಆಗಲಿ ಎಂದಿಗೂ ಮಾಡದೆ, ಜನರನ್ನು ಯಾವುದೇ ಕಾರಣಕ್ಕೆ ನಿಂದಿಸುವವರಾಗಬಾರದು.

ಆತ್ಮಿಕ ಅಧಿಕಾರವನ್ನು ಗೌರವಿಸುವುದು ಹೊರಗಿನ ತೋರಿಕೆ ಅಥವಾ ಕೇವಲ ಪ್ರದರ್ಶನವಾಗಬಾರದು. ಅದನ್ನು ಮೀರಿ ನಿಲ್ಲುವಂತದ್ದಾಗಿರಬೇಕು.

ಜನರು ಈ ಆತ್ಮಿಕ ಅಧಿಕಾರಸ್ಥರನ್ನು ಗೌರವಿಸುವುದು ಸರ್ವೇಸಾಮಾನ್ಯವಾದ ದೃಶ್ಯ. ಅದಕ್ಕೆ ಸರಿಯಾದ ಪದಗಳನ್ನು ಬಳಸುವುದೂ ಇತ್ಯಾದಿ ಸಹ ಉಂಟು. ಒಂದು ವೇಳೆ ಏನಾದರೂ ತಪ್ಪು ಗ್ರಹಿಕೆಗಳು ಉಂಟಾಗಿ ಕೂಡಲೇ ಈ ಎಲ್ಲ ಮಾನಮರ್ಯಾದೆಗಳೂ ಮಾಯವಾಗಿ ನಿಜವಾಗಿ ಅವರ ಹೃದಯದಲ್ಲಿ ಇವರ ಬಗ್ಗೆ ಏನು ಅಸಗಿದೆಯೋ ಅದು ಕೂಡಲೇ ಹೊರ ಬೀಳುತ್ತದೆ. ಈ ಕ್ರಮ ಆತ್ಮೀಕ ಅಧಿಕಾರವನ್ನು ಗೌರವಿಸುವ ಶುದ್ಧವಾದ ಪ್ರಕ್ರಿಯೆಯಾಗಿರದೆ ಕೇವಲ ಹೊರಗಣ ತೋರಿಕೆಯ ಒಂದು ಪ್ರದರ್ಶನವಾಗಿರುತ್ತದೆ. ವಿಶ್ವಾಸಿಗಳಾದ ನಾವು ಈ ಹಂತವನ್ನು ಮೀರಿ ನಿಲ್ಲುವವರಾಗಿರಲೇಬೇಕು!

**ನಿಯಮದಿಂದ ಅಭ್ಯಾಸದ ಕಡೆಗೆ**: ದೇವರು ನಿಮ್ಮ ಜೀವನಕ್ಕೆ ಕ್ರಮಗೊಳಿಸಿರುವ ಆತ್ಮಿಕ ಅಧಿಕಾರವನ್ನು ನೀವು ಶುದ್ಧವಾದ ಗೌರವದಿಂದ ಸನ್ಮಾನಿಸಿರಿ.

**ವಿಶ್ವಾಸಿಗಳಾಗಿ ಕ್ರಮವಾದ ನಡವಳಿಕೆ**

- ಸುಮ್ಮನೇ ಸಭೆಗೆ ಹಾಜರಾಗಬೇಡಿರಿ. ಸ್ಥಳೀಯ ಸಭೆಗೆ ಬದ್ಧತೆಯುಳ್ಳ ಅಂಗವಾಗಿರಿ.
- ನಿಮ್ಮ ಸಭಾಪಾಲಕರು ಅಥವಾ ಆತ್ಮಿಕ ಮೇಲ್ವಿಚಾರಕರುಗಳ ಮೂಲಕ ದೇವರು ನಿಮ್ಮ ಜೀವಿತಗಳಿಗೆ ತರುವಂತಹ ತಿದ್ದುಪಡಿಗಾಗಿ ಗ್ರಹಣಾಕಾಂಕ್ಷಿಗಳು ಆಗಿರಿ.
- ದೈವಿಕ ಕ್ರಮವನ್ನು ಉಲ್ಲಂಘಿಸಬೇಡಿರಿ. ನಿಮ್ಮ ಸಭಾಪಾಲಕರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲೂ ಪ್ರಯತ್ನಿಸಬೇಡಿರಿ ಅಥವಾ ಮುನ್ನಡೆಸಬೇಡಿರಿ.
- ನಿಮ್ಮ ಆತ್ಮಿಕ ಅಧಿಕಾರದಂತೆ ನಿಮ್ಮ ಸಭಾಪಾಲಕರನ್ನು ಪ್ರೀತಿಸಿ ಮತ್ತು ಸಮರ್ಪಿಸಿರಿ.
- ನಿಮ್ಮ ದಶಮಭಾಗವನ್ನು ಅದು ನಿಜವಾಗಿ ಸೇರಬೇಕಾದ ಕಡೆ ಕೊಡಿರಿ.
- ಜಗಳಗಳನ್ನು ಬಿತ್ತಬೇಡಿರಿ.

# 4



ಎಲ್ಲಿ ಕ್ರಮಬದ್ಧವಿರುತ್ತದೋ ಅಲ್ಲಿ ಹೆಚ್ಚಳವಿರುತ್ತದೆ

## ದೈವಿಕ ಕ್ರಮವು ಹೆಚ್ಚಳವನ್ನು ತರುತ್ತದೆ

ಅಪೊಸ್ತಲರು ಕೃತ್ಯಗಳು 6:7

**ಮತ್ತು ದೇವರ ವಾಕ್ಯವು ಪ್ರಬಲವಾಯಿತು. ಶಿಷ್ಯರ ಸಂಖ್ಯೆಯು ಯೆರೂಸಲೇಮಿನಲ್ಲಿ ಬಹಳವಾಗಿ ಹೆಚ್ಚುತ್ತಾ ಬಂತು. ಯಾಜಕರಲ್ಲಿಯೂ ಬಹುಜನರು ಕ್ರಿಸ್ತ ನಂಬಿಕೆಗೆ ಒಳಗಾಗುತ್ತಾ ಇದ್ದರು.**

ಅಪೊಸ್ತಲರ ಕೃತ್ಯಗಳು 15:4

**ಅವರು ಯೆರೂಸಲೇಮಿಗೆ ಬಂದ ಮೇಲೆ ಸಭೆಯವರೂ ಅಪೊಸ್ತಲರೂ ಸಭೆಯ ಹಿರಿಯರೂ ಅವರನ್ನು ಸೇರಿಸಿಕೊಂಡಾಗ ದೇವರು ತಮ್ಮೊಂದಿಗಿದ್ದು ಮಾಡಿದ ಕಾರ್ಯಗಳನ್ನೆಲ್ಲಾ ಅವರಿಗೆ ತಿಳಿಸಿದರು.**

ಅಪೊಸ್ತಲರ ಕೃತ್ಯಗಳು 16:5

**ಸಭೆಗಳು ಕ್ರಿಸ್ತ ನಂಬಿಕೆಯಲ್ಲಿ ದೃಢವಾಗುತ್ತಾ ಸಂಖ್ಯೆಯಲ್ಲಿ ದಿನೇ ದಿನೇ ಹೆಚ್ಚುತ್ತಾ ಬಂದವು.**

ಆಧಿ ಸಭಾಜೀವನದಲ್ಲಿ ನಡೆದ ಕನಿಷ್ಟ ಎರಡು ಉದಾಹರಣೆಗಳಲ್ಲಿ (ಅಪೊಸ್ತಲರು ಕೃತ್ಯಗಳು 6 ಮತ್ತು 15) ತೊಂದರೆಗಳು ಪರಾಂಭರಿಸಿದ್ದನ್ನು ಮತ್ತು ವಿಷಯಗಳು ಕ್ರಮದಲ್ಲಿರಿಸಲ್ಪಟ್ಟಿದ್ದನ್ನು ನಾವು ನೋಡುತ್ತೇವೆ, ಇದು ಸಭೆಯಲ್ಲಿ ಬೆಳವಣಿಗೆ ಮತ್ತು ಹೆಚ್ಚಳದ ಫಲಿತಾಂಶವಾಯಿತು.

ಅಪೊಸ್ತಲರ ಕೃತ್ಯಗಳು 6ನೇ ಅಧ್ಯಾಯದಲ್ಲಿ ನಾವು ಗಮನಿಸುವುದೇನೆಂದರೆ ಆಧಿ ಸಭೆಯಲ್ಲಿ ದಿನನಿತ್ಯದ ಆಹಾರದ ಹಂಚಿಕೆಯಲ್ಲಿ ಉಂಟಾದ ಸಮಸ್ಯೆ ಮತ್ತು ಅದನ್ನು ದೊಡ್ಡದಾಗಿ ಮಾಡಿದ್ದು. ಗ್ರೀಕ ಮಾತನಾಡುವ ಯೆಹೂದ್ಯರು ಮತ್ತು ಇಬ್ರಿಯ ಭಾಷೆ ಮಾತನಾಡುವ ಯೆಹೂದ್ಯರು ಪರಸ್ಪರ ಜಗಳದಲ್ಲಿ ನಿರತರಾಗಿದ್ದರು. ಇದನ್ನು ಕ್ರಮಪಡಿಸುವುದಕ್ಕಾಗಿ 7 ಜನರನ್ನು ನೇಮಕ ಮಾಡಲಾಯಿತು. ಅಪೊಸ್ತಲರ ಕೃತ್ಯಗಳು 6,7 ಅಧ್ಯಾಯಗಳಲ್ಲಿ ಈ ಕುರಿತು ತಕ್ಷಣದ ದಿಢೀರ್ ಪರಿಹಾರವನ್ನು ಸೂಚಿಸುತ್ತದೆ. ಯೆರೂಸಲೇಮಿನ ಸಭೆ ಬೆಳೆದು ದೊಡ್ಡದಾಗುವುದಕ್ಕೆ ಅನೇಕ ಕಾರಣಗಳು ಮತ್ತೆ ಬೇರೆ ಬೇರೆ ಸಂಗತಿಗಳ ಫಲಿತಾಂಶವೂ ಕಾರಣವಾಗಿತ್ತು ಈ ಸಂಗತಿಗಳಲ್ಲಿ ಸಮಸ್ತವನ್ನು ಕ್ರಮಪಡಿಸುವುದೂ ಕೂಡ ಒಂದಾಗಿದೆ.

ಅಪೊಸ್ತಲರ ಕೃತ್ಯದಲ್ಲಿ 15ರಲ್ಲಿ ನಾವು ಓದುವಂತೆ ಹೊಸ ವಿಶ್ವಾಸಿಗಳಿಗೆ ಸುನ್ನತಿ ಮಾಡುವ ವಿಷಯದಲ್ಲಿ ಕೂಡಾ ಜಗಳ ಮತ್ತು ಭಿನ್ನಾಭಿಪ್ರಾಯ ಉಂಟಾಗಿತ್ತು. ಯೆರೂಸಲೇಮಿನಲ್ಲಿ ಕೂಡಿಬಂದ ಮಂಡಳಿ ಈ ವಿಷಯವಾಗಿ ನಿರ್ಣಾಯಕ ತೀರ್ಮಾನವನ್ನು ನೀಡಿ, ಕ್ರಮ ಬದ್ಧತೆಗೂ ಪ್ರಯತ್ನಿಸಿ, ನಂತರದ ಎಲ್ಲಾ

ವಿರೋಧಭಾಸಗಳನ್ನು ಸರಿಪಡಿಸಿತು. ಈ ಕ್ರಮ ಸಭೆಯನ್ನು ಬಲಗೊಳಿಸಿದ್ದು ಮಾತ್ರವಲ್ಲದೆ ಸಂಖ್ಯೆಯಲ್ಲಿಯೂ ಸಹ ಹೆಚ್ಚಳವಾಗುವಂತೆ ಮಾಡಿತು.

## ಐಕ್ಯತೆಯ ಮೌಲ್ಯಗಳು

ಕೀರ್ತನೆಗಳು 133:1-3

**ಆಹಾ, ಸಹೋದರರು ಒಂದಾಗಿರುವುದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು; ಅದು ಅರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಗಳ ಕೊರಳಪಟ್ಟಿಯವರೆಗೂ ಹರಿದುಬರುವ ಶ್ರೇಷ್ಠ ತೈಲದಂತೆಯೂ ಹೆರ್ಮೋನ್ ಪರ್ವತದಲ್ಲಿ ಹುಟ್ಟಿ ಚೀಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ, ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ.**

ಮಾರ್ಕ 3:24, 25

**ಒಂದು ರಾಜ್ಯದಲ್ಲಿ ಭೇದ ಹುಟ್ಟಿದರೆ ಆ ರಾಜ್ಯವು ಉಳಿಯಬಾರದು; ಒಂದು ಮನೆಯಲ್ಲಿ ಭೇದ ಹುಟ್ಟಿದರೆ ಆ ಮನೆಯು ನಿಲ್ಲಲಾರದು.**

ದೈವಿಕ ಕ್ರಮದ ಮೂಲ ವಸ್ತುಗಳು ಐಕ್ಯತೆ, ಸೌಹಾರ್ದತೆ ಮತ್ತು ಶಾಂತಿ. ಇದು ಸ್ಥಳೀಯ ಸಭೆಗಳು, ಸೇವಕರು, ಸೇವೆ ಮತ್ತು ವಿಶ್ವಾಸಿಗಳು ಸೌಹಾರ್ದತೆಯಿಂದ ಹಾಗೂ ಸರಿಯಾದ ಅರ್ಥೈಸುವಿಕೆಯಿಂದ ಒಟ್ಟುಗೂಡಿ ಕೆಲಸ ಮಾಡುವಂತೆ ಚೈತನ್ಯಗೊಳಿಸುತ್ತದೆ.

ಐಕ್ಯತೆಯು ಅಭಿಷೇಕಿಸುವುದರಲ್ಲಿ, ಬಲಗೊಳಿಸುವುದರಲ್ಲಿ ಮತ್ತು ಆಶೀರ್ವಾದಗಳನ್ನು ತರುವುದರಲ್ಲಿ ಪೂರ್ಣ ಪ್ರಮಾಣದ ಫಲಿತಾಂಶ ನೀಡುತ್ತೇವೆ.

ಯಾವಾಗ ಪಟ್ಟಣದ ವ್ಯಾಪ್ತಿಯ ಸಭೆಯು ಬಲಹೊಂದಿ ಅಭಿಷೇಕಗೊಂಡು ಮತ್ತು ಕರ್ತನಿಗಾಗಿ ಆಶೀರ್ವದಿಸಲ್ಪಡುತ್ತದೋ ಆಗ ದೇವರ ರಾಜ್ಯಕ್ಕೋಸ್ಕರ ಪಟ್ಟಣವನ್ನು ಗೆದ್ದುಕೊಳ್ಳುವ ಮತ್ತು ಕರ್ತನನ್ನು ಮಹಿಮೆಪಡಿಸುವ ನಮ್ಮ ಸಾಮಾನ್ಯವಾದ ವಸ್ತುನಿಷ್ಠ ಉದ್ದೇಶದಿಂದ ಯಾವ ಸಂಗತಿಗಳೂ ನಮ್ಮನ್ನು ಬೇರೆ ಮಾಡಿ ನಮ್ಮನ್ನು ಕದಲಿಸಲಾರವು.

ಪಾಲಕರೂ ಮತ್ತು ದೇವರ ಸೇವಕರು ಇಡೀ ಪಟ್ಟಣ ವ್ಯಾಪ್ತಿಯ ಸಭೆಗಳನ್ನು ಐಕ್ಯತೆಯಲ್ಲಿ ಮುನ್ನಡೆಸುವ ಆಶ್ಚರ್ಯಕರವಾದ ಅವಕಾಶಗಳನ್ನು ಪಡೆದಿರುತ್ತಾರೆ. ಬಹುಪಾಲು ವಿಶ್ವಾಸಿಗಳು ತಮ್ಮ ಸ್ಥಳೀಯ ಸಭೆಯಿಂದಾಚೆ ಕಾಣಬಹುದಾದ

ದರ್ಶನವನ್ನು ನೋಡುವುದಿಲ್ಲ. ಆದರೆ ಸಭಾಪಾಲಕರಾದ ನಾವು ನಮ್ಮ ಸ್ಥಳೀಯ ಸಭೆಯವರನ್ನು ಇಂತಹ ಒಂದು ದೂರ ದೃಷ್ಟಿಯ ದರ್ಶನವನ್ನು ಸಭೆಯಲ್ಲಿ ನಿರೀಕ್ಷಿಸಬಹುದಾಗಿದೆ ಮತ್ತು ಪಟ್ಟಣ ವ್ಯಾಪ್ತಿಯ ಸಭೆಗಳು ಬಲಗೊಳ್ಳುವುದನ್ನು ಕಾಣಬಹುದಾಗಿದೆ. ಹಾಗೆಯೇ ಸ್ಥಳೀಯ ಸಭೆಯ ವಿಶ್ವಾಸಿಗಳು ಮನಬಿಚ್ಚಿ ಒಬ್ಬರನ್ನೊಬ್ಬರು ಪರಸ್ಪರ ಹಂಚಿಕೊಳ್ಳುತ್ತಾ ಬಾಳುವುದನ್ನೂ ಮತ್ತು ಪ್ರೀತಿಯಿಂದ ಒಡನಾಟದಿಂದ ಪರಸ್ಪರ ಸೇವೆ ಸಲ್ಲಿಸುವುದನ್ನು ಪ್ರೋತ್ಸಾಹಿಸಬಹುದಾಗಿದೆ.

## ಶಾಂತಿಯ ಕರಾರು

ಎಫೆಸದವರಿಗೆ 4:1-3

**ನೀವು ದೇವರಿಂದ ಕರೆಯಲ್ಪಟ್ಟವರಾದ ಕಾರಣ ಯೋಗ್ಯರಾಗಿ ನಡೆದುಕೊಳ್ಳಬೇಕೆಂದು ಕರ್ತನ ಸೇವೆಯಲ್ಲಿ ಸೆರೆಯವನಾದ ನಾನು ನಿಮ್ಮನ್ನು ಪ್ರಬೋಧಿಸುತ್ತೇನೆ. ನೀವು ಪೂರ್ಣ ವಿನಯ ಸಾತ್ವಿಕತ್ವಗಳಿಂದಲೂ ದೀರ್ಘಶಾಂತಿಯಿಂದಲೂ ಕೂಡಿದವರಾಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ. ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಆಸಕ್ತರಾಗಿರಿ.**

ನಾವು ಪೂರ್ಣ ವಿನಯ, ಸಾತ್ವಿಕತ್ವಗಳಿಂದಲೂ ತಾಳ್ಮೆಯಿಂದಲೂ ಕೂಡಿದವರಾಗಿ ಪ್ರೀತಿಯಿಂದ ಒಬ್ಬನ್ನೊಬ್ಬರು ಸಹಿಸಿಕೊಳ್ಳುವುದಕ್ಕಾಗಿ ಕರೆಯಲ್ಪಟ್ಟಿದ್ದೇವೆ. ಆದ್ದರಿಂದ ಆತನು ನೀಡುವ ಶಾಂತಿಯನ್ನು ಹೊಂದಿಕೊಳ್ಳಲು ಪ್ರತಿಯೊಬ್ಬರೊಂದಿಗೂ ಐಕ್ಯತೆಯನ್ನು ಕಾಪಾಡಿಕೊಳ್ಳಲು ಸರ್ವ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ.

ಇದರ ಭಾಗವಾಗಿಯೋ ಎಂಬಂತೆ ದೈವಿಕ ಕ್ರಮವನ್ನನುಸರಿಸಿ ನಡೆಯಬೇಕು ಹಾಗೂ ಪ್ರತಿಯೊಂದನ್ನು ಗೌರವಯುತವಾಗಿ ಮತ್ತು ಕ್ರಮಬದ್ಧವಾಗಿ ನಡೆಸಬೇಕೆಂಬುದನ್ನು ನಾನು ನಂಬುತ್ತೇನೆ.

ನಾವು ನಮ್ಮ ಕ್ರಿಸ್ತೀಯ ನಂಬಿಕೆಯ ಮೂಲಾಂಶಗಳನ್ನು ಆಧಾರದ ಮೇಲೆ ಒಪ್ಪಿಕೊಂಡಿರುವಾಗಿ ತತ್ವಸಿದ್ಧಾಂತದ ಯಾವುದೇ ವ್ಯತ್ಯಾಸಗಳು ನಮ್ಮಲ್ಲಿ ಯಾವುದೇ ಭೇದಗಳನ್ನು, ಭಿನ್ನಾಭಿಪ್ರಾಯಗಳನ್ನು ಹುಟ್ಟಿಸುವುದಕ್ಕೆ ಕಾರಣವಾಗಲಾರದ ನಮ್ಮಲ್ಲಿ ಅನೇಕರು ಆಗಿಂದಾಗ್ಗೆ ಪ್ರಯೋಗಿಸುವ ವಾಕ್ಯಗಳು ''ಅವಶ್ಯಕತೆಗಳಲ್ಲಿ ಒಂದಾಗುವುದು ಮತ್ತು ಅನಾವಶ್ಯಕತೆಗಳಲ್ಲಿ ಸ್ವಾತಂತ್ರ''ರಾಗಿರುವುದು. ಆದರೂ ಅನೇಕ ಸಂದರ್ಭಗಳಲ್ಲಿ ಅನಾವಶ್ಯಕತೆಗಳಿಗಾಗಿ ನಾವು ಒಂದುಗೂಡಿ ಹೋರಾಡುತ್ತೇವೆ.

ಎಲ್ಲಾ ಸೇವಕರೂ ಮತ್ತು ವಿಶ್ವಾಸಿಗಳೂ ಕ್ರಿಸ್ತನ ಸುವಾರ್ತೆಯಿಂದ ದೊರೆಯುವ ಪೂರ್ಣಾಶೀರ್ವಾದಗಳನ್ನು ಅನುಭವಿಸಬೇಕೆಂಬುದು ಮತ್ತು ಆತ್ಮನ ಶಕ್ತಿಯನ್ನು ಪೂರ್ಣವಾಗಿ ಮತ್ತು ಅನುಭವಪೂರ್ವಕವಾಗಿಯೇ ಹೊಂದಿಕೊಳ್ಳಬೇಕೆಂದು ನಮ್ಮೆಲ್ಲರ ಇಚ್ಛೆಯಾಗಿದೆ. ಆತ್ಮನ ಮೂಲಕ ಸಾಕ್ಷ್ಯಾಧಾರಗಳಿಂದ ಲಭ್ಯವಾಗುವ ವೈಯಕ್ತಿಕ ಸ್ಥಾನ ಮಾನಗಳು, ದೈವಿಕ ಸ್ವಸ್ಥತೆ, ಆರಾಧನಾ ಕ್ರಮದೊಡನೆ ಆರಾಧಿಸುವ ಸಹಸೇವಕ ಸ್ತುತಿಸ್ತೋತ್ರದ ಆರಾಧನೆಯಲ್ಲಿ ಚಪ್ಪಾಳೆ ಹೊಡೆಯದಿದ್ದರೂ, ಹರ್ಷಿಸದಿದ್ದರೂ, ಬೇರೆ ಬೇರೆ ಭಾಷೆಗಳನ್ನಾಡದಿದ್ದರೂ, ಪ್ರವಾದಿಸದಿದ್ದರೂ, ವಾಣಿಗಳನ್ನಾಡದಿದ್ದರೂ ಮತ್ತು ದೆವ್ವಗಳನ್ನು ಓಡಿಸದಿದ್ದರೂ ಚಿಂತೆಯಿಲ್ಲ. ಆದರೆ ಕರ್ತನಾದ ಯೇಸುವನ್ನು ನಿಜವಾಗಿ ಪ್ರೀತಿಸುವರೂ ಮತ್ತು ಅವರಿರುವ ಪಟ್ಟಣದಲ್ಲಿ ಕ್ರಿಸ್ತನ್ನನು ಮಹಿಮೆಪಡಿಸುವವರೂ ಆಗಿದ್ದರೆ ಅಷ್ಟೇ ಸಾಕು. ನಾವು ಪರಸ್ಪರ ಪ್ರೀತಿಯಲ್ಲಿಯೂ ಅನ್ಯೋನ್ಯತೆಯಲ್ಲಿಯೂ ಮುಂದುವರಿಯಬಹುದು.

## ಮೇರೆಗಳಿವೆ ಆದರೂ ಸರ್ವ ಸಂಪೂರ್ಣ ಸ್ವತಂತ್ರ

2 ಕೊರಿಂಥದವರಿಗೆ 3:17

**ಆ ಕರ್ತನು ದೇವರಾತ್ಮನೇ; ಕರ್ತನ ಆತ್ಮನು ಯಾರಲ್ಲಿದಾನೋ ಅವರಿಗೆ ಬಿಡುಗಡೆ ಉಂಟು.**

ಗೌರವಯುತವಾಗಿ ಕಾರ್ಯ ನಿರ್ವಹಿಸಲು ಮತ್ತು ಇವುಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಒಂದು ಕ್ರಮ ಅವಶ್ಯಕ.

- ನಾವು ದಾಟಲೇಬಾರದ ಮೇರೆಗಳಿವೆ.
- ನಾವು ಗೌರವಿಸಲೇಬೇಕಾದ ಆತ್ಮಿಕ ಅಧಿಕಾರವಿದೆ.
- ಕಾರ್ಯಗಳನ್ನು ನಿರ್ವಹಿಸಲು ನಮಗೆ ಸರಿಯಾದ ಮಾರ್ಗವಿದೆ.
- ನಾವು ಪ್ರತಿಯೊಂದು ವಿಷಯದಲ್ಲಿಯೂ ಲೆಕ್ಕ ಕೊಡಬೇಕಾದವರಾಗಿದ್ದು ಅದನ್ನು ನಿರ್ವಹಿಸಬೇಕಾಗಿದೆ.

ಆದರೂ ಇವೆಲ್ಲವುಗಳ ಮಧ್ಯದಲ್ಲಿ ದೇವರಾತ್ಮನು ಕೊಡುವ ಬಿಡುಗಡೆ ಮತ್ತು ಸ್ವಾತಂತ್ರ್ಯಕ್ಕೂ ನೆಲೆ ಇರುತ್ತದೆ. ಪ್ರತಿಯೊಬ್ಬ ವಿಶ್ವಾಸಿಯು ಸ್ಥಳೀಯ ಸಭೆಯನ್ನು ಮತ್ತು ಪಟ್ಟಣವ್ಯಾಪ್ತಿಯ ಸಭೆಯನ್ನು ತನ್ನ ಗೌರವಯುತವಾದ ಮತ್ತು ಕ್ರಮಬದ್ಧವಾದ ಕಾರ್ಯಗಳಿಂದ, ದೇವರ ಕರೆಗೂ ಮತ್ತು ಆತನ ಉದ್ದೇಶಕ್ಕೂ ಅನುಗುಣವಾಗಿ ಕಟ್ಟುವುದರಲ್ಲಿಯೂ ಆ ಮೂಲಕ ಬೆಳೆಯುವುದರಲ್ಲಿಯೂ ಮತ್ತು

ಅಭಿವೃದ್ಧಿ ಹೊಂದುವುದರಲ್ಲಿಯೂ ಪೂರ್ಣ ಪ್ರಮಾಣದ ಸ್ವಾತಂತ್ರ್ಯ ಹೊಂದಿದವನಾಗಿರುತ್ತಾನೆ.

## ಸಭೆಗಳ ಮಧ್ಯೆ ಸಂಪರ್ಕ ಸೇತುವೆ ನಿರ್ಮಾಣ

ಪಟ್ಟಣದ ವ್ಯಾಪ್ತಿಯ ಸಭೆಗಳನ್ನು ಒಂದುಗೂಡಿಸಿ, ನಗರದಲ್ಲಿ ಅದನ್ನು ಒಂದು ಬಲಯುತವಾದ ಶಕ್ತಿಯನ್ನಾಗಿ ಸಂಪರ್ಕಿಸಿ ರೂಪಿಸಲು ಎಲ್ಲಾ ಸಭೆಗಳ ನಡುವೆ ಸಂಪರ್ಕ ಸೇತುವೆಗಳನ್ನು ಸಮರ್ಥವಾಗಿ ನಿರ್ಮಿಸುವುದು ಅಗತ್ಯ.

ಸಂಪರ್ಕ ಸೇತುವೆಗಳನ್ನು ಬಹು ಸುಲಭವಾದ ಮಾರ್ಗದಲ್ಲಿ ನಿರ್ಮಿಸಬಹುದು. ಪಾಲಕರು ಮತ್ತು ಇತರೆ ದೇವರ ಸೇವಕರು ಪರಸ್ಪರ ಒಡನಾಟದಲ್ಲಿ ಮತ್ತು ಅನ್ಯೋನ್ಯತೆಯಲ್ಲಿ ನಿರತರಾದರೆ ಅದೇ ಸಭೆಗಳನ್ನು ಬಲಪಡಿಸುವ ಅದ್ಭುತವಾದ ಒಂದು ಸಂಪರ್ಕ ಸೇತುವೆಯಾಗುತ್ತದೆ. ಅದರಲ್ಲಿಯೂ ನಗರ ಇಲ್ಲವೇ ಪಟ್ಟಣಗಳ ವ್ಯಾಪ್ತಿಯ ಪಾಲಕರುಗಳಿಗಂತೂ ಇತರರೊಂದಿಗೆ ಬಲವಾದ ಅನ್ಯೋನ್ಯತೆಯನ್ನು ನಿರ್ಮಾಣ ಮಾಡುವ ಹಂಗು ಬಹಳವಾಗಿದೆ. ಒಂದು ವೇಳೆ ಪರಸ್ಪರ ಸ್ನೇಹಪರರಾದ ಇಬ್ಬರು ಸಭಾಪಾಲಕರು ಒಂದುಗೂಡಿನಲ್ಲಿ ಅವರುಗಳು ಸ್ನೇಹ ಬಾಂಧವ್ಯಗಳನ್ನು ಬೆಳೆಸುವವರಾಗಿದ್ದು ಸಾಮಾಜಿಕ, ಪಂಗಡದ, ಭೇದಗಳು, ಭಾಷಾ ಭೇದಗಳು ಮತ್ತು ಸಾಂಸ್ಕೃತಿಕ ವರ್ಗೀಕರಣಗಳ ಎಲ್ಲಾ ಅಡೆತಡೆಗಳನ್ನು ಮೀರಿ ನಿಲ್ಲಬಲ್ಲ ಅನ್ಯೋನ್ಯತೆಯ ಸಂಪರ್ಕ ಸೇತುವೆಯನ್ನು ನಿರ್ಮಿಸಲು ಅವರಿಂದ ಖಂಡಿತವಾಗಿಯೂ ಸಾಧ್ಯವಾಗುತ್ತದೆ.

ಇತರೆ ಸಭೆಗಳ ವಿಶ್ವಾಸಿಗಳು ಒಂದುಗೂಡಿ ಆಗಾಗ್ಗೆ ಪರಸ್ಪರ ಹಂಚಿಕೊಳ್ಳುವಿಕೆ ಮತ್ತು ಅನ್ಯೋನ್ಯತೆಗಳಲ್ಲಿ ಭಾಗಿಯಾಗುವಂತೆ ಕೂಟಗಳನ್ನು ಏರ್ಪಡಿಸಿ ಪ್ರೋತ್ಸಾಹಿಸುವುದೂ ಸಹ ಸಕ್ರಿಯವಾದ ಬಲಿಷ್ಟ ಸಂಪರ್ಕ ಸೇತುವೆಯಾಗಿರುತ್ತದೆ. ವಿಶ್ವಾಸಿಗಳು ಈ ರೀತಿ ಪರಸ್ಪರ ಅನ್ಯೋನ್ಯತೆಯಲ್ಲಿ ಒಂದುಗೂಡುವುದು, ಐಕ್ಯತಾ ಮನೋಭಾವದ, ಸಾಮರಸ್ಯವನ್ನು ಹೆಚ್ಚಿಸುವುದಕ್ಕೆ ವಿನಹ ಇತರೇ ಸಭೆಗಳಿಂದ ವಿಶ್ವಾಸಿಗಳನ್ನು ಸೆಳೆದುಕೊಂಡು ತಮ್ಮ ಸಭೆಗೆ ಸೇರಿಸಿಕೊಳ್ಳುವುದಕ್ಕಲ್ಲ.

## ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದು ಮತ್ತು ಅಶಕ್ತರನ್ನು ಬಲಪಡಿಸುವುದು

ಮತ್ತಾಯ 5:23-24

**ಆದಕಾರಣ ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಹತ್ತಿರಕ್ಕೆ ತಂದಾಗ ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವಿದೆ ಎಂಬುದು ನಿನ್ನ ನೆನಪಿಗೆ ಬಂದರೆ, ನಿನ್ನ ಕಾಣಿಕೆಯನ್ನು**

**ಆಯಜ್ಞವೇದಿಯ ಮುಂದೆಯೇ ಬಿಟ್ಟುಹೋಗಿ ಮೊದಲು ನಿನ್ನ ಸಹೋದರನ ಸಂಗಡ ಒಂದಾಗು; ಆ ಮೇಲೆ ಬಂದು ನಿನ್ನ ಕಾಣಿಕೆಯನ್ನು ಕೊಡು.**

ಗಲಾತ್ಯದವರಿಗೆ 6:1

**ಸಹೋದರರೇ ನಿಮ್ಮಲ್ಲಿ ಯಾರಾದರೂ ಯಾವುದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡೆಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ. ನೀನಾದರೂ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು.**

ಪಟ್ಟಣ ವ್ಯಾಪ್ತಿಯ ವಿವಿಧ ಸ್ಥಳೀಯ ಸಭೆಗಳಲ್ಲಿ ಪಾಲಕರು, ಸೇವಕರು ಮತ್ತು ವಿಶ್ವಾಸಿಗಳ ನಡುವೆ ಅನಿವಾರ್ಯವಾಗಿ ಭಿನ್ನಾಭಿಪ್ರಾಯಗಳು ಮೂಡುವ ಸಾಧ್ಯತೆಗಳಿರುತ್ತವೆ. ಅಂತಹ ಸಂದರ್ಭಗಳಲ್ಲಿ ನಗರದ ಆತ್ಮಿಕವಾಗಿ ಉನ್ನತ ಮಟ್ಟದಲ್ಲಿನ ಸಭೆಗಳ ಪಾಲಕರು/ಸೇವಕರುಗಳು ಮುಂದಾಳತ್ವವಹಿಸಿ ಈ ಗುಂಪುಗಳ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿ ಅವಶ್ಯಕವಾದ ಕಟ್ಟುಪ್ಪಣೆಗಳನ್ನು ಸಾಧ್ಯವಾದಲ್ಲಿ ವಿಧಿಸಿ ಸಮಾಧಾನ ಮತ್ತು ಸಂತೋಷವು ಅಲ್ಲಿ ನೆಲೆಗೊಳ್ಳುವಂತೆ ಕಾರ್ಯ ನಿರ್ವಹಿಸಬೇಕು.

ಅನೇಕ ವೇಳೆ ಪಾಲಕರಿಗೂ ಮತ್ತು ಸೇವಕರಿಗೂ ಸಹ ಈ ರೀತಿಯ ಮುಂದಾಲೋಚನೆಯ, ಸಲಹೆಯಿಂದ ಕೂಡಿದ ಪ್ರೋತ್ಸಾಹ ಮತ್ತು ಬಲ ಹೊಂದುವಿಕೆ ಅವಶ್ಯಕವಾಗಿರುತ್ತದೆ. ಆಗ ಅನುಭವಿಗಳೂ ಮತ್ತು ಹಿರಿಯರೂ ಆದ ಸೇವಕರುಗಳು ತಮಗಿಂತ ಕಿರಿಯರಾದ ಪಾಲಕ ಹಾಗೂ ಸೇವಾ ವರ್ಗಕ್ಕೆ ಸಹಾಯ ಒದಗಿಸಿಕೊಟ್ಟು ಮುನ್ನಡೆಸಬೇಕಾಗಿರುತ್ತದೆ.

ಒಂದು ವೇಳೆ ಯಾರಾದರೂ ಸಹೋದ್ಯೋಗಿಯಾದ ಪಾಲಕ ಇಲ್ಲವೇ ಸೇವಕ ತಪ್ಪಿತಸ್ಥನಾಗಿ ಕಂಡು ಬಂದಲ್ಲಿ ಗಲಾತ್ಯ 6:1 ಈ ನಿಯಮವನ್ನು ಅಳವಡಿಸಬೇಕಾಗುತ್ತದೆ. ಅಶಕ್ತನಾದ ಆ ನಿರ್ದಿಷ್ಟ ಸಹೋದರ ದೇವರ ಸೇವಕನನ್ನು ನಾಶಮಾಡಲು ಪ್ರಯತ್ನಿಸದೆ ತಮ್ಮ ಹಿರಿತನ ಮತ್ತು ಅನುಭವಗಳಿಂದ ಮುಂದಾಗಿ ಆತನಲ್ಲಿ ಸ್ವಸ್ಥತೆ ಮತ್ತು ಸಮಾಧಾನವನ್ನು ಸ್ಥಾಪಿಸಲು ಪ್ರಯತ್ನಿಸಬೇಕಾಗುತ್ತದೆ.

## ಪಟ್ಟಣ ವ್ಯಾಪ್ತಿಯ ಸಭೆಗಳನ್ನು ಪೋಷಿಸುವುದು

ಪಾಲಕರು, ಸೇವಕರು, ಸಭೆಗಳು, ಸೇವಾ ನಿಯೋಗಗಳು ಮತ್ತು ವಿಶ್ವಾಸಿಗಳು ಎಲ್ಲರೂ ಒಂದುಗೂಡಿ ಪಟ್ಟಣ ವ್ಯಾಪ್ತಿಯ ಸಭೆಗಳನ್ನು ಪೋಷಿಸುವ ಅಗತ್ಯವಿದೆ.

- ಇದಕ್ಕಾಗಿ ನಾವು ದೈವಿಕ ಕ್ರಮವನ್ನು ಅನುಸರಿಸಬೇಕು.
- ಈ ವಿಷಯದಲ್ಲಿ ಇತರರ ಅವಶ್ಯಕತೆ ಹಾಗೂ ಅಗತ್ಯತೆಗಳ ಬಗ್ಗೆ ನಾವು ಹೆಚ್ಚು ಸೂಕ್ಷ್ಮ ಪ್ರಜ್ಞಾಯುಳ್ಳವರಾಗಿದ್ದು ಕ್ರಿಸ್ತನ ಶರೀರವೆಂಬ ಸಭೆಯಲ್ಲಿ ನಮ್ಮಿಂದ ಯಾವ ಭೇದಗಳೂ ಮತ್ತು ಜಗಳಗಳೂ ಉಂಟಾಗದಂತೆ ಎಚ್ಚರಿಕೆವಹಿಸಬೇಕಾಗಿರುತ್ತದೆ.
- ವಿಶ್ವಾಸಿಗಳ ಶರೀರವೋ ಎಂಬಂತಿರುವ ನಗರದ ಎಲ್ಲಾ ಸಭೆಗಳ ಐಕ್ಯತೆಗೋಸ್ಕರ ನಾವು ಪ್ರಾರ್ಥಿಸುವವರಾಗಿದ್ದೇವೆ.
- ಪ್ರೋತ್ಸಾಹಿಸುವುದರ ಮೂಲಕ ಮತ್ತು ಪ್ರತಿಯೊಬ್ಬರೂ ಹರ್ಷ ಚಿತ್ತರಾಗಿರುವಂತೆ ಪ್ರಯತ್ನಿಸುವುದರ ಮೂಲಕ ಪಟ್ಟಣ ವ್ಯಾಪ್ತಿಯ ಸಭೆಗಳ ಜೀವನದಲ್ಲಿ ನಾವು ನಿತ್ಯ ಭಾಗಿಗಳಾಗುತ್ತೇವೆ.
- ಜಗಳಗಳು, ಇತರರನ್ನು ನೋಯಿಸುವಿಕೆ ಮತ್ತು ಭೇದಗಳು ಉಂಟಾಗುವಾಗ ಅವುಗಳನ್ನು ತಡೆಹಿಡಿಯಲು ನಾವು ಕಾರ್ಯೋನ್ಮುಖರಾಗುತ್ತೇವೆ.
- ಒಬ್ಬರಿಗೊಬ್ಬರು ಸಹಾಯ ನೀಡುವುದರಲ್ಲಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದರಲ್ಲಿ ನಿಶಕ್ತರಾದ ಸಹೋದರರನ್ನು ಪ್ರೋತ್ಸಾಹಿಸಿ, ಬಲ ಪಡಿಸುವುದರಲ್ಲಿ ಮುಂತಾದವುಗಳಲ್ಲಿ ನಾವು ಮುಂದಾಗುತ್ತೇವೆ.

## ದೇವರ ರಾಜ್ಯದ ಭಾವನೆಗಳನ್ನು ಅಭಿವೃದ್ಧಿಗೊಳಿಸುವುದು

ದೇವರ ರಾಜ್ಯದ ಪವಿತ್ರ ನಿರ್ಮಾಣ ಕಾರ್ಯವನ್ನು ಕೇಂದ್ರೀಕರಿಸುತ್ತ ಪಾಲಕರು, ಸಭೆಗಳು, ಸೇವಕರು ಮತ್ತು ಸೇವಅ ನಿಯೋಗಗಳೂ ಹೀಗೆ ನಾವೆಲ್ಲರೂ ಒಂದುಗೂಡಿ ಸ್ವೇಚ್ಛಾ ಪ್ರವೃತ್ತಿ, ಪ್ರತ್ಯೇಕತೆ ಮತ್ತು ವೈಯಕ್ತಿಕತೆ ಎಂಬ ಅಡ್ಡಗೋಡೆಗಳನ್ನು ಕೂಡಲೇ ಕೆಡವಿ ಹಾಕುವ ತೀವ್ರ ಅಗತ್ಯತೆ ಈಗ ಉಂಟಾಗಿದೆ. ಸಭೆಗಳನ್ನೇ ಅಭಿವೃದ್ಧಿಪಡಿಸಿಕೊಳ್ಳುವ ಸಂಕುಚಿತ ಮನೋಭಾವನೆಯನ್ನು ಬಿಟ್ಟು, ನಾವಿರುವ ಪಟ್ಟಣದಲ್ಲಿ ದೇವರ ರಾಜ್ಯವನ್ನು ಅಭಿವೃದ್ಧಿಗೊಳಿಸುವ ಒಂದು ಸಾಮೂಹಿಕ ಪ್ರಯತ್ನಕ್ಕೆ ನಾವು ಮುಂದಾಗಬೇಕು. ಐಕ್ಯತೆ ಎನ್ನುವುದು ಇತರ ಸಭೆಗಳಿಗೆ ತೊಂದರೆಕೊಡದೆ ತಮ್ಮ ಪಾಡಿಗೆ ತಾವು ತಮ್ಮ ಸಭೆಯೊಂದನ್ನೇ ಅಭಿವೃದ್ಧಿಗೊಳಿಸುತ್ತಾ ನಮ್ಮಷ್ಟಕ್ಕೆ ನಾವು ಇರುವುದಲ್ಲ. ಐಕ್ಯತೆ ಎನ್ನವುದು ಪ್ರತಿಯೊಬ್ಬ ಪಾಲಕ, ಪ್ರತಿಯೊಂದು ಸಭೆ, ಪ್ರತಿಯೊಂದು ಸೇವಾ ನಿಯೋಗ ಹೀಗೆ ಒಂದೊಂದು ಅಂಗವೂ ತಾವಿರುವ ಪಟ್ಟಣದಲ್ಲಿ ದೇವರ ರಾಜ್ಯವು ಸ್ಥಾಪನೆಯಾಗುವುದನ್ನು ಕಾಣಬೇಕೆಂಬ

ಸದುದ್ದೇಶದಿಂದ ಕೂಡಿದ ಹಂಬಲ ಹೊಂದಿರಬೇಕು ಮತ್ತು ಅದನ್ನು ನೋಡುವುದಕ್ಕಾಗಿ ಪರಸ್ಪರ ಸಕ್ರಿಯವಾಗಿ ಸಹ ಕೆಲಸದವರ ಹಾಗೆ ವರ್ತಿಸಬೇಕು. ನಮ್ಮಲ್ಲಿ ಪ್ರತಿಯೊಬ್ಬರ ಹೃದಯದ ಭಾರವು ಮತ್ತು ಅದರ ಕೇಂದ್ರಿಕೃತ ದೃಷ್ಟಿಯು ನಾವಿರುವ ಪಟ್ಟಣ ಕ್ರಿಸ್ತನ ಸುವಾರ್ತೆಯಿಂದ ರೂಪಾಂತರಗೊಳ್ಳಬೇಕೆಂಬ ಮಹಾದಾಶೆ ಹೊಂದಿರಬೇಕೇ ಹೊರತು ಕೇವಲ ನಮ್ಮ ಸ್ವಂತ ವೈಯಕ್ತಿಕ ಸಭೆ, ತನ್ನ ಸ್ವಂತ ಸೇವಾ ನಿಯೋಗದಲ್ಲಿ ಅಭಿವೃದ್ಧಿ ಮತ್ತು ಬೆಳವಣಿಗೆ ಹೊಂದಲಿ, ಹೊಂದಿದ್ದರೆ ಸಾಕು ಎಂಬ ಬಯಕೆ ನಮ್ಮಲ್ಲಿರಬಾರದು, ಪ್ರತಿಯೊಬ್ಬ ದೇವರ ಸೇವಕನೂ ತನ್ನದೇ ಆದ ಸಭೆಯನ್ನು ಮತ್ತು ಸೇವಾ ನಿಯೋಗವನ್ನು ಪ್ರಾರಂಭಿಸಿದಾಗ ಅದು ಜಾಗೃತವಾಗಿ ದೇವರ ರಾಜ್ಯ ಕಟ್ಟುವಿಕೆಯಲ್ಲಿ ಅವಿಭಾಜ್ಯ ಅಂಗವಾಗಿರುತ್ತದೆ ಮತ್ತು ಆ ಮೂಲಕ ನಾವೆಲ್ಲರೂ ಉನ್ನತ ಸಭಾ ಐಕ್ಯತೆಯಲ್ಲಿ ಸೇರಿಕೊಳ್ಳುವವರಾಗಿದ್ದೇವೆ ಎಂಬುದನ್ನು ಮರೆಯಬಾರದು. ಪ್ರತಿ ಸಭೆಯು ಮತ್ತು ಸೇವಾ ನಿಯೋಗದ ಬೆಳವಣಿಗೆಯು ವಾಸ್ತವವಾಗಿ ದೇವರ ರಾಜ್ಯದ ಬೆಳವಣಿಗೆಯಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ನಾವಿರುವ ಪಟ್ಟಣ ವ್ಯಾಪ್ತಿಯ ಸಭಾಜೀವನದಲ್ಲಿ ದೃಢವಾದ ಅಸ್ತಿವಾರಗಳನ್ನು ಹಾಕಿ ನಮ್ಮನ್ನು ಬಲಪಡಿಸಬಲ್ಲ ಅಪೊಸ್ತಲರ ಪ್ರವಾದಿಗಳ ತರಹದ ಸಮರ್ಥ ನಾಯಕರು ನಮಗೆ ಬಹಳ ಅವಶ್ಯಕತೆಯಿದೆ. ಇವರುಗಳು ಇಡೀ ಪಟ್ಟಣವ್ಯಾಪ್ತಿಯ ಸಭೆಗಳನ್ನು ಐಕ್ಯತೆಯಲ್ಲಿ ಮತ್ತು ದೇವರ ರಾಜ್ಯದ ಮುನ್ನೋಟದ ಬೆಳವಣಿಗೆಯಲ್ಲಿ ನಡೆಸುವಂಥವರಾಗಿರಬೇಕು. ಇಂತಹ ಅಪೊಸ್ತಲ/ಪ್ರವಾದನಾ ನಾಯಕರಿಗೆ ಎಲ್ಲ ಪಂಗಡಗಳ, ಸಾಮಾಜಿಕ ಸ್ತರಗಳ ಮತ್ತು ಸಾಂಸ್ಕೃತಿಕ ಭಿನ್ನತೆಗಳ ಪ್ರತಿಯೊಂದು ವರ್ಗಭೇದಗಳನ್ನು ಮೀರಿ ಕಾರ್ಯನಿರ್ವಹಿಸಬಲ್ಲ ಹೃದಯ, ಜ್ಞಾನ ಮತ್ತು ಸಮರ್ಥವಾದ ಕಾರ್ಯನಿರ್ವಾಹಕ ಶಕ್ತಿ ಇರಬೇಕಾಗುತ್ತದೆ. ನಾವೆಲ್ಲರೂ ಎಲ್ಲ ಪಂಗಡಗಳ ಭೇದ ಮರೆತು ಪರಸ್ಪರರನ್ನು ಅಂಗೀಕರಿಸಿ, ಗೌರವಿಸಿ, ಅಪೊಸ್ತಲಿಕ/ಪ್ರವಾದನಾ ಯುಕ್ತ ನಾಯಕತ್ವದಲ್ಲಿ ಮುಂದುವರಿಯುವುದು ಅವಶ್ಯಕತವಾಗಿದೆ. ಈ ದಿಶೆಯಲ್ಲಿ ಇಂತಹ ಸಮರ್ಥ ಅಪೊಸ್ತಲಿಕೆ/ಪ್ರವಾದನಾಯುಕ್ತ ನಾಯಕರುಗಳ ಅವಶ್ಯಕತೆ ಬಹಳವಾಗಿದೆ. ಅವರ ನಿರಂತರ ಮಾರ್ಗದರ್ಶನ ಮತ್ತು ಪರಸ್ಪರ ಕಾರ್ಯೋನ್ಮುಖ ಒಡನಾಟ ಲಭ್ಯವಾಗಿ ಯಾವುದೇ ವಿಧವಾದ ಸ್ಪರ್ಧೆ ಮತ್ತು ಜಗಳಗಳಿಲ್ಲದೆ ನಾವಿರುವ ನಗರ ಪಟ್ಟಣ ವ್ಯಾಪ್ತಿಗಳಲ್ಲಿ ದೇವರ ರಾಜ್ಯದ ಭಾವನೆಗಳನ್ನು ಅಭಿವೃದ್ಧಿಗೊಳಿಸುತ್ತಾ ಪವಿತ್ರ ದೇವರ ರಾಜ್ಯದ ಮುನ್ನೋಟದ ಬೆಳವಣಿಗೆಯಲ್ಲಿ ನಾವು ಭಾಗಿಗಳಾಗೋಣ.

**ನಾವೆಲ್ಲರೂ ನಮ್ಮ ಒಡನಾಟದಿಂದ ನಮ್ಮ ಪಟ್ಟಣವನ್ನು ಕರ್ತನಿಗಾಗಿ ಸಮರ್ಪಿಸೋಣ.**

**ದೈವಿಕ ಕ್ರಮ**

- ದೈವಿಕ ಕ್ರಮವು ಹೆಚ್ಚಳವನ್ನು ತರುತ್ತದೆ
- ಐಕ್ಯತೆಯು ಅಭಿಷೇಕ, ಸಾಮರ್ಥ್ಯ ಮತ್ತು ಆಶೀರ್ವಾದದ ಫಲಿತಾಂಶ ನೀಡುತ್ತದೆ.
- ಶಾಂತಿಯ ಕರಾರು ಪಾಲಿಸುವುದು
- ಮೇರೆಗಳೊಳಗೆ, ಆದ್ದಾಗ್ಯೂ ಸಂಪೂರ್ಣ ಸ್ವತಂತ್ರ
- ದೇವರ ರಾಜ್ಯದ ಮನಸ್ಸು ಅಭಿವೃದ್ಧಿಪಡಿಸುವುದು

## ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ಧೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಬಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., No.5
M.G. Road, Bangalore, Karnataka 560 001

ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚಿನ ವಿವರಗಳಿಗಾಗಿ apcwo.org/give ನ್ನು ದಯವಿಟ್ಟು ಸಂಪರ್ಕಿಸಿರಿ.

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಅಸ್ತಿವಾರಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮಿಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ–ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ **(apcwo.org/sermons)** ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ಧೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು "ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ" ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು"** (ಅಪೊಸ್ತಲರ ಕೃತ್ಯ 10:43)

**"ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ"** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, "ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ" ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಟಿಪ್ಪಣಿಗಳು

## DOWNLOAD THE FREE APP!

*Search for*

**"All Peoples Church Bangalore"**
**in the App or Google play stores.**

Available on the App Store

ANDROID APP ON Google play



*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ಕೃಷ್ಟತೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಂದಿಗೆ ಪವಿತ್ರಾತ್ಮನ ಅತ್ಯದ್ಭುತವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣಗಳಿಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿ ಪಡಿಸುವುದನ್ನು ನಾವು ನಂಬುತ್ತೇವೆ.

ಎ.ಪಿ.ಸಿ-ಬಿ.ಸಿ.ಯಲ್ಲಿ, ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ: ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಕರುಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ, ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾಂತ್ಯದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿ.

APC-BC is accredited by the
Nations Association for Theological
Accreditation (NATA).

ಈ ಒಂದು ಪುಸ್ತಕವು ನಗರವ್ಯಾಪ್ತಿ ಸಭೆಗಳಲ್ಲಿ, ವಿಶ್ವಾಸಿಗಳು ಮತ್ತು ಸೇವಕರುಗಳ ಸಭೆಗಳ ಮಧ್ಯದಲ್ಲಿರುವ ದೈವಿಕ ಕ್ರಮದ ಕೊರತೆಯನ್ನು ಬಹಿರಂಗ ಪಡಿಸುತ್ತದೆ. ಯೇಸುಕ್ರಿಸ್ತನ ಒಬ್ಬ ವಿಶ್ವಾಸಿಯಾಗಿ ಅಥವಾ ದೇವರ ಒಬ್ಬ ಸೇವಕನಾಗಿ ನೀವು ಯಾವ ರೀತಿ ನಡೆದುಕೊಳ್ಳುತ್ತೀರಿ ಎಂಬುದರ ಕುರಿತು ಪುನಃ ಆಲೋಚಿಸಲೂ ನೀವು ಸವಾಲು ಹೊಂದುತ್ತೀರಿ. ಈ ಪುಸ್ತಕವು ಹೃದಯದಿಂದ ನೇರವಾದ ಮತ್ತು ತೆರೆದ, ನಿಷ್ಪಕ್ಷಪಾತವುಳ್ಳದ್ದಾಗಿದೆ! ನೀವು ಸತ್ಯವನ್ನು ಎದುರುಗೊಳ್ಳಲೂ ಪ್ರೋತ್ಸಾಹ ಹೊಂದಿದ್ದರೆ ಮತ್ತು ರೂಪಾಂತರಗೊಳ್ಳಲೂ ಚಿತ್ತವಿರುವುದಾದರೆ – ಆ ಮೇಲೆ ಇದನ್ನು ಓದಿರಿ!

ದೇವರ ಜನರು ದೈವಿಕ ಕ್ರಮದಲ್ಲಿ ನಡೆಯಲು ಕಲಿತರೆ ವಿಶ್ವಾಸಿಗಳು, ಸೇವಕರುಗಳು, ಮತ್ತು ಸಭೆಗಳ ಮಧ್ಯದಲ್ಲಿ ಜಗಳಗಳು, ವಿಭಾಗಗಳು ಮತ್ತು ಸ್ಪರ್ಧೆಗಳು ಅತೀ ವಿರಳವಾಗಿರುತ್ತವೆ. ಸ್ಥಳೀಯ ಭೌಗೋಳಿಕ ಎಲ್ಲೆಗಳು ಮತ್ತು ಸಮುದಾಯಗಳು, ನಮ್ಮ ನಗರದಲ್ಲಿನ ವಿಶ್ವಾಸಿಗಳು, ಸಭೆಗಳು ಮತ್ತು ಸೇವಕರುಗಳ ಮಧ್ಯದಲ್ಲಿ ದೈವಿಕ ಕ್ರಮವು ಸ್ಥಾಪಿಸಲ್ಪಟ್ಟಿರುವುದನ್ನು ಪ್ರಾಮಾಣಿಕವಾಗಿ ನೋಡುವ ಅಪೇಕ್ಷೆ ಮತ್ತು ಅಧಿಕವಾದ ಕಾಳಜಿಯಿಂದ ಈ ಪುಸ್ತಕವು ನಿರೂಪಿಸಲ್ಪಟ್ಟಿದೆ. ಚರ್ಚಿಸಲ್ಪಟ್ಟಂತಹ ವಿವಾದಾಂಶಗಳು ನಗರ ವ್ಯಾಪ್ತಿ ಸಭೆಗಳ ದೃಷ್ಟಿಕೋನದಿಂದಾಗಿವೆ. ಆದರೆ ಸಭೆಗಳು, ಸೇವಕರುಗಳು ಸೇವೆಗಳು ಮತ್ತು ವಿಶ್ವಾಸಿಗಳು ಜೊತೆಯಾಗಿರುವ ಮತ್ತು ಜೊತೆ ಕೆಲಸದವರಾಗಿರುವಂತ ಯಾವುದೇ ಎಲ್ಲೆ ಅಥವಾ ನಗರ, ಒಂದು ಸಮುದಾಯವನ್ನು ಸತ್ಯವಾಗಿ ಹಿಡಿದಿಟ್ಟುಕೊಂಡಿರುವಂತದ್ದಾಗಿದೆ.

ಈ ಪುಸ್ತಕದಲ್ಲಿ ನಿರೂಪಿಸಲ್ಪಟ್ಟಂತಹ ಮಾರ್ಗದರ್ಶನಗಳು, ಎಲ್ಲಾ ವಿಷಯಗಳು ಕ್ರಮದಲ್ಲಿ ಮತ್ತು ಯೋಗ್ಯಕರವಾಗಿ ಮಾಡಬೇಕೆಂಬಂತಹ ಒಂದೇ ಏಕ ಮೂಲದಿಂದ ಬಂದಿದೆ. ನಗರವ್ಯಾಪ್ತಿ ಸಭೆ ಮತ್ತು ಯಾವುದೇ ಸಮುದಾಯದಲ್ಲಿನ ಸಭೆಯು ಯೇಸುವು ಯಾವ ರೀತಿ ಇರಬೇಕೆಂಬುದಾಗಿ ಅಪೇಕ್ಷಿಸುವಂತಹ ಬಗೆಯ ಸಭೆಯಾಗಿರುವ, ಆದ್ದರಿಂದ ಎಲ್ಲಾ ವಿಷಯಗಳಲ್ಲಿ ಯೇಸುವು ಮಹಿಮೆ ಹೊಂದುವಂತದ್ದನ್ನು ನೋಡುವುದು ನಮ್ಮ ಅಪೇಕ್ಷೆಯಾಗಿದೆ!

ಆಶಿಶ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org